ಪಾಪಕ್ಕೊಂದು ಚಿಕಿತ್ಸೆ



ಲೇಖಕರು
ಶ್ರೀ ಸುವಿದ್ಯೇಂದ್ರತೀರ್ಥರು
ಬೆ.ನಾ.ವಿಜಯೀಂದ್ರಾಚಾರ್ಯ

ಶ್ರೀಃ

ಋಜುಯೋಗಿ ರಾಜರಿಂದ ಪ್ರಣೀತ
ಪಾಪಗಳಿಗೊಂದೇ ದಾರಿ

ಪಾಪಕ್ಕೊಂದು ಚಿಕಿತ್ಸೆ

ಪಾಪಗಳು ಬದುಕಿನ ರೋಗ
ಗಳೆನಿಸಿವೆ. ಇವುಗಳಿಗೆ ಹರಿಯಪಾದ-
ಗಳಲ್ಲಿ ಶರಣುಹೊಂದುವುದೊಂದೇ ಮದ್ದು.
ಈ ಮದ್ದನ್ನು ತಯಾರಿಸಿದವರು ಯೋಗಿ ಶ್ರೇಷ್ಠರಾದ ಶ್ರೀ
ಶ್ರೀ ವಿಜಯೀಂದ್ರ ತೀರ್ಥರಂತ ಮಹಾ-
ನುಭಾವರು. ಇವರ ನುಡಿಗಳನ್ನು ಮನನಮಾಡಿದರೆ
ಅಪರಿಹಾರ್ಯವಾದ ಸಮಸ್ಯೆಗಳಿಗೂ ಪರಿಹಾರ
ದೊರೆಯುವುದು. ಇವರಿಂದ ಪ್ರಣೀತವಾದ
ಪಾಪವಿಮೋಚನ ಸ್ತೋತ್ರಗಳ
ರೂಪಾಂತರವೇ ಈಗ
ನಿಮ್ಮ ಕೈ ಸೇರಿದೆ.

ಪಾಪಕ್ಕೊಂದು ಚಿಕಿತ್ಸೆ

ಪಾಪವಿಮೋಚನ ಸ್ತೋತ್ರ

(ಪ್ರತಿಪದಾರ್ಥ)

ಅನುವಾದ : ಶ್ರೀ ಶ್ರೀ ಸುವಿದ್ಯೇಂದ್ರತೀರ್ಥ ಶ್ರೀಪಾದರು

(ಇವರ ಕೃಪೆಯಿಂದ ಸಂಗ್ರಹಿಸಲಾಗಿದೆ)

ಸುಕೃತಂ ತಿಲಮಾತ್ರತುಲ್ಯಮೀಶ
ಕ್ರಿಯತೇ ನೈವ ಮಯೈಕವತ್ಸರೇऽಪಿ |
ಅಪಿ ತು ಕ್ರಿಯತೇ ಸದಾಘಪೂಗಃ
ಪ್ರತಿಯಾಮಂ ಸಕಲೇಂದ್ರಿಯೈರ್ಮುಕುಂದ ||೧||

ಹೇ ಈಶ = ಜಗದೊಡೆಯನಾದ ಮುಕುಂದ! = ಮೋಕ್ಷಪ್ರದನನಾದ ಶ್ರೀ ಹರಿಯೇ! ಮಯಾ = ನನ್ನಿಂದ, ಏಕವತ್ಸರೇऽಪಿ = ಒಂದು ವರ್ಷದಲ್ಲಿಯೂ ಕೂಡ, ತಿಲಮಾತ್ರತುಲ್ಯಮಪಿ = ಕೇವಲ ಎಳ್ಳುಕಾಳಿಗೆ ಸಮಾನವಾದಷ್ಟೂ ಕೂಡ ಸುಕೃತಂ = ಪುಣ್ಯವು (ಸತ್ಕರ್ಮವು), ನೈವ ಕ್ರಿಯತೇ = ನಿಶ್ಚಯವಾಗಿಯೂ ಮಾಡಲ್ಪಡುತ್ತಿಲ್ಲ. ಅಪಿ ತು = ಆದರೆ, ಪ್ರತಿಯಾಮಂ = ಪ್ರತಿಯೊಂದು ಯಾಮದಲ್ಲಿಯೂ, ಸದಾ = ಯಾವಾಗಲೂ, ಸಕಲೇಂದ್ರಿಯೈಃ = ಎಲ್ಲ ಇಂದ್ರಿಯಗಳಿಂದಲೂ, ಅಘಪೂಗಃ = ಪಾಪಗಳ ಸಮೂಹವು, ಕ್ರಿಯತೇ = ಮಾಡಲ್ಪಡುತ್ತದೆ.

ನ ಶಿರಶ್ಚಲತೀಶ ಮೇ ಕದಾऽಪಿ
ಶ್ರುತಿಜಾನಂದಭರೇಣ ಸದ್ಗುಣಾನಾಮ್ |
ಅಪಿ ತು ಪ್ರಭುಬಂಧುದುರ್ಗುಣಾನಾಂ
ಶ್ರವಣಾರ್ಥಂ ಚಲಿತಂ ಭವತ್ಯಶಂಕಮ್ ||೨||

ಹೇ ಈಶ! = ಜಗದೊಡೆಯನಾದ ಶ್ರೀ ಹರಿಯೇ!, ಮೇ = ನನ್ನ, ಶಿರಃ = ತಲೆಯು, ಕದಾಪಿ = ಯಾವ ಕಾಲದಲ್ಲಿಯೂ ಕೂಡ, ತೇ = ನಿನ್ನ, ಸದ್ಗುಣಾನಾಂ = ಸದ್ಗುಣಗಳ, ಶ್ರುತಿಜಾನಂದಭರೇಣ-ಶ್ರುತಿ = ಕೇಳುವಿಕೆಯಿಂದ, ಜ = ಉಂಟಾದ, ಆನಂದ = ಸಂತಸದ, ಭರೇಣ = ಭಾರದಿಂದ, ನ ಚಲತಿ = ಚಲಿಸುವುದಿಲ್ಲ. ಅಪಿ ತು = ಆದರೆ, ಪ್ರಭುಬಂಧುದುರ್ಗುಣಾನಾಂ - ಪ್ರಭು = ರಾಜರ, ಹಾಗೂ ಬಂಧು = ಬಂಧುಗಳ, ದುರ್ಗುಣಾನಾಂ = ಕೆಟ್ಟ ಗುಣಗಳ, ಶ್ರವಣಾರ್ಥಂ = ಕೇಳುವಿಕೆಗಾಗಿ, ಅಶಂಕಂ = ಸಂಕೋಚವಿಲ್ಲದೇ, ಚಲಿತಂ ಭವತಿ = ಚಲಿಸುತ್ತದೆ.

ಶ್ರವಣೇ ಶ್ರವಣಾಯ ಸತ್ಕಥಾಯಾ
ನ ಯತೇತೇ ತವ ಪುಣ್ಯಕೀರ್ತನಸ್ಯ |
ಅಪಿ ತು ವ್ಯಭಿಚಾರಲೋಕವಾರ್ತಾ-
ಶ್ರವಣಾಯೈವ ಮಹಾದರಂ ಪ್ರಯಾತಃ ||೩||

ಹೇ ಈಶ! = ಜಗದೊಡೆಯನಾದ ಶ್ರೀಹರಿಯೇ!, ಮೇ = ನನ್ನ, ಶ್ರವಣೇ = ಕಿವಿಗಳು, ಪುಣ್ಯಕೀರ್ತನಸ್ಯ = ಪುಣ್ಯಕರವಾದ ಚರಿತ್ರೆಯುಳ್ಳ, ತವ = ನಿನ್ನ, ಸತ್ಕಥಾಯಾಃ = ಸಮೀಚೀನವಾದ ಕಥೆ ಅಥವಾ ಶಾಸ್ತ್ರದ, ಶ್ರವಣಾಯ = ಶ್ರವಣಕ್ಕೋಸ್ಕರ, ನ ಯತೇತೇ = ಪ್ರಯತ್ನಪಡುವುದಿಲ್ಲ. ಅಪಿತು = ಆದರೆ, ವ್ಯಭಿಚಾರಲೋಕ ವಾರ್ತಾಶ್ರವಣಾಯ ಏವ = ವ್ಯಭಿಚಾರವೇ ಮೊದಲಾದ ಲೌಕಿಕ ವಾರ್ತೆಗಳ ಶ್ರವಣಕ್ಕೇನೇ, ಮಹಾದರಂ = ಅತಿಯಾದ ಆಸಕ್ತಿಯಿಂದ, ಪ್ರಯಾತಃ = ಹೋಗುತ್ತವೆ.

ನ ಮಮಾಕ್ಷಿಯುಗಂ ಪ್ರವರ್ತತೇ
ಶ್ರೀ ಭಗವಚ್ಛಾಸ್ತ್ರಕುಲಾವಲೋಕನಾಯ |
ಅಪಿ ಧ್ರುವಬಾಲನರ್ತಕೀನಾಂ
ಗಣಿಕಾನಾಂ ಪರಿನರ್ತನಾದಿದೃಷ್ಟ್ಯೈ ||೪||

ಹೇ ಈಶ! = ಜಗದೊಡೆಯನೇ!, ಮಮ = ನನ್ನ, ಅಕ್ಷಿಯುಗಂ = ಎರಡು ಕಣ್ಣುಗಳು, ಶ್ರೀ ಭಗವಚ್ಛಾಸ್ತ್ರಕುಲಾವಲೋಕನಾಯ - ಶ್ರೀ = ಐಹಿಕ ಮತ್ತು ಪಾರತ್ರಿಕ ಸಂಪತ್ತಿಗೆ ಕಾರಣವಾದ, ಭಗವತ್ = ಷಡ್ಗುಣೈಶ್ವರ್ಯ ಸಂಪನ್ನನಾದ ಶ್ರೀ ಹರಿಯು (ನಿನ್ನ), ಶಾಸ್ತ್ರ = ಗುಣಗಳನ್ನು ವರ್ಣಿಸುವ ವೇದಾದಿಶಾಸ್ತ್ರಗಳ, ಕುಲ = ಸಮೂಹವನ್ನು, ಅವಲೋಕನಾಯ = ನೋಡುವುದಕ್ಕಾಗಿ, ನ ಪ್ರವರ್ತತೇ = ಪ್ರವೃತ್ತಿ ಮಾಡುವುದಿಲ್ಲ. ಅಪಿತು = ಆದರೆ, ಧ್ರುವಬಾಲನರ್ತಕೀನಾಂ - ಧ್ರುವ ಚೆನ್ನಾಗಿ ಪರಿಣತರಾದ ಬಾಲ = ತಾರುಣ್ಯದಲ್ಲಿ ಹೆಜ್ಜೆ ಇಡುತ್ತಿರುವ, ನರ್ತಕೀನಾಂ = ನಾಟ್ಯಗಾರ್ತಿಯರಾದ, ಗಣಿಕಾನಾಂ = ವೇಶ್ಯೆಯರ, ಪರಿನರ್ತನಾದಿದೃಷ್ಟ್ಯೈ = ನೃತ್ಯ ಹಾಗೂ ಹಾವಭಾವವಿಲಾಸಗಳನ್ನು ನೋಡುವುದಕ್ಕಾಗಿ, ಪ್ರವರ್ತತೇ = ಪ್ರವರ್ತಿಸುತ್ತದೆ.

ನ ಹಿ ನಾಸಿಕಯಾ ಕದಾಪಿ ವಿಷ್ಣೋಃ
ಪದಪದ್ಮಾರ್ಪಿತಪುಷ್ಪಗಂಧಬುದ್ಧಿಃ |
ಕಮಲೇಶ ಭವಾಮಿ ಕಿಂತು ವಿಷ್ಣೋ-
ಶ್ಚರಣಾನರ್ಪಿತಪುಷ್ಪಗಂಧಬುದ್ಧಿಃ || ೫ ||

ಹೇ ಕಮಲೇಶ! = ಲಕ್ಷ್ಮೀಪತಿಯಾದ ವಿಷ್ಣುವೇ!, ಅಹಂ = ನಾನು, ಕದಾಪಿ = ಯಾವತ್ತೂ ಕೂಡ, ನಾಸಿಕಾಯಾ = ಮೂಗಿನಿಂದ, ವಿಷ್ಣೋಃ = ಪರಬ್ರಹ್ಮನಾದ ನಿನ್ನ, ಪದಪದ್ಮಾರ್ಚಿತಪುಷ್ಪಗಂಧಬುದ್ಧಿಃ - ಪದಪದ್ಮ = ಕಲಮದಂತಿರುವ ಪಾದಗಳಿಗೆ, ಅರ್ಪಿತ = ಸಮರ್ಪಿಸಲ್ಪಟ್ಟ, ಪುಷ್ಪ = ಹೂವುಗಳ, ಗಂಧ = ಸುವಾಸನೆಯ, ಬುದ್ಧಿಃ = ಅನುಭವವುಳ್ಳವನು, ನಹಿ ಭವಾಮಿ = ನಿಶ್ಚಯವಾಗಿಯೂ ಆಗಿಲ್ಲ. ಕಿಂತು = ಆದರೆ, ವಿಷ್ಣೋಃ = ಪರಬ್ರಹ್ಮನಾದ ನಿನ್ನ, ಚರಣಾನನರ್ಪಿತಪುಷ್ಪಗಂಧಬುದ್ಧಿಃ - ಚರಣ = ಪಾದಗಳಿಗೆ, ಅನರ್ಪಿತ = ಸಮರ್ಪಿಸದೇ ಇರುವ, ಪುಷ್ಪ = ಹೂವುಗಳ, ಗಂಧ = ಸುವಾಸನೆಯ, ಬುದ್ಧಿಃ = ಅನುಭವವುಳ್ಳವನು ಭವಾಮಿ = ಆಗಿದ್ದೇನೆ.

ನೃಹರೇಽಚ್ಯುತ ಮಾಧವೇಶ ಕೃಷ್ಣ
ಹರಿಗೋವಿಂದ ಮುಕುಂದನಾಮಜಾತಮ್ |
ನಹಿ ಕೀರ್ತಯತೀಹ ಮೇ ಕುಜಿಹ್ವಾಽಪಿ ತು
ದುರ್ಲಿಂಗಭಗಾಂಕಿತಾನ್ಕುಶಬ್ದಾನ್ ||೬||

ಹೇ ನೃಹರೇ! = ನರಸಿಂಹರೂಪಿಯಾದ ವಿಷ್ಣುವೇ! ಮೇ = ನನ್ನ, ಕುಜಿಹ್ವಾ= ಕೆಟ್ಟನಾಲಿಗೆಯು, ಇಹ ಈ ಭೋಗಪ್ರಧಾನವಾದ ಬದುಕಿನಲ್ಲಿ ಅಚ್ಯುತಮಾಧವೇಶಕೃಷ್ಣಹರಿಗೋವಿಂದಮುಕುಂದನಾಮಜಾತಂ = ಅಚ್ಯುತ, ಮಾಧವ, ಈಶ, ಕೃಷ್ಣ, ಹರಿ, ಗೋವಿಂದ, ಮುಕುಂದ ಎಂಬಿವೇ ಮೊದಲಾದ ನಾಮಗಳ ಸಮೂಹವನ್ನು, ನಹಿ ಕೀರ್ತಯತಿ = ನಿಶ್ಚಯವಾಗಿಯೂ ಉಚ್ಚರಿಸುವುದಿಲ್ಲ. ಅಪಿತು = ಆದರೆ, ದುರ್ಲಿಂಗಭಗಾಂಕಿತಾನ್ = ಅಶ್ಲೀಲವಾದ ಲಿಂಗ ಭಗ ಮೊದಲಾದ ಶಬ್ದಗಳಿಂದ ಕೂಡಿದ, ಕುಶಬ್ದಾನ್ = ಕೆಟ್ಟಮಾತುಗಳನ್ನು ಕೀರ್ತಯತಿ = ಆಡುತ್ತದೆ.

ತವ ಮಂದಿರಮಾರ್ಜನಾದಿಸೇವಾಂ
ನ ಕರೌ ಮೇ ಕುರುತಃ ಕದಾಪಿ ಭಕ್ತ್ಯಾ |
ಅಪಿ ತೂರುಗುಣಾರ್ಯ ದುಷ್ಟವಸ್ತು-
ಗ್ರಹಣಾಯೈವ ಯತೇತ ಇಂದಿರೇಶ||೭||

ಉರುಗುಣಾರ್ಯ - ಉರು = ಉತ್ಕೃಷ್ಟವಾದ, ಗುಣ = ಗುಣಗಳಿಂದ, ಆರ್ಯ = ಪೂಜ್ಯನಾದ, ಹೇ ಇಂದಿರೇಶ! ಇಂದಿರಾರಮಣನಾದ ಪರಮಾತ್ಮನೇ!, ಮೇ =

ನನ್ನ, ಕರೌ = ಕೈಗಳು, ಕದಾಪಿ = ಯಾವಕಾಲದಲ್ಲಿಯೂ ಸಹ, ತವ = ನಿನ್ನ, ಮಂದಿರಮಾರ್ಜನಾದಿಸೇವಾಂ - ಮಂದಿರ = ಮಂದಿರದ, ಮಾರ್ಜನ = ಸಾರಿಸುವುದೇ, ಆದಿ = ಮೊದಲಾದ, ಸೇವಾಂ = ಷೋಡಶೋಪಚಾರರೂಪವಾದ ಸೇವಾಕಾರ್ಯವನ್ನು, ನ ಕುರುತಃ = ಮಾಡಿಲ್ಲ. ಅಪಿತು = ಆದರೆ, ದುಷ್ಟವಸ್ತುಗ್ರಹಣಾಯ ಏವ - ದುಷ್ಟ = ದೋಷಪೂರಿತವಾದ (ಅಸ್ಪೃಶ್ಯವಾದ) ವಸ್ತು = ವಸ್ತುಗಳನ್ನು, ಗ್ರಹಣಾಯ ಏವ = ತೆಗೆದು ಕೊಳ್ಳಲಿಕ್ಕೇನೇ, ಯತೇತೇ = ಪ್ರಯತ್ನಿಸುತ್ತವೆ.

ಉದರಂ ಮಮ ಧಿಕ್ ಶಠಸ್ಯ ವಿಷ್ಣ್ವರ್ಪಿತ-
ಪೂತಾನ್ನವಿವರ್ಜಿತಂ ನಿತಾಂತಮ್ |
ಯದಪೂತತರಾಸಮರ್ಪಣೀಯಾಧಮ-
ವೃಂತಾಕಪಲಾಂಡುಪೂರ್ವಭಾಜಃ ||೮||

ಹೇ ಈಶ! = ಜಗದೊಡೆಯನೇ!, ನಿತಾಂತಂ = ಬಹಳವಾಗಿ, ಅಪೂತತರಾಸಮರ್ಪಣೀಯಾಧಮವೃಂತಾಕಪಲಾಂಡುಪೂರ್ವಭಾಜಃ - ಅಪೂತತರ = ಅತ್ಯಂತ ಅಪವಿತ್ರವಾದ, ಅಸಮರ್ಪಣೀಯ = ನಿನಗೆ ಸಮರ್ಪಿಸಲು ಯೋಗ್ಯವಲ್ಲದ, ಅಧಮ = ನಿಕೃಷ್ಟವಾದ, ವೃಂತಾಕ = ಬದನೆಕಾಯಿ, ಪಲಾಂಡು = ಈರುಳ್ಳಿಯೇ, ಪೂರ್ವ = ಮುಂತಾದ ನಿಷಿದ್ಧ ಆಹಾರವನ್ನು, ಭಾಜಃ = ಸ್ವೀಕರಿಸಿದ, ಶಠಸ್ಯ = ಕಪಟಿಯಾದ, ಮಮ = ನನ್ನ, ಯತ್ = ಯಾವ ಹೊಟ್ಟೆಯು, ವಿಷ್ಣ್ವರ್ಪಿತಪೂತಾನ್ನವಿವರ್ಜಿತಂ = ಬಿಡಲ್ಪಟ್ಟ ಪವಿತ್ರವಾದ ನೇವೈದ್ಯಾನ್ನವುಳ್ಳದ್ದಾಗಿದೆಯೋ, ತತ್ = ಅಂತಹ, ಉದರಂ = ಹೊಟ್ಟೆಗೆ, ಧಿಕ್ = ಧಿಕ್ಕಾರವು.

ಖಲಜಾರವಧೂಗೃಹಾಣಿ ನಿತ್ಯಂ
ಚರಣಾಭ್ಯಾಮನುಯಾಮ್ಯಹಂ ತ್ವರಾಭ್ಯಾಮ್ |
ನ ತು ಮಾಧವ ತಾವಕಾಲಯಾಂಶ್ಚ
ಪ್ರತಿಯಾಮೀಶ ಮಹತ್ತಮಾಗ್ರಹೋऽಹಮ್ ||೯||

ಹೇ ಈಶ! = ಜಗದೊಡೆಯನಾದ, ಮಾಧವ = ಲಕ್ಷ್ಮೀಪತಿಯಾದ ಭಗವಂತನೇ!, ಅಹಂ = ನಾನು, ನಿತ್ಯಂ = ಯಾವಾಗಲೂ, ತ್ವರಾಭ್ಯಾಂ = ವೇಗದಿಂದ ಕೂಡಿದ, ಚರಣಾಭ್ಯಾಂ = ಕಾಲುಗಳಿಂದ, ಖಲಜಾರವಧೂ - ಗೃಹಾಣಿ-ಖಲ = ದುರ್ಜನರ, ಹಾಗೂ, ಜಾರವಧೂ = ವೇಶ್ಯೆಯರ, ಗೃಹಾಣಿ = ನೆಮನೆಗಳಿಗೆ, ಅನುಯಾಮಿ =

ಹೋಗುತ್ತೇನೆ. ತು = ಆದರೆ, ಮಹತ್ತಮಾಗ್ರಹಃ = ಅತಿಯಾದ ದುರಾಗ್ರಹವುಳ್ಳ, ಅಹಂ = ನಾನು, ತಾವಕಾಲಯಾನ್ = ನಿನ್ನ ಮಂದಿರಗಳಿಗೆ, ನಚ ಪ್ರತಿಯಾಮಿ = ಹೋಗುತ್ತಲೇ ಇಲ್ಲ.

ಮನ ಏವ ಹರೇಽ ಹರೇಽಖಿಲೇಂದ್ರಿಯಾಣಾಂ
ವರಮಿತ್ಥಂ ಪ್ರಮಿತಂ ಶ್ರುತಿಸ್ಮೃತಿಭ್ಯಾಮ್ ।
ಸುಮನೋಜಯಿನೋಽಖಿಲೇಂದ್ರಿಯಾಣಾಂ
ಜಯ ಏವೇತಿ ಜನಾನುಭೂತಿರಸ್ತಿ ॥೧೦॥

ಹೇ ಹರೇ! = ಸಂಸಾರದುಃಖಪರಿಹಾರಕನಾದ ಭಗವಂತನೇ! ಮನಃ ಏವ = ಮನಸ್ಸೇ, ಅಖಿಲೇಂದ್ರಿಯಾಣಾಂ = ಎಲ್ಲ ಇಂದ್ರಿಯಗಳಿ ಗಿಂತಲೂ, ವರಂ = ಶ್ರೇಷ್ಠವಾಗಿದೆ. ಇತ್ಥಂ = ಹೀಗೆಂದು, ಶ್ರುತಿಸ್ಮೃತಿಭ್ಯಾಂ = ಶ್ರುತಿ ಹಾಗೂ ಸ್ಮೃತಿಪ್ರಮಾಣಗಳಿಂದ, ಪ್ರಮಿತಂ = ನಿಶ್ಚಿತವಾಗಿದೆ. ಸುಮನೋಜಯಿನಃ - ಸು = ಚೆನ್ನಾಗಿ, ಮನೋಜಯಿನಃ = ಮನಸ್ಸನ್ನು ಗೆದ್ದವರಿಗೆ, ಅಖಿಲೇಂದ್ರಿಯಾಣಾಂ - ಅಖಿಲ = ಎಲ್ಲ, ಇಂದ್ರಿಯಾಣಾಂ = ಇಂದ್ರಿಯಗಳ, ಜಯಃ ಏವ = ಜಯವು ಕೈಗೂಡಿದಂತೆಯೇ, ಇತಿ = ಎಂಬುದಾಗಿ, ಜನಾನುಭೂತಿಃ -ಜನ = ಜನರ, ಅನುಭೂತಿಃ = ಅನುಭವವು, ಅಸ್ತಿ = ಇದೆ.

ಮನಸಾಚ್ಯುತಕೃಷ್ಣ ತಾದೃಶೇನಾ-
ಪ್ಯನುಚಿಂತ್ಯೈವ ಭವಂತಮಾತ್ಮಭಕ್ತಾನ್ ।
ಭವವಾರಿನಿಧೇಃ ಸುತಾರಯಂತಂ
ಭವವಾರ್ಧಿಂ ನಹಿ ತರ್ತುಮಸ್ತಿ ಯತ್ನಃ॥೧೧॥

ಅಚ್ಯುತ = ನಾಶರಹಿನಾದ, ಕೃಷ್ಣ = ಸಂಸಾರಸಾಗರದಿಂದ ಮೇಲಕ್ಕೆ ಕರ್ಷಣ ಮಾಡುವ (ಎಳೆಯುವ) ಭಗವಂತನೇ!, ತಾದೃಶೆನಾಪಿ = ಹಿಂದೆ ಹೇಳಿದಂತೆ ಪ್ರಧಾನವಾಗಿದ್ದರೂ ಕೂಡ, ಅಂತಹ, ಮನಸಾ = ಮನಸ್ಸಿನಿಂದ, ಆತ್ಮಭಕ್ತಾನ್ = ಸ್ವಕೀಯಭಕ್ತರನ್ನು, ಭವವಾರಿನಿಧೇಃ = ಸಂಸಾರಸಾಗರದಿಂದ, ಸುತಾರತಯಂತಂ = ಚೆನ್ನಾಗಿ ದಾಟಿಸುವ, ಭವಂತಂ = ನಿನ್ನನ್ನು, ಅನುಚಿಂತ್ಯ = ಧ್ಯಾನ ಮಾಡಿ, ಭವವಾರ್ಧಿಂ - ಭವ = ಸಂಸಾರವೆಂಬ, ವಾರ್ಧಿಂ = ಸಮುದ್ರವನ್ನು, ತರ್ತುಂ = ದಾಟಲು, ಯತ್ನಃ = ಪ್ರಯತ್ನವು, ಹಿ = ನಿಶ್ಚಯವಾಗಿಯೂ, ನೈವ ಆಸ್ತಿ = ಇಲ್ಲವೇ ಇಲ್ಲ.

ಮಮ ಪಾಪಚಯಸ್ಯ ವಾಸುದೇವಾಂತಕ-
ಲೋಕಸ್ಥಿತಿರೇವ ಚೇತ್ಫಲಂ ತು |
ನ ಸುಖೀ ಸದೃಶೋऽಸ್ತಿ ಮೇ ತ್ರಿಲೋಕ್ಯಾಂ
ಫಲಭಾವೇನ ಮಹತ್ತಮೋऽಸ್ತಿ ಸಿದ್ಧಮ್ ||೧೨||

ಹೇ ವಾಸುದೇವ = ವಾಸುದೇವನೇ!, ಮಮ = ನನ್ನ, ಪಾಪಚಯಸ್ಯ - ಪಾಪ = ಪಾಪಗಳ, ಚಯಸ್ಯ = ಸಮೂಹಕ್ಕೆ, ಅಂತಕಲೋಕಸ್ಥಿತಿಃ ಏವ - ಅಂತಕ = ಯಮನ, ಲೋಕ = ಲೋಕವಾದ ನರಕದಲ್ಲಿ ಸ್ಥಿತಿಃ ಏವ = ವಾಸವೇ, ಫಲಂ ಚೇತ್ = ಫಲವಾದರೆ, ಮೇ = ನನಗೆ, ಸದೃಶಃ = ಸಮಾನನಾದ, ಸುಖೀ = ಸುಖವಂತನು, ತ್ರಿಲೋಕ್ಯಾಂ = ಮೂರು ಲೋಕಗಳಲ್ಲಿ, ನ ಅಸ್ತಿ = ಇಲ್ಲ. ತು = ಆದರೆ, ಮಹತ್‌ತಮಃ = ಮಹಾತಮಸ್ಸೇ, ಫಲಭಾವೇನ = ಫಲರೂಪದಿಂದ (ಫಲವಾಗಿ) ಸಿದ್ಧಂ ಅಸ್ತಿ = ನಿಶ್ಚಿತವಾಗಿದೆ.

ನ ಸುಖಾನುಭವಾಯ ಪಾಪಕರ್ಮಾ-
ಣ್ಯಹಮೀಶಾನುದಿತಂ ತನೋಮಿ ಕಿಂತು |
ಅಘನಾಶಯಶಃಪರೀಕ್ಷಣಾರ್ಥಂ
ತವ ನಾಮ್ನಾ ಮನುತಾಪಸಿದ್ಧ ಏವ ||೧೩||

ಹೇ ಈಶ = ಜಗದೊಡೆಯನೇ!, ಅಹಂ = ನಾನು, ಅನುದಿನಂ = ಪ್ರತಿದಿನವೂ, ಪಾಪಕರ್ಮಾಣಿ = ಪಾಪದ ಕೆಲಸಗಳನ್ನು, ಸುಖಾನುಭವಾಯ = ಸುಖದ ಅನುಭೋಗಕ್ಕೋಸ್ಕರ, ನ ತನೋಮಿ = ಮಾಡುತ್ತಿಲ್ಲ. ಕಿಂತು = ಆದರೆ, ಅನುತಾಪಸಿದ್ಧ ಏವ = ಪಶ್ಚಾತ್ತಾಪಕ್ಕೆ ಸಿದ್ಧನಾಗಿಯೇ, ತವ = ನಿನ್ನ, ನಾಮ್ನಾಂ = ನಾಮಗಳ, ಅಘನಾಶಯಶಃಪರೀಕ್ಷಣಾರ್ಥಂ - ಅಘ = ಪಾಪಗಳನ್ನು ನಾಶ = ನಾಶಪಡಿಸುವಿಕೆಯಿಂದ ಉಂಟಾದ, ಯಶಃ = ಕೀರ್ತಿಯ, ಪರೀಕ್ಷಣಾರ್ಥಂ = ಪರೀಕ್ಷೆಗೋಸುಗವಾಗಿ, ತನೋಮಿ = ಮಾಡುತ್ತೇನೆ.

ನಿಜವಾಸರುಷಾ ಪ್ರದಾತುಮಾರ್ತಿಂ
ಹೃಧಿಕಾಂ ಪಾಪನಿಯಾಮಕಾಸುರೇಭ್ಯಃ |
ಅಶುಭಾನ್ಯಪಿ ಕಾರಯಾನ್ಮಯಾ ತ್ವಂ
ರಮಸೇ ಸರ್ವನಿಯಮಾಕೋ ವಿಭಾಸಿ ||೧೪||

ಹೇ ಈಶ = ಜಗತ್ಸ್ವಾಮಿಯೇ!, ತ್ವಂ = ನೀನು, ನಿಜವಾಸರುಷಾ-ನಿಜ = ಸ್ವಕೀಯರಾದ ಅಂದರೆ ನಿನ್ನವರಾದ ಭಕ್ತರಲ್ಲಿ, ವಾಸ = ವಾಸಮಾಡಿರುವುದರಿಂದುಂಟಾದ, ರುಷಾ = ಕೋಪದಿಂದ, ಪಾಪ ನಿಯಾಮಕಾಸುರೇಭ್ಯಃ = ಪಾಪನಿಯಾಮಕರಾದ ಅಸುರರಿಗೆ, ಅಧಿಕಾಂ = ಬಹಳವಾದ, ಆರ್ತಿಂ = ದುಃಖವನ್ನು, ಪ್ರದಾತುಂ = ಕೊಡಲು, ಮಯಾ = ನನ್ನಿಂದ, ಅಶುಭಾನಿ ಅಪಿ = ಕೆಟ್ಟ ಕೆಲಸಗಳನ್ನು ಕೂಡ, ಕಾರಯನ್ = ಮಾಡಿಸುತ್ತಾ, ರಮಸೇ = ಕ್ರೀಡಿಸುತ್ತಿ. ಸರ್ವನಿಯಾಮಕಃ = ಎಲ್ಲರಿಗೂ ನಿಯಮಕನಾಗಿ, ವಿಭಾಸಿ = ಶೋಭಿಸುತ್ತಿ.

ಯದಿ ಕೃಷ್ಣ ಕದಾಚನಾಪಿ ಪುಣ್ಯಂ
ಘಟತೇ ಪಾಪಮಯಸ್ಯ ಮೇಽಪಿ ತತ್ತು |
ಪ್ರಬಲಾಘಚಯೈರ್ನಿಹನ್ಯತೇ ವಾ
ದುರಿತಧ್ವಂಸಕೃತಾರ್ಥಮೀಶ ವಾ ಸ್ಯಾತ್ ||೧೫||

ಹೇ ಈಶ! = ಸರ್ವಸ್ವಾಮಿಯಾದ, ಕೃಷ್ಣ = ಕೃಷ್ಣನೇ! ಪಾಪಮಯಸ್ಯ = ಅತಿಪಾಪಿಷ್ಠನಾದ, ಮೇ ಅಪಿ = ನನಗೂ ಕೂಡ, ಕದಾಚನ ಅಪಿ = ಯಾವಾಗಲಾದರೂ, ಪುಣ್ಯಂ = ಪುಣ್ಯವು, ಯದಿಘಟತೇ = ಲಭಿಸಿದರೆ, ತತ್ತು = ಆ ಪುಣ್ಯವೇ, ಪ್ರಬಲಾಘಚಯೈಃ - ಪ್ರಬಲ = ಪ್ರಬಲವಾದ, ಅಘ = ಪಾಪಗಳ, ಚಯೈಃ = ಸಮೂಹಗಳಿಂದ, ನಿಹನ್ಯತೇ ವಾ = ನಾಶಗೊಳಿಸಲ್ಪಡುತ್ತದೋ ಏನೋ?, ವಾ = ಅಥವಾ, ದುರಿತಧ್ವಂಸಕೃತಾರ್ಥಂ = ಕೇವಲ ಪಾಪಪರಿಹಾರದಲ್ಲಿ ಮಾತ್ರ ಸಮರ್ಥವು, ಸ್ಯಾತ್ = ಆದೀತು.

ತದಿಹೋಭಯತಶ್ಚ ಪುಣ್ಯಮೂರ್ತೇ
ಸುಕೃತಂ ನೋ ಘಟತೇ ಮನಾಗಪೀಶ |
ವದ ಮೇ ಪುರತಸ್ತ್ವಮತೀವ ಭೀರೋ-
ರ್ಭಗವನ್ ಕಾಲಭಯಾಪಹರ್ತ್ರುಪಾಯಮ್ ||೧೬||

ತತ್ = ಆದ್ದರಿಂದ, ಹೇ ಪುಣ್ಯಮೂರ್ತೇ ಈಶ = ಪುಣ್ಯಕರವಾದ ಸ್ವರೂಪವುಳ್ಳ ಜಗತ್ಸ್ವಾಮಿಯೇ!, ಇಹ = ಈ ಸಂಸಾರದಲ್ಲಿ, ಉಭಯತಶ್ಚ = ಎರಡು ಕಾರಣಗಳಿಂದಲೂ ಅಂದರೆ ಪುಣ್ಯವೇ ಪಾಪದಿಂದ ನಾಶವಾಗುವ ಸಂಭವವಿರುವುದರಿಂದ ಅಥವಾ ಪುಣ್ಯವು ಕೇವಲ ಪಾಪನಾಶಕ್ಕೆ ಕಾರಣವಾಗುವಷ್ಟು ಮಾತ್ರ ಅಲ್ಪ ಪ್ರಮಾಣದ್ದಾದರಿಂದ, ಸುಕೃತಂ = ಪುಣ್ಯವು, ಮನಾಗಪಿ = ಸ್ವಲ್ಪವೂ

ಕೂಡ, ನೋ ಘಟತೇ = ಉಳಿಯುವುದಿಲ್ಲ, ಅತೀವ = ಬಹಳವಾಗಿ, ಭೀರೋಃ = ಹೆದರಿದ, ಮೇ = ನನಗೆ, ಪುರತಃ = ಮುಂಚಿತವಾಗಿಯೇ, ಬೇಗನೇ, ಕಾಲಭಯಾಪಹರ್ತೃಪಾಯಂ- ಕಾಲ = ಯಮನ, ಭಯ = ಭೀತಿಯನ್ನು, ಪರಿಹರ್ತೃ = ಪರಿಹರಿಸುವ, ಉಪಾಯಂ = ಉಪಾಯವನ್ನು, ವದ = ಹೇಳು.

ಅತುಲಂ ನೃಷು ವೈಷ್ಣವಂ ಸುಜನ್ಮಾ-
ಚ್ಯುತ ದತ್ತಂ ಕೃಪಯಾ ತ್ವಯಾಪ್ಯವಾಪ್ಯ |
ಕ್ಷಣಜೀವ್ಯಪಿ ಕಲ್ಪಗತ್ವಬುದ್ಧ್ಯಾ
ಪಶುಚಂಡಾಲವದೇವ ಸಂಚರಾಮಿ ||೧೭||

ಹೇ ಅಚ್ಯುತ = ನಾಶರಹಿತನಾದ ವಿಷ್ಣುವೇ! ತ್ವಯಾ = ನಿನ್ನಿಂದ, ಕೃಪಯಾ = ಕೃಪೆಯಿಂದ, ದತ್ತಂ = ಕೊಡಲ್ಪಟ್ಟ ನೃಷು = ಮಾನವರಲ್ಲಿ, ಅತುಲಂ = ಅಸದೃಶವಾದ, ವೈಷ್ಣವಂ ಸುಜನ್ಮ = ಪ್ರಶಸ್ತವಾದ ವೈಷ್ಣವಜನ್ಮವನ್ನು, ಅವಾಪ್ಯಾಪಿ = ಹೊಂದಿಯೂ ಕೂಡ, ಅಹಂ = ನಾನು, ಕ್ಷಣಜೀವೀ ಅಪಿ = ಅಲ್ಪಾಯುಷಿಯೇ ಆಗಿದ್ದರೂ, ಕಲ್ಪಗತ್ವಬುದ್ಧ್ಯಾ = 'ಕಲ್ಪಾಯುಷಿ' ಎಂಬ ಭ್ರಮೆಯಿಂದ, ಪಶುಚಂಡಾಲವತ್ ಏವ = ಪಶು ಮತ್ತು ಚಂಡಾಲರಂತೆಯೇ, ಸಂಚರಾಮಿ = ತಿರುಗುತ್ತಿದ್ದೇನೆ.

ನ ತದಸ್ತಿ ಶರೀರಿಣಾಂ ಶತಾಬ್ದಾಯುಷಿ
ಶಾಸ್ತ್ರಪ್ರಥಿತೇಽಪಿ ಕಿಂಚಿದೇವ |
ಭಗವನ್ ಖಲು ಸರ್ವರಾತ್ರಿ ಕಾಲೋ
ಜಲಹೋಮೋಪಮತಾಮುಪೈತಿ ನಾಲಮ್ ||೧೮||

ಹೇ ಭಗವನ್ = ಷಡ್ಗುಣೈಶ್ವರ್ಯ ಸಂಪನ್ನನಾದ ಶ್ರೀಹರಿಯೇ!, ಮರ್ತ್ಯಶರೀರಿಣಾಂ = ಮರಣಶೀಲವಾದ ಶರೀರವುಳ್ಳ ಮಾನವರಿಗೆ, ಶತಾಬ್ದಾಯುಷಿ = ನೂರು ವರ್ಷಗಳ ಆಯುಷ್ಯವು, ಶಾಸ್ತ್ರಪ್ರಥಿತೇಽಪಿ = ಶಾಸ್ತ್ರದಲ್ಲಿ ಪ್ರಸಿದ್ಧವಾಗಿದ್ದರೂ, ಕಿಂಚಿದೇವ = ಸ್ವಲ್ಪಮಾತ್ರವೇ, ಭವತಿ = ಆಗುತ್ತದೆ. ನ ತದಸ್ತಿ = ಪೂರ್ಣ ಇರುವುದಿಲ್ಲ. ಸರ್ವರಾತ್ರಿ ಕಾಲಃ = ಆಯುಷ್ಯದ ಎಲ್ಲಾ ರಾತ್ರಿಗಳು, ಜಲಹೋಮೋಪಮತಾಂ - ಜಲಹೋಮ = ನೀರಿನಲ್ಲಿ ಮಾಡಿದ ಹೋಮದ, ಉಪಮತಾಂ = ಹೋಲಿಕೆಯನ್ನು ಉಪೈತಿ ಖಲು = ಹೊಂದುತ್ತದಷ್ಟೆ, ನ ಅಲಂ = ಸಾರ್ಥಕವಲ್ಲ.

ದ್ವಿದಶಾಬ್ದಯುಗಂ ದಿವಾಪಿ ಪೂರ್ವೋ
ತ್ತರಮೀಶ ಸ್ಥವಿರತ್ವಶೈಶವಾಭ್ಯಾಮ್ |
ಸಮಯಂ ಪ್ರಣಯಾಮಿ ಸರ್ವರೋಗೈಃ
ಬಹುಲೀಲಾಭಿರಪಿ ಪ್ರಮೂಢಬುದ್ಧ್ಯಾ ||೧೯||

ಈಶ = ಸರ್ವಸ್ವಾಮಿಯೇ! ದಿವಾಪಿ = ಆಯುಷ್ಯದ ಹಗಲಿನಲ್ಲಿಯೂ, ಪೂರ್ವೋತ್ತರಂ = ಮೊದಲಿನ ಮತ್ತು ಕೊನೆಯ, ದ್ವಿದಶಾಬ್ದ ಯುಗಂ = ಇಪ್ಪತ್ತಿಪ್ಪತ್ತು ವರ್ಷಗಳೆಂಬ, ಸಮಯಂ = ಸಮಯವನ್ನು, ಸ್ಥವಿರತ್ವ ಶೈಶವಾಭ್ಯಾಂ = ಮುಪ್ಪು ಮತ್ತು ಬಾಲ್ಯಗಳಿಂದ, ಸರ್ವರೋಗೈಃ = ಎಲ್ಲ ರೋಗಗಳಿಂದ, ಪ್ರಮೂಢಬುದ್ಧ್ಯಾ = ಅತಿಯಾದ ಮೂಢಬುದ್ಧಿಯಿಂದ, ಬಹು ಲೀಲಾಭಿರಪಿ = ಬಹಳವಾದ ಆಟಗಳಿಂದಲೂ ಪ್ರಣಯಾಮಿ = ಕಳೆಯುತ್ತೇನೆ.

ಪರಿಶೇಷಿತ ಈಶ ಮಧ್ಯಕಾಲಃ
ಸುಕೃತೇ ಭಾರತಭೂತಲೇ ವರಿಷ್ಠಃ |
ಯದಿಹಾಪಿ ಸದೈವ ಪಾಪಚಿತ್ತೇ
ಮಯಿ ಪಶ್ವಂತ್ಯಜಯೋಶ್ಚ ಕೋ ವಿಶೇಷಃ ||೨೦||

ಹೇ ಈಶ = ಜಗದೊಡೆಯನೇ!, ಸುಕೃತೇ = ಪುಣ್ಯಕರವಾದ, ಭಾರತಭೂತಲೇ = ಭಾರತಭೂಮಿಯಲ್ಲಿ, ಪರಿಶೇಷಿತಃ = ಉಳಿದಿರುವ, ಮಧ್ಯಕಾಲಃ = ಮಧ್ಯದ ತಾರುಣ್ಯದ ವಯಸ್ಸು, ವರಿಷ್ಠಃ = ಸಾಧನೆಗೆ ಅತ್ಯಂತ ಶ್ರೇಷ್ಠವಾದುದು. ತದಿಹಾಪಿ = ಅಂತಹ ಸಾಧನೆಗೆ ಯೋಗ್ಯವಾದ ವಯಸ್ಸಿನಲ್ಲಿಯೂ, ಸದೈವ = ಯಾವಾಗಲೂ, ಪಾಪಚಿತ್ತೇ = ಪಾಪದಲ್ಲಿಯೇ ಮನಸ್ಸಿಟ್ಟಿರುವ ಮಯಿ = ನನ್ನಲ್ಲಿ, ಪಶ್ವಂತ್ಯಜಯೋಶ್ಚ = ಪಶು ಮತ್ತು ಚಂಡಾಲರಲ್ಲಿಯೂ, ಕೋ ವಿಶೇಷಃ = ಏನು ವ್ಯತ್ಯಾಸ?

ಇಹ ಭಾರತಭೂತಲೇಽತಿಪುಣ್ಯೇ
ದ್ರವಿಣಸ್ತ್ರೀಸುತಪೂರ್ವಕೇಷು ಮಾಯಾಮ್ |
ಅಲಮೇಕದಿನಂ ವಿಮುಚ್ಯ ವಾ ಮೇ
ತವ ಪಾದಾಬ್ಜರತಿಂ ಪ್ರದೇಹಿ ದೇವ ||೨೧||

ಹೇ ದೇವ = ಕ್ರೀಡಾದಿಗುಣವಿಶಿಷ್ಟನಾದ ಭಗವಂತನೇ!, ಅತಿಪುಣ್ಯೇ = ಅತ್ಯಂತಪುಣ್ಯಪ್ರದವಾದ, ಭಾರತಭೂತಲೇ = ಈ ಭಾರತ ಭೂಮಿಯಲ್ಲಿ, ಇಹ =

ಈ ವೈಷ್ಣವಜನ್ಮದಲ್ಲಿ ದ್ರವಿಣಸ್ತ್ರೀಸುತಪೂರ್ವಕೇಷು-ದ್ರವಿಣ = ಹಣವು, ಸ್ತ್ರೀ = ಸ್ತ್ರೀಯರು, ಸುತ = ಮಕ್ಕಳು; ಪೂರ್ವಕೇಷು = ಮೊದಲಾದುದರಲ್ಲಿ, ಮೇ = ನನಗಿರುವ, ಮಾಯಾಂ = ವ್ಯಾಮೋಹವನ್ನು, ಏಕದಿನಂ ವಾ = ಒಂದು ದಿನದ ಮಟ್ಟಿಗಾದರೂ ಅಲಂ = ಪೂರ್ತಿಯಾಗಿ ವಿಮುಚ್ಯ = ಬಿಡಿಸಿ, ತವ = ನಿನ್ನ, ಪಾದಾಬ್ಜರತಿಂ = ಪಾದಕಮಲಗಳಲ್ಲಿ ಆಸಕ್ತಿಯನ್ನು, ಪ್ರದೇಹಿ = ಕೊಡು.

ರಮಯಾಪ್ಯಗಣಯ್ಯವಸ್ತುಜಾತಂ
ದ್ವಿವಿಧಂ ಪ್ರಾಹುರಮಂದಬುದ್ಧಿಭಾಜಃ |
ತವ ಸದ್ಗುಣಜಾತಮೇಕಮನ್ಯ-
ನ್ಮಮ ದುರ್ವಾರದುರಂತಪಾಪಜಾತಮ್ ||೨೨||

ಹೇ ದೇವ = ಕ್ರೀಡಾದಿಗುಣವಿಶಿಷ್ಟನಾದ ಭಗವಂತನೇ! ಅಮಂದಬುದ್ಧಿಭಾಜಃ = ಜ್ಞಾನಿವರೇಣ್ಯರು, ರಮಯಾ ಅಪಿ = ಲಕ್ಷ್ಮೀದೇವಿಯಿಂದಲೂ, ಅಗಣೇಯವಸ್ತುಜಾತಂ - ಅಗಣೇಯ = ಎಣಿಸಲು ಶಕ್ಯವಲ್ಲದ, ವಸ್ತು = ಪದಾರ್ಥಗಳ, ಜಾತಂ = ಸಮೂಹವನ್ನು, ದ್ವಿವಿಧಂ = ಎರಡು ವಿಧವೆಂದು, ಪ್ರಾಹುಃ = ಹೇಳುತ್ತಾರೆ. ಏಕಂ = ಒಂದು, ತವ = ನಿನ್ನ, ಸದ್ಗುಣಜಾತಂ = ಕಲ್ಯಾಣಗುಣಗಳ ಸಮೂಹವು. ಅನ್ಯತ್ = ಮತ್ತೊಂದು, ಮಮ = ನನ್ನ, ದುರ್ವಾದುರಂತದೋಷಜಾತಂ - ದುರ್ವಾರ = ಪರಿಹರಿಸಲು ಅಶಕ್ಯವಾದ, ದುರಂತ = ಕೆಟ್ಟಪರಿಣಾಮಕ್ಕೆ ಕಾರಣವಾದ, ದೋಷ = ಅಪರಾಧಗಳ, ಜಾತಂ = ಸಮೂಹವು.

ಅತಿಸೌಖ್ಯಕರಾಣ್ಯಲಂ ಪರಸ್ತಾತ್
ನ ಹಿ ಕಿಂಚಿತ್ ಶ್ರಮಸಾಧ್ಯಸಾಧನಾನಿ |
ಶ್ರಮಭೀರುರಹಂ ತ್ಯಜನ್ಪರತ್ರಾ-
ಮಿತಶೋಕಾನುಭವೀ ಕಥಂ ಭವಾಮಿ ||೨೩||

ಪರಸ್ತಾತ್ = ಪರಲೋಕದಲ್ಲಿ, ಅಲಂ = ಚೆನ್ನಾಗಿ, ಅತಿಸೌಖ್ಯ- ಕರಾಣಿ = ಅತಿಶಯ ಸೌಖ್ಯವನ್ನುಂಟುಮಾಡುವ, ಕಿಂಚಿತ್ ಶ್ರಮಸಾಧ್ಯಸಾಧನಾನಿ = ಕೇವಲ ಅಲ್ಪಶ್ರಮದಿಂದ ಮಾಡಬಹುದಾದ ಕರ್ಮಗಳನ್ನು ಶ್ರಮಭೀರುಃ = ಶ್ರಮಕ್ಕೆ ಹೆದರಿದ, ಅಹಂ = ನಾನು, ತ್ಯಜನ್ = ಬಿಟ್ಟವನಾಗಿ, ಪರತ್ರ = ಪರಲೋಕದಲ್ಲಿ, ಅಮಿತಶೋಕಾನುಭವೀ = ಬಹಳವಾದ ದುಃಖವನ್ನುಭವಿಸುವವನು, ಕಥಂ ಹಿ ನ ಭವಾಮಿ = ಹೇಗೆ ತಾನೆ ಆಗುವುದಿಲ್ಲ.

ಭುವಿ ಯದ್ಯಪಿ ಪಾಪಿನೋ ವಸಂತಿ
ಶ್ರಮಭಾಜಃ ಪುರುಷಾಸ್ತಥಾಪಿ ಕೋಽಪಿ |
ಮಮ ಪಾಪಸಮಾನಪಾಪಕರ್ತಾ
ಪುರುಷೋ ನಾಸ್ತಿ ಹಿ ನಾಸ್ತಿ ನಾಸ್ತಿ ನಾಸ್ತಿ ||೨೪||

ಭುವಿ = ಭೂಲೋಕದಲ್ಲಿ, ಪಾಪಿನಃ = ಪಾಪಿಗಳು, ಶ್ರಮಭಾಜಃ = ಶ್ರಮಪಡುತ್ತಿರುವ, ಪುರುಷಾಃ = ಪುರುಷರೂ ಯದ್ಯಪಿ ವಸಂತಿ = ಇರುವುದೇನೋ ನಿಜ. ತಥಾಪಿ = ಆದರೂ, ಮಮ = ನನ್ನ ಪಾಪಸಮಾನ- ಪಾಪಕರ್ತಾ = ಪಾಪಕ್ಕೆ ಸಮಾನವಾದ ಪಾಪ ಮಾಡಿದ, ಕೋಽಪಿ ಪುರುಷಃ = ಯಾವ ಪುರುಷನೂ ಕೂಡ, ನಾಸ್ತಿ = ಇಲ್ಲ. ನಾಸ್ತಿ = ಇಲ್ಲ. ನಾಸ್ತಿ = ಇಲ್ಲ. ಹಿ = ನಿಶ್ಚಯ.

ನತಯೋ ನ ಕೃತಾಃ ಪ್ರದಕ್ಷಿಣಾಶ್ಚ
ಸ್ತುತಯೋಽಪಿ ಧ್ರುವಮಂತರೇಣ ದಂಭಃ |
ನ ಗುರುಃ ಪರಿಸೇವಿತಃ ಸುಭಕ್ತ್ಯಾ
ಶುಭಶಾಸ್ತ್ರಶ್ರವಣಂ ಕಥಂ ತತಃ ಸ್ಯಾತ್ ||೨೫||

ದಂಭಂ ಅಂತರ್ರೈವ = ಕಪಟವಿಲ್ಲದೇ, ಧ್ರುವಂ = ನಿಶ್ಚಯವಾಗಿ, ನತಯಃ = ನಮಸ್ಕಾರಗಳು, ನ ಕೃತಾಃ = ಮಾಡಲ್ಪಟ್ಟಿಲ್ಲ. ಪ್ರದಕ್ಷಿಣಾಶ್ಚ = ಪ್ರದಕ್ಷಿಣೆಗಳು, ನ ಕೃತಾಃ = ಮಾಡಲ್ಪಟ್ಟಿಲ್ಲ. ಸುತ್ತಯೋಽಪಿ = ದೇವತಾಸ್ತುತಿಗಳೂ, ನ ಕೃತಾಃ = ಮಾಡಲ್ಪಟ್ಟಿಲ್ಲ. ಸುಭಕ್ತ್ಯಾ = ನಿಷ್ಕಪಟವಾದ ಭಕ್ತಿಯಿಂದ, ಗುರುಃ = ಗುರುವು, ನ ಪರಿಸೇವಿತಃ = ಸೇವಿಸಲ್ಪಟ್ಟಿಲ್ಲ. ತತಃ = ಆದ್ದರಿಂದ ಶುಭಶಾಸ್ತ್ರಶ್ರವಣಂ = ಸಚ್ಛಾಸ್ತ್ರಶ್ರವಣವು, ಕಥಂ ಸ್ಯಾತ್ = ಹೇಗಾದೀತು?

ವಚನೈರ್ಬಹುಭಿರ್ಮುಕುಂದ ಕಿಂ ತೇ
ಶೃಣು ಮೇ ಬೀಜವಚೋ ವದಾಮಿ ತುಭ್ಯಮ್ |
ಭುವನತ್ರಯ ಸಂಸ್ಥಿತಾನಿ ಯಾನೀ-
ಶ್ವರ ಪಾಪಾನಿ ವಸಂತಿ ಮಯ್ಯಯೋಗ್ಯೇ ||೨೬||

ಹೇ ಮುಕುಂದ = ಮೋಕ್ಷಪ್ರದನಾದ ವಿಷ್ಣುವೇ!, ತೇ = ನಿನಗೆ, ಬಹುಭಿಃವಚನೈಃ ಕಿಂ = ಬಹಳ ಮಾತುಗಳಿಂದ ತಿಳಿಸುವ ಅಗತ್ಯವೇನು? ತುಭ್ಯಂ = ನಿನಗೆ, ಮೇ = ನನ್ನ, ಬೀಜವಚಃ = ಸಾರಭೂತವಾದ ಒಂದು ಮಾತನ್ನು, ವದಾಮಿ = ಹೇಳುತ್ತೇನೆ. ಶೃಣು = ಕೇಳು. ಹೇ ಈಶ್ವರ = ಸಮರ್ಥನಾದ ವಿಷ್ಣುವೇ!, ಯಾನಿ ಪಾಪಾನಿ = ಯಾವ ಯಾವ ಪಾಪಗಳು, ಭುವನತ್ರಯಸಂಸ್ಥಿತಾನಿ = ಮೂರು ಲೋಕದಲ್ಲಿ

ನೆಲೆಸಿವೆಯೋ, ತಾನಿ = ಅವೆಲ್ಲವೂ, ಅಯೋಗ್ಯೇ = ಅಯೋಗ್ಯನಾದ, ಮಯಿ = ನನ್ನಲ್ಲಿ, ವಸಂತಿ = ನೆಲೆಗೊಂಡಿವೆ.

ಪ್ರಕೃತೈಸ್ತದಘವ್ರಜಾತ್ಪ್ರಮುಕ್ತಿ-
ರ್ನ ಭವೇತ್ಕೈರಪಿ ತೇ ದಯಾಂ ವಿನಾಽದ್ಯ |
ಕರುಣಾಂ ಕುರು ಮಯ್ಯತೋ ದಯಾಲೋ
ನತಯಸ್ತೇ ಕಮಲೇಶ ಸಂತ್ವನಂತಾಃ ||೨೭||

ದಯಾಲೋ = ದಯಾಮಯನಾದ, ಕಮಲೇಶ = ಲಕ್ಷ್ಮೀಪತಿಯಾದ ಪರಮಾತ್ಮನೇ! ಅದ್ಯ = ಈಗ, ತೇ = ನಿನ್ನ, ದಯಾಂ ವಿನಾ = ದಯೆಯಿಲ್ಲದೇ, ಕೈರಪಿ = ಯಾವ ಉಪಾಯಗಳಿಂದಲೂ, ಪ್ರಕೃತೈತದಘವ್ರಜಾತ್ - ಪ್ರಕೃತ = ಪ್ರಕೃತವಾದ, ಏತತ್ = ಈ, ಅಘ = ಪಾಪಗಳ, ವ್ರಜಾತ್ = ಸಮೂಹದಿಂದ, ಪ್ರಮುಕ್ತಿಃ = ಬಿಡುಗಡೆಯು, ನ ಭವೇತ್ = ಆಗಲಾರದು. ಅತಃ = ಆದ್ದರಿಂದ, ಮಯಿ = ನನ್ನಲ್ಲಿ, ಕರುಣಾಂ = ದಯೆಯನ್ನು, ಕುರು = ಮಾಡು. ತೇ = ನಿನಗೆ, ಅನಂತಾಃ = ಅಪರಿಮಿತವಾದ, ನತಯಃ = ನಮನಗಳು, ಸಂತು = ಇರಲಿ.

ವಿಜಯೀಂದ್ರ ಯತೀಶ್ವರೋ ವ್ಯತಾನೀತ್
ಸ್ತುತಿಮೇತಾಂ ದುರಿತಾಪಹಾಂ ಮುರಾರೇಃ |
ಪರಮಾದರತಃ ಸದಾ ಪಠೇದ್ಯೋ ನಿಖಿಲೈಃ
ಪಾಪಚಯೈರ್ಭವೇತ್ಸ ಮುಕ್ತಃ ||೨೮||

ವಿಜಯೀಂದ್ರಯತೀಶ್ವರಃ = ಶ್ರೀ ವಿಜಯೀಂದ್ರತೀರ್ಥರೆಂಬ ಯತಿವರೇಣ್ಯರು, ಏತಾಂ = ಈ, ದುರಿತಾಪಹಾಂ = ಪಾಪಪರಿಹಾರಕವಾದ, ಮುರಾರೇಃ = ಶ್ರೀಕೃಷ್ಣನ, ಸ್ತುತಿಂ = ಸ್ತೋತ್ರವನ್ನು, ವ್ಯತಾನೀತ್ = ಮಾಡಿದರು. ಯಃ = ಯಾರು, ಸದಾ = ಯಾವಾಗಲೂ, ಪರಮಾದರತಃ = ಅತ್ಯಂತ ಭಕ್ತಿಯಿಂದ, ಪಠೇತ್ = ಪಠಿಸುವರೋ, ಸಃ = ಅವರು, ನಿಖಿಲೈಃ = ಎಲ್ಲ, ಪಾಪಚಯೈಃ = ಪಾಪಸಮೂಹಗಳಿಂದ, ಮುಕ್ತಃ = ರಹಿತರು, ಭವೇತ್ = ಆಗುವರು.

ಇತಿಶ್ರೀ ವಿಜಯೀಂದ್ರಯತೀಶ್ವರ ಪ್ರಣೀತಂ ಪಾಪವಿಮೋಚನ ಸ್ತೋತ್ರಂ ಸಂಪೂರ್ಣಮ್

ಶ್ರೀ ಕೃಷ್ಣಾರ್ಪಣಮಸ್ತು

* * * * *

ಶ್ರೀಪ್ರಾಣನಾಥಾಯ ರಾಮಚಂದ್ರಾಯ ನಮಃ

ಪಾಪಕ್ಕೊಂದು ಚಿಕಿತ್ಸೆ

(ಶ್ರೀಶ್ರೀ ವಿಜಯೀಂದ್ರತೀರ್ಥಗುರುಸಾರ್ವಭೌಮರ ಪಾಪವಿಮೋಚನಸ್ತೋತ್ರದ ಕನ್ನಡಾನುವಾದ)

ಹರಿ ಹೇಳುತ್ತಾನೆ :- ಮಕ್ಕಳೇ! ಸರಿಯಾಗಿ ಓದಿ

ದೇವರು ಕಟ್ಟಿದ ಶಾಲೆ ಈ ಭೂಮಿ. ಈ ಶಾಲೆಗೆ ಸೇರಿದ ವಿದ್ಯಾರ್ಥಿಗಳು ನಾವು. ಇಲ್ಲಿ ಗುರುಗಳೂ ಇದ್ದಾರೆ. ಶಿಷ್ಯರೂ ಇದ್ದಾರೆ. ಇವರಿಗೆ ಬೇಕಾದ ಗ್ರಂಥಾಲಯವಿದೆ. ಇವರಿಗೆಲ್ಲ ಬಿಸಿಊಟದ ವ್ಯವಸ್ಥೆ ಹೊತ್ತು ಹೊತ್ತಿಗೆ ಸರಿಯಾಗಿ ಭೂನಾಮಕ ಲಕುಮಿ ನಿರ್ವಹಿಸುತ್ತಿದ್ದಾಳೆ. ವಿದ್ಯಾರ್ಥಿಗಳಲ್ಲಿ ಒಳ್ಳೆಯವರು ಕೆಟ್ಟವರೂ ಇದ್ದಂತೆ. ಅಧ್ಯಾಪಕರಲ್ಲಿಯೂ ಇದ್ದಾರೆ. ಇವೆಲ್ಲವನ್ನು ನಿರ್ವಹಿಸುವ ಪ್ರಾಂಶುಪಾಲರು ವಾಯು ದೇವರಾದರೆ ; ವಿದ್ಯಾರ್ಥಿಪಾಲಕ (ವಾರ್ಡನ್) ರುದ್ರದೇವರು. ಸಂಸ್ಥೆಯ ಅಧ್ಯಕ್ಷ ಪುಂಡರೀಕಾಕ್ಷ. ಮಕ್ಕಳಿಗೆ ಬುದ್ಧಿ ಕೊಡುವವಳು ಭಾರತೀ, ಸ್ಮರಣೆ ನೀಡುವವ ಬ್ರಹ್ಮ, ಮನನ-ಶ್ರವಣ ಮಾಡಿಸುವವ ಶೇಷ, ಆರೋಗ್ಯ ತಪಾಸಕ ಗರುಡ, ವಸ್ತ್ರ-ಧಾನ್ಯಗಳ ದಾನಿ ಇಂದ್ರ. ಹೊತ್ತು ಹೊತ್ತಿಗೆ ನೀರು ಸರಬರಾಜು ಮಾಡುವವ ವರುಣ. ಪಾಚಕ ಅಗ್ನಿ, ಬೆಳಕಿನ ವ್ಯವಸ್ಥೆ ಸೂರ್ಯ. ಅಪರಾಧ ನಿರ್ವಾಹಕ ಯಮ. ಹೊಸ ವಿದ್ಯಾರ್ಥಿಗಳ ಸೃಷ್ಟಿಕರ್ತ ಚಂದ್ರ-ಮನ್ಮಥ. ಶಬ್ದ ನಿರ್ವಾಹಕ ಗಣಪತಿ. ಹೀಗೆ ಹರಿಯು ತನ್ನ ಭೃತ್ಯರ ತಂಡವನ್ನು ಕಟ್ಟಿಕೊಂಡು ಸಾಧನೆ ಮಾಡಿಸಲು ನಮ್ಮನ್ನು ಕರೆತಂದಿದ್ದಾನೆ.

ವೇದವ್ಯಾಸಸ್ವರೂಪದಿಂದ ಶೈಕ್ಷಣಿಕ ಪಠ್ಯಪುಸ್ತಗಳನ್ನೆಲ್ಲ ಸ್ವಯಂ ರಚಿಸುವ ಮೂಲಕ ಈ ಮಕ್ಕಳಿಗೆ ಬೇಕಾದ ವ್ಯವಸ್ಥೆಗಳನ್ನೆಲ್ಲ ಮಾಡುತ್ತಾ ಆವಾಗವಾಗ ಪರೀಕ್ಷೆ ಮಾಡುತ್ತಾನೆ. ಇವನ ಪರೀಕ್ಷೆಗೆ ಸಿದ್ಧರಿರಬೇಕು. ಕೆಲವೊಮ್ಮೆ ಸುಖಕೊಟ್ಟು ಪರೀಕ್ಷಿಸಿದರೆ ಕೆಲವೊಮ್ಮೆ ದುಃಖಕೊಟ್ಟು ಪರೀಕ್ಷಿಸುತ್ತಾನೆ. ಈ ಪರೀಕ್ಷೆಯಲ್ಲಿ ಉತ್ತೀರ್ಣರಾಗುವವರು ಕೆಲವರು. ಅನುತ್ತೀರ್ಣರಾಗುವವರು ಕೆಲವರು. ಅನುತ್ತೀರ್ಣರಾದವರಿಗೆ ಒಂದು ಸಂಸ್ಥೆಯಿದೆ. ಉತ್ತೀರ್ಣರಾದವರಿಗೂ ಒಂದು

ಸಂಸ್ಥೆ ಇದೆ. ಅದನ್ನು ಸ್ವರ್ಗ-ನರಕ ಅಥವಾ ಅಂಧತಮಸ್ಸು-ಅಪವರ್ಗ ಎಂದು ಕರೆಯಬಹುದು.

ಈ ಪಾಠಶಾಲೆಯಲ್ಲಿ ಗುಂಡಾಗಿರಿ ಮಾಡುವ ಹುಡುಗರೂ ಇದ್ದಾರೆ. ವಿನೀತರಾಗಿ ಓದುವವರೂ ಇದ್ದಾರೆ. ಇನ್ನು ಕೆಲವರು ಗುಂಡಾಗಿರಿ ಮಾಡಬೇಕೋ ಓದಬೇಕೋ ಎಂದು ಗೊಂದಲದಲ್ಲಿರುವ ಸಾಧಾರಣ ಸಜ್ಜನರಿದ್ದಾರೆ. ಒಂದೊಂದು ತಂಡದಲ್ಲಿ ಗುರುಕುಲಕ್ಕೆ ಕೆಲವೊಮ್ಮೆ ಒಳ್ಳೆಯ ವಿದ್ಯಾರ್ಥಿಗಳು ಹೆಚ್ಚು ಸೇರುತ್ತಾರೆ. ಕೆಲವೊಮ್ಮೆ ಕೆಟ್ಟ ವಿದ್ಯಾರ್ಥಿಗಳು ಸೇರುತ್ತಾರೆ. ಪೂರ್ಣ ಒಳ್ಳೆಯವರೂ ಅಲ್ಲದಂತೆ ಪೂರ್ಣ ಕೆಟ್ಟವರೂ ಅಲ್ಲದಂತೆ ಇರುವ ವಿದ್ಯಾರ್ಥಿಗಳೂ ಎರಡೂ ತಂಡದಲ್ಲಿರುತ್ತಾರೆ. ಈ ಕಲಿಯುಗದಲ್ಲಿ ಬರುವ ತಂಡಗಳೂ ಬಹುತೇಕ ಮೂರನೇ ಸ್ತರದ್ದು. ಇಂತಹವರಿಗೆ ಹೇಗೆ ನಡೆದುಕೊಳ್ಳಬೇಕೆಂಬ ಶಿಕ್ಷಣದ ಅಗತ್ಯ ಬಹಳವಿದೆ. ಈ ಗುಂಪಿಗೆ ಸೇರಿದ ನಮ್ಮಂಥವರಿಗೆ ಸರಿಯಾದ ಮಾರ್ಗದರ್ಶನವಿಲ್ಲದೆ ಇದ್ದರೆ ದುಷ್ಟ ವಿದ್ಯಾರ್ಥಿಗಳ ಸಹವಾಸದಿಂದ ಆತ್ಮವಂಚನೆ ಮಾಡಿಕೊಳ್ಳುವ ಸಾಧ್ಯತೆ ಹೆಚ್ಚಿದೆ.

ಮಗನನ್ನು ತಂದೆ ಫೀಸ್ ಕೊಟ್ಟು, ವಸ್ತ್ರ, ಊಟ ಕೊಟ್ಟು ಒಳ್ಳೆಯ ಗಾಳಿ-ಬೆಳಕಿನ ಶಾಲೆಗೆ ಸೇರಿಸಿ ಉನ್ನತ ಮಟ್ಟದ ವ್ಯಾಸಂಗಕ್ಕೆ ಬೇಕಾದ ಎಲ್ಲ ವಿಧದ ಗುರುಗಳನ್ನು ಸ್ನೇಹಿತರನ್ನು ಕಲ್ಪಿಸಿಕೊಟ್ಟಿದ್ದರೂ ಇದನ್ನು ಅರ್ಥೈಸಿಕೊಳ್ಳದೆ ಬಾಲಂಗೋಚಿಯಂತ ಮನಸ್ಸಿನ ಹುಡುಗರ ಒಡನಾಟದಿಂದ ಹಾಳಾದರೆ; ತಂದೆ ಕೊಟ್ಟ ಸಾಧನ ಸಾಮಗ್ರಿಗಳೆಲ್ಲವೂ ವ್ಯರ್ಥ. ಹಾಗೇ ದೇವರು ಈ ಭೂಮಿ ಎಂಬ ಪಾಠಶಾಲೆಯಲ್ಲಿ ಸಾಧನೆಗೆ ಉಪಯುಕ್ತಗಳಾದ ನೂರಾರು ಭೋಗಸಾಮಗ್ರಿಗಳನ್ನು ಕೊಟ್ಟಿದ್ದಾನೆ. ಇದನ್ನು ದುರುಪಯೋಗ ಪಡಿಸಿಕೊಂಡಲ್ಲಿ; ಇದು ತಂದೆಗೆ ಎಸಗಿದ ದ್ರೋಹ ಎನಿಸುತ್ತದೆ. ಮಹಾಪಾಪ ಬಂದು ಅನರ್ಥಕ್ಕೀಡಾಗುತ್ತೇವೆ. ಇದನ್ನು ಅರ್ಥ ಮಾಡಿಕೊಂಡು ಇಷ್ಟು ದಿನ ಮಾಡಿದ ಪಾಪಕ್ಕೆ ಮರುಗಿ ಹರಿ ಬಳಿ ಕ್ಷಮೆ ಯಾಚಿಸಿ ಮುಂದೇನೆಂದು ಯೋಚಿಸಿರೆಂದು ಸೂಚಿಸಲು ಭೌತಿಕ ವಿಜ್ಞಾನ - ವೈದಿಕ ವಿಜ್ಞಾನಗಳಲ್ಲಿ ಸವ್ಯಸಾಚಿಗಳೆನಿಸಿದ ಶ್ರೀ ಶ್ರೀ ವಿಜಯೀಂದ್ರತೀರ್ಥರು ಪಾಪ ವಿಮೋಚನ ಎಂಬ ಸ್ತೋತ್ರವನ್ನು ಸಕಲ ಸಾಧಕರಿಗೆ ಕಿವಿ ಮಾತಿನಂತೆ ಪ್ರಸ್ತುತ ಪಡಿಸುತ್ತಿದ್ದಾರೆ.

ಪರಮಪಾಪಿ ನಾನು

ಸುಕೃತಂ ತಿಲಮಾತ್ರತುಲ್ಯಮೀಶ
ಕ್ರಿಯತೇ ನೈವ ಮಯ್ಯೈಕವತ್ಸರೇಪಿ |
ಅಪಿ ತು ಕ್ರಿಯತೇ ಸದಾಘಪೂಗಃ
ಪ್ರತಿಯಾಮಂ ಸಕಲೇಂದ್ರಿಯೈರ್ಮುಕುಂದ ||೧||

ಒಂದು ವರ್ಷಕ್ಕೆ ಎಳ್ಳಿಗೆ ಸಮಾನವಾದ ಕಿಂಚಿತ್ತೂ ಪುಣ್ಯವನ್ನು ಮಾಡೆವು. ಆದರೆ ಪ್ರತಿಯಾಮದಲ್ಲಿಯೂ ರಾಶಿ ರಾಶಿ ಪಾಪಸಂಗ್ರಹಣೆ ಈ ಇಂದ್ರಿಯಗಳ ಮೂಲಕ ನಡೆಯುತ್ತಿದೆ.

ಒಂದು ಸೂರ್ಯೋದಯಕ್ಕೆ ಸರಿಯಾಗಿ ಅರ್ಘ್ಯ ಕೊಡದಿದ್ದರೆ ನರಕದಲ್ಲಿ ರಕ್ತದ ಮಡುವಿನಲ್ಲಿ ಮುಳುಗಿಸುತ್ತಾರೆ. ಹೀಗಿರಲು ನಮ್ಮಿಂದ ಎಷ್ಟು ಸೂರ್ಯೋದಯಗಳು ತಪ್ಪಿವೆ? ಹಾಗಾದರೆ ಎಷ್ಟುಕಾಲ ಇಂತಹ ಶಿಕ್ಷೆ? ಒಂದು ಇರುವೆಯನ್ನು ಕೊಂದರೆ ಸಾವಿರ ವರ್ಷ ನರಕವಿದೆ ಎಂದ ಬಳಿಕ ಎಷ್ಟೆಲ್ಲ ಜೀವಹಾನಿ ನಮ್ಮಿಂದ ಕ್ಷಣಕ್ಷಣಕ್ಕೆ ನಡೆಯುತ್ತಿರುತ್ತದೆ. ಇದಕ್ಕಿರುವ ಶಿಕ್ಷೆಗಳು, ಕಾಲಾವಧಿ ಎಷ್ಟು? ಹೀಗೆ ಗಣಿಸಿ ಗುಣಿಸಿದರೆ ಹರಿಯೇ ಬೆರಗಾಗುವಷ್ಟು ಪಾಪಗಳನ್ನು ಜೀವ ಮಾಡುತ್ತಿದ್ದಾನೆ.

ತಿನ್ನಬಾರದ್ದನ್ನು ತಿಂದು ಮಾಡಬಾರದ್ದನ್ನು ಮಾಡಿ ವೈದ್ಯರ ಬಳಿ ಹೋದರೆ ವೈದ್ಯರು ಅವನ ರಕ್ತ, ಮೂತ್ರ ಎಲ್ಲ ಪರಿಶೋಧಿಸುತ್ತಾರೆ. ಅದರಲ್ಲಿ ಸಕ್ಕರೆ ಕಾಯಿಲೆ, ಹೃದಯರೋಗ, ಕ್ಯಾನ್ಸರ್, ಹರ್ನಿಯಾ, ಮೂತ್ರರೋಗ ಎಲ್ಲವೂ ಕಂಡು ಬಂದಲ್ಲಿ ಬೆರಗಾದ ವೈದ್ಯನು ಚಿಕಿತ್ಸೆ ನೀಡಲಾಗದೆಂದು ಕೈಚೆಲ್ಲುತ್ತಾನೆ. ಆದರೆ ಇಂತಹ ಸಾವಿರ ರೋಗಗಳಿದ್ದು; ಚಿಕಿತ್ಸೆಯೇ ಇಲ್ಲದ ಪಾಪಕರ್ಮಗಳಿದ್ದಾಗಲೂ, 'ಅಯ್ಯೋ! ಪಾಪ ಬಂತಲ್ಲ' 'ಇನ್ನೊಮ್ಮೆ ಇಂತಹ ಪಾಪಕರ್ಮವೆಸಗೆನು' ಎಂದು ಮರುಗುವ ಪಾಪಿಷ್ಟರೋಗಿಗಳಿಗೂ ಚಿಕಿತ್ಸೆ ಕೊಡುವ ಮುಕುಂದ ನೀನು.

ಸರಿಯಾಗಿ ಉಪಯೋಗಿಸಿಕೊಂಡಲ್ಲಿ ನೂರು ವರ್ಷ ಬಾಳುವ ಇಂದ್ರಿಯಗಳನ್ನು ಕೊಟ್ಟವನು ನೀನು. ಇಂತಹ ನಿಖರಪತ್ರ (ಗ್ಯಾರಂಟಿಕಾರ್ಡ್) ಕೊಡುವ ಕಂಪನಿಗಳು ಜಗತ್ತಿನಲ್ಲೆಲ್ಲೂ ಇಲ್ಲ. ಏಕೆಂದರೆ ನೂರು ವರ್ಷ ಕಂಪನಿ ಮಾಲಿಕನೇ ಬದುಕಿರಲಾರ.

ಹೀಗಿರಲು ಕಂಪನಿಗೆ ನೂರು ವರ್ಷ ಗ್ಯಾರಂಟಿ ಕೊಡುವರ್‍ಯಾರು? 'ಸಾಧನೆಗೆ ಬಳಸಿಕೊಳ್ಳಿ' ಎಂದು ಕೊಟ್ಟ ಇಂದ್ರಿಯಗಳನ್ನೆಲ್ಲ ಭೋಗಕ್ಕೆ ಬಳಸಿಕೊಳ್ಳುತ್ತಿರುವ ವಂಚಕರು ನಾವು. ಒಂದೊಂದು ವರ್ಷಕ್ಕೆ ಹತ್ತಾರು ಸಾವಿರ ಧನ ಗಳಿಸುತ್ತೇವೆ. ಮದುವೆ, ಉಪನಯನ, ನಾಮಕರಣ, ಗೃಹಪ್ರವೇಶ, ಹಬ್ಬ, ಊಟ, ಔತಣ, ಜಾತ್ರೆ, ವಿನೋದ ಹೀಗೆ ಸಾವಿರ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಕಾಲಹರಣ ಮಾಡುತ್ತೇವೆ. ಆದರೆ ಎಳ್ಳುಕಾಳಿನಷ್ಟು ಸಹ ಪುಣ್ಯಗಳಿಸಲಾರೆವು.

ಸಾಧಕ :- ರಾಯರೆ ! ದಿನ ನಿತ್ಯ ಸ್ನಾನ, ಸಂಧ್ಯೆ, ಉಪವಾಸ, ಹರಿಕಥೆ ಎಲ್ಲವೂ ನಡೆಯುತ್ತಿರುವಾಗ ಪುಣ್ಯವಿಲ್ಲ ಎಂದು ಹೇಗೆ ಹೇಳುವಿರಿ?! ನಮ್ಮಂಥ ಪುಣ್ಯವಂತರ್‍ಯಾರು?

ರಾಯರು :- ಹೌದು ಕರ್ಮಗಳನ್ನೇನೋ ಮಾಡಿದೆ ಸತ್ಯ. ಆದರೆ ಇದರ ಸಮರ್ಪಣೆಯ ಮರ್ಮವನ್ನೆಷ್ಟು ಅರಿತು ಮಾಡಿದೆ?!. ಕರ್ಮಾಚರಣೆಯೇ ಪುಣ್ಯ ಎನಿಸಿದಲ್ಲಿ ಈಗಾಗಲೇ ಸಾವಿರಾರು ಕೊಡಗಳಿಂದ ಗುಡಿಗಳಲ್ಲಿ ಹರಿಗೆ ಅಭಿಷೇಕಕ್ಕಾಗಿ ನೀರೆರೆದವರಿಗೆಲ್ಲ ಅಪರೋಕ್ಷ ದರ್ಶನ ಒದಗಬೇಕಿತ್ತು? ನೋಡು!! ಕರ್ಮವೇ ತಾರಕ. ಆದರೆ ಅದರ ಮರ್ಮವರಿತಾಗ ಮಾತ್ರ. ಕರ್ಮದ ಮರ್ಮವನ್ನರಿಯದೆ ಹರಿಗೆ ಸುರಿದ ನೀರಿಗೆ ಫಲವಾಗಿ ನಿನಗೂ ನೆಗಡಿ ಕೆಮ್ಮು ಎಂಬ ಶೀತ ಫಲ ದೊರೆತೀತೆ ವಿನಾ ಭವ ಭೀತಿ ಹೋಗದು. ಆದ್ದರಿಂದ ಕರ್ಮದ ಹಮ್ಮು ಹೋಗಬೇಕು. ಕರ್ತೃತ್ವ ಅಭಿಮಾನ ಬಿಟ್ಟು ಕರ್ತಾರ - ಭೋಕ್ತಾರ ಹರಿ ಎಂಬ ಎಚ್ಚರದಲ್ಲಿ ನಿಷ್ಕಾಮನೆಯಿಂದ ಸಮರ್ಪಿಸುವ ಕರ್ಮವೇ ಪುಣ್ಯಪ್ರದವಾಗಿದೇ ವಿನಾ ಜಡವಾದ ಕರ್ಮವು ಭವ ಕೆಡಿಸದು!!. ನಾವು ಉಪವಾಸ ಮಾಡುತ್ತೇವೆ. ಸಮರ್ಪಿಸುವ ರೀತಿಯನ್ನು ಗುರುಗಳಿಂದ ತಿಳಿದಿಲ್ಲ. ತುಳಸಿ ಕಿತ್ತುತ್ತೇವೆ. ತುಳಸಿಯ ಮಹತ್ತ್ವ ತಿಳಿಯೆವು. ಶಾಲಗ್ರಾಮ ಪೂಜಿಸುತ್ತೇವೆ. ಹರಿಯು ಅಲ್ಲಿ ಎಷ್ಟು ರೂಪಗಳಿಂದ ಅಡಗಿದ್ದಾನೆಂದು ತಿಳಿಯೆವು. ಊಟ ಹಾಕುತ್ತೇವೆ. ಎಷ್ಟು ಭಗವದ್ರೂಪಗಳ ತೃಪ್ತಿ ಇದರಿಂದಾಯಿತೆಂದರಿಯೆವು. ಎಲ್ಲವೂ ಇದೆ. ಆದರೆ ಯಾವುದೂ ಪ್ರಯೋಜನಕ್ಕೆ ಬಾರವು. ರಾಷ್ಟ್ರ ಮುದ್ರೆಯಿಲ್ಲದ ನಾಣ್ಯದಂತಾಗಿವೆ ನಮ್ಮ ಬದುಕು.

ಕೃತಜ್ಞತೆ ಇಲ್ಲದ ಬದುಕು

ನ ಶಿರಶ್ಚಲತೀಶ ಮೇ ಕದಾಪಿ
ಶ್ರುತಿಜಾನಂದಭರೇಣ ಸದ್ಗುಣಾನಾಮ್ |
ಅಪಿ ತು ಪ್ರಭು-ಬಂಧು- ದುರ್ಗುಣಾನಾಂ
ಶ್ರವಣಾರ್ಥಂ ಚಲಿತಂ ಭವತ್ಯಶಂಕಮ್ ||೨||

ಹರಿಯೇ! ಹರಿಗುಣಗಳ ಕಥೆ ಕೇಳಿ ತಲೆತೂಗಬೇಕಾದ ನಾನು ಬಾಂಧವರ ದುರ್ವಾರ್ತೆಗಳಿಗೆ ತಲೆದೂಗುತ್ತಿದ್ದೇನೆ. ಉದ್ಧರಿಸು!!

ಒಬ್ಬ ಕವಿ ಹೇಳುತ್ತಾನೆ :- ಹರಿಯು ಆದಿಶೇಷನಿಗೆ ಕಿವಿಗಳನ್ನು ಕೊಡಲಿಲ್ಲವಂತೆ! ಏಕೆಂದರೆ ಕಿವಿ ಹೊಂದಿದ ಶೇಷನು ರಾಮಾಯಣದ ಕಥೆಯನ್ನು ಕೇಳುತ್ತಾನೆ. ರಾಮಾಯಣದ ಕಥೆ ಕೇಳಿದ ಪ್ರತಿಯೊಬ್ಬನೂ ತಲೆದೂಗಲೇ ಬೇಕು. ಒಂದು ವೇಳೆ ಶೇಷನೂ ತಲೆದೂಗಿದರೆ ಅವನ ತಲೆಯ ಮೇಲಿರುವ ಲೋಕವೂ ಚಲಿಸಿ ಭಗ್ನವಾದೀತೆಂಬ ಭಯದಿಂದ ತಲೆಯನ್ನೇ ಕೊಡಲಿಲ್ಲವಂತೆ.

ಅಕರ್ಣಮಕರೋಚ್ಛೇಷಂ ವಿಧಿರ್ಬ್ರಹ್ಮಾಂಡಭಂಗಧೀಃ |

ಶ್ರುತ್ವಾ ರಾಮಕಥಾಂ ರಮ್ಯಾಂ ಶಿರಃ ಕಸ್ಯ ನ ಕಂಪತೇ || ಎನ್ನುತ್ತಾನೆ. ಈ ಶ್ಲೋಕದ ಅಂತರಂಗವಿಷ್ಟೇ; 'ಭೂಮಿಯ ಪ್ರತಿಯೊಬ್ಬ ಮಾನವನೂ ರಾಮಾಯಣ ಭಾಗವತಗಳ ಶ್ರವಣ ಮಾಡಿ ತಲೆದೂಗಿರಿ' ಎಂದು.

ನಾವು ಕ್ಷಣಕಾಲವಾದರೂ ಲೋಕದ ವಿಚಾರಗಳಿಂದ ವಿರಕ್ತರಾಗಿ ಭಕ್ತಿಯಿಂದ ಪುರಾಣ ಪುಣ್ಯ ಕಥೆಗಳಲ್ಲಿ ಭಾಗವಹಿಸಬೇಕು. ವೇದಶಾಸ್ತ್ರ ಇತಿಹಾಸ ಪುರಾಣಗಳಲ್ಲಿ ವರ್ಣಿಸಲ್ಪಟ್ಟ ಹರಿಗುಣಗಳನ್ನು ಆಲಿಸಿ ಸಂತಸದಿಂದ ತಲೆದೂಗಬೇಕು. ಆ ಕ್ಷಣವೇ ಬದುಕಿನ ಸಾರ್ಥಕದ ಕ್ಷಣ. "ತಸ್ಯರ್ತೇ ಯ ಕ್ಷಣೋ ನೀತಃ ಉತ್ತಮ ಶ್ಲೋಕವಾರ್ತಯಾ" ಎನ್ನುತ್ತದೆ ಭಾಗವತ. ಆದರೆ ಇಂದು ಟೆಲಿವಿಷನ್, ಇಂಟರ್‌ನೆಟ್, ಮೊಬೈಲ್ ಮುಂತಾದವುಗಳ ಜೊತೆಗೆ ವೃತ್ತಪತ್ರಿಕೆಗಳಲ್ಲಿ ಧನ-ಕಾಮ ಪಿಪಾಸುಗಳಾದ ಷಡ್ವರ್ಗಗಳಿಂದ ಕೊಳೆತು ಹೋದ ವ್ಯಕ್ತಿತ್ವವುಳ್ಳ ವಿಷಯಲಂಪಟಲಫಂಗರ ವಾರ್ತೆಗಳನ್ನು ಕೇಳಿ ಹೌಹಾರುತ್ತೇವೆ. ತಲೆದೂಗುತ್ತೇವೆ. ಬೆರಗಾಗುತ್ತೇವೆ. ಇದೆಲ್ಲ ನಮ್ಮ ಆತ್ಮಸಾಧನೆಗೆ ಪೂರಕವಾದವುಗಳೇ? ಯೋಚಿಸಿ!. ಆದರೆ ಶಿಷ್ಟರಿಗೆ ತುಷ್ಟಿಪ್ರದನಾದ ಹರಿಯ ಉತ್ಕೃಷ್ಟ ಗುಣ ಚಿಂತನೆಯು

ಭವಕಾಂತಾರದ ಚಿಂತೆಯನ್ನು ಚಿತೆಗೇರಿಸಿ ನಮ್ಮನ್ನು ಮುಕುತಿಯ ಸೋಪಾನಕ್ಕೇರಿಸುತ್ತದೆ. ಎಂಬುದನ್ನು ಮರೆಯದಿರಿ!

ಬಂಧುಗಳೇ! ಪರರ ಆಸ್ತಿಯನ್ನು ಮೆಲ್ಲುವಾಗ ಅವರ ಸ್ಮರಣೆಯೂ ಇಲ್ಲದಂತೆ ಮತ್ತರಾಗುವುದು. ಎಂಥಹ ದ್ರೋಹವೆಂದು ಒಮ್ಮೆ ಯೋಚಿಸಿ!. ಹೌದೆನಿಸಿದಲ್ಲಿ ಅಂತಹವರು ನಾವೇ ಎಂದು ನಿರ್ಣಯಿಸಿಕೊಳ್ಳಿರಿ!. ಏಕೆಂದರೆ; ನಮ್ಮ ಇಂದ್ರಿಯ-ಮನೆ-ದೇಹ-ಹೆಂಡತಿ-ಮಕ್ಕಳು, ಧನ, ಐಶ್ವರ್ಯ - ಜಾತಿ - ಸ್ಥಾನ - ಕೀರ್ತಿ ಪ್ರತಿಯೊಂದರ ವಾರಸುದಾರ ಶ್ರೀಹರಿ. ನಾನೇನೇ ತಿಂದರು ಅದು ಅವನೆಂಜಲು. ಎಂಜಲು ತಿನ್ನುವ ನಾಯಿಯೂ ಯಜಮಾನನ್ನು ಕಂಡಾಗ ಅನ್ನಹಾಕಿದವನೆಂಬ ಕೃತಜ್ಞತೆಯಿಂದ ಬಲವಾಡಿಸುತ್ತದೆ. ಮೈನೆಕ್ಕಲು ಹೋಗುತ್ತದೆ. ನೆಕ್ಕಿಸಿಕೊಳ್ಳುವುದು ಬಿಡುವುದು ಅವನ ಇಚ್ಛೆ. ಆದರೆ ನಾಯಿ ತನ್ನ ಕರ್ತವ್ಯ ನಿರ್ವಹಣೆಯಲ್ಲಿ ವಂಚಕತನವೆಸಗದು. ಆದರೆ ಮನುಷ್ಯನೆಂಬ ನಾಯಿ ಹರಿಕೊಟ್ಟ ಸಕಲ ಸಾಧನೆ ಸಾಮಗ್ರಿಗಳನ್ನು ಸ್ವಾರ್ಥಕ್ಕಾಗಿ ದುರ್ಬಳಕೆ ಮಾಡಿಕೊಂಡು ಸುಖಿಸುತ್ತಾ ಕ್ಷಣವೂ ಅವನನ್ನು ಸ್ಮರಿಸದೆ ವರ್ತಿಸಿದರೆ ಇವನೆಂತಹ ಹೀನನಾಯಿ ಎಂದು ಯೋಚಿಸಿರಿ!. ಇದನ್ನೇ ಪುರಂದರರು ರೋಷದಿಂದ ಗುಡುಗಿದ್ದಾರೆ.

"ನಾಯಿ ಬಂದದಪ್ಪ ಅಣ್ಣ ಅತ್ತಲಾಗಿರಿ! ನಾಯಿ ಎಂದರೆ ನಾಯಿಯಲ್ಲ. ಮಾನವನೆಂಬ ಹೀನ ನಾಯಿ! ಎಂದು. ಈ ಅರ್ಥದಲ್ಲಿಯೇ ವಿಜಯೀಂದ್ರ ತೀರ್ಥರು ಬಂಧು ಸುಖದಲ್ಲಿ ತಲೆದೂಗುವ ನೀವು ಲೋಕೈಕ ಬಂಧುವಿನ ವಾರ್ತೆಯ ಸುಖದಲ್ಲಿ ತಲೆದೂಗಿರೆಂದು ನಮ್ಮನ್ನು ಹೀಗೆ ಎಚ್ಚರಿಸಿದ್ದಾರೆ.

ಕಂದರ್ಪನೆಂಬ ಸರ್ಪನ ಅಪ್ಪುಗೆ ಸಾಕೆನ್ನಿ!!

ಶ್ರವಣೇ ಶ್ರವಣಾಯ ಸತ್ಕಥಾಯಾ
ನ ಯತೇತೇ ತವ ಪುಣ್ಯಕೀರ್ತನಸ್ಯ |
ಅಪಿ ತು ವ್ಯಭಿಚಾರಲೋಕವಾರ್ತಾ
ಶ್ರವಣಾಯೈವ ಮಹಾದರಂ ಪ್ರಯಾತಃ ||೩||

ಹರಿಯೇ ! ನಿನ್ನ ಚರಿತ್ರೆಗೆ ನನ್ನ ಕಿವಿಯತ್ತಿಸವು. ಲೋಕದಲ್ಲಿನ ಹಾದರದ ವಾರ್ತೆಗಳಿಗೆ ತಾವಾಗಿಯೇ ಮುನ್ನುಗ್ಗುವವು. ಇದಕ್ಕೊಂದು ಚಿಕಿತ್ಸೆ ನೀಡು.

ಅಬ್ಬಬ್ಬ! ಹಗಲೂ ರಾತ್ರಿ ಕಾಡುವ ಭಯಂಕರ ದರ್ಪದ ಸರ್ಪ ಕಂದರ್ಪ. ಎಂತಹ ಜಿತೇಂದ್ರಿಯರೆಂಬ ದಿಗ್ಗಜಗಳನ್ನು ಕಚ್ಚಿ ಮಲಗಿಸುವ ಕಿಚ್ಚು ಈ ಕಂದರ್ಪನದ್ದು. ಜಗತ್ತನ್ನೆಲ್ಲ ಜಯಿಸಿ ಬಂದ ರಾಜನು ಮನೆಗೆ ಬಂದೊಡನೆ ಈ ಕಾಮನಿಗೆ ವಶನಾಗಲೇಬೇಕು. ಕಾಮದ ಆಸಕ್ತಿ ಸದ್ಗೃಹಸ್ಥನಿಗೆ ಬೇಕು. ಜಗತ್ತಿನ ಬೆಳವಣಿಗೆಗಾಗಿ ಪ್ರಜಾಸರ್ಗಕ್ಕಾಗಿ ಮಾತ್ರ. ಇದಕ್ಕಾಗಿ ಹರಿಯೇ ಕರುಣೆಯಿಂದ ನೀಡಿದ್ದಾನೆ. ಆದರೆ ಆಹಾರವನ್ನು ಪಕ್ವಗೊಳಿಸಲು ಕೊಟ್ಟಿರುವ ಅಗ್ನಿಯನ್ನು ಅದಕ್ಕಾಗಿ ಉಪಯೋಗಿಸಿಕೊಳ್ಳದೆ ಅಗ್ನಿಗೆ ತಾವೇ ಆಹುತಿಯಾಗುವುದು ಮೂರ್ಖತನವಲ್ಲವೆ? ಕಾಮಿನಿಯರ ಸ್ತನಗಳಾಗ್ರದಲ್ಲಿ ಕಮನೀಯನೇತ್ರಗಳ ತುದಿಯಲ್ಲಿ, ಅರವಿಂದ, ಅಶೋಕ, ಚೂತ, ನವಮಲ್ಲಿಕಾ, ನೀಲೋತ್ಪಗಳಿಂದ ಹೊಸೆದ ಐದು ಬಾಣಗಳನ್ನು ಧರಿಸಿ ಮನ್ಮಥನಿದ್ದಾನೆ. ದೃಷ್ಟಿಯಿಟ್ಟು ಅಲ್ಲಿ ನೋಡಿದ ಜನರನ್ನು ಕೆಳಕ್ಕೆ ಹೊಡೆದು ಬೀಳಿಸುತ್ತಾನೆ. ಕ್ಷತ್ರಿಯ ಬಾಣಕ್ಕೆ ಗುರಿಯಾದವ ಮರುದಿನವೇ ಎದ್ದಾನು. ಆದರೆ ಈ ಕಾಮಬಾಣ ಪೀಡಿತ ಪ್ರತಿಕ್ಷಣವೂ ಜೀವನ ಪೂರ್ತಿ ಸೊರಗಿ ಬೆಂದು ಬಸವಳಿದು, ತನ್ನ ಸಾರ್ಥಕವಾಗಿ ಸಾಗಬೇಕಿದ್ದ ಸಂಸಾರಯಾತ್ರೆಯನ್ನು ನಿರರ್ಥಕವಾಗಿ ನೀಗಿಸಿಬಿಡುತ್ತಾನೆ. ಈತನಿಗೆ ವೇದಾಂತದ ಮಾತುಗಳಾಗಲೀ, ಆಹಾರದ ನಿಯಂತ್ರಣವಾಗಲಿ, ತಪಸ್ಸಾಗಲೀ, ಏಕಾಂತವಾಗಲೀ, ಪರಿಪೂರ್ಣ ಚಿಕಿತ್ಸೆಯಾಗಲಾರವು. ಏಕೆಂದರೆ ಇವುಗಳೆಲ್ಲ ಮನಸ್ಸು ಸರಿಯಿದ್ದವರಿಗೆ. ಕಾಮಬಾಣಹತನ ಮನಸ್ಸು ಜಾರಿ ಬಿದ್ದಿರುತ್ತದೆ. ಯಾವಾಗಲೂ ಸ್ತ್ರೀಯರ ಗುಹ್ಯ, ಜಘನ, ನೀಳ ನಾಭಿ, ಬಲಿಷ್ಠ ಸ್ತನಮಂಡಲ, ನುಣುಪಾದ ಸೊಂಟ, ಕೆನೆಯಂತಹ ಕೆನ್ನೆ, ತೊಂಡೆ ಹಣ್ಣು ತುಟಿಗಳ ಸ್ಮರಣೆಯಲ್ಲಿಯೇ ದಾಪುಗಾಲುಗಳನ್ನಿಡುತ್ತಾ ಮತ್ತೊಬ್ಬರ ಸುಖದ ಅಪ್ಪುಗೆಯಲ್ಲಿ ತನ್ನ ಸುಖದ ಅನುಸಂಧಾನಕ್ಕೆ ಮುಂದಾಗುತ್ತದೆ. ಅದಕ್ಕೊಬ್ಬ ಕವಿ ಒಂದು ಅರ್ಥಗರ್ಭಿತವಾದ ಮಾತನ್ನು ಹೇಳುತ್ತಾನೆ.

ಸ್ವಕೀಯಂ ಹೃದಯಂ ಭಿತ್ವಾ ನಿರ್ಗತೌ ಯೌ ಪಯೋಧರೌ |
ಅನ್ಯದೀಯಸ್ಯ ಹೃದ್ಯಸ್ಯ ಭೇದನೇ ಕಾ ಕೃಪಾ ತಯೋಃ ||

"ಚೆಲುವೆಯದ್ದಾದ ಮುದ್ದಾದ ಎದೆಯನ್ನೇ ಸೀಳಿಕೊಂಡು ಹೊರಬಂದ ಪಯೋಧರಗಳಿಗೆ ಇನ್ನೊಬ್ಬರ ಹೃದಯವನ್ನು ಮೀಟುವಲ್ಲಿ ಕರುಣೆ ಇಲ್ಲ". ಸ್ತನಗಳಿಗೆ ಸ್ಥಾನ ಕೊಟ್ಟ ಯುವತಿಯ ಎದೆಯನ್ನೇ ಸೀಳಿ ಬಂದ ಬಳಿಕ ಮತ್ತೊಬ್ಬರ ಹೃದಯವನ್ನು ಸೀಳುವುದು ದೊಡ್ಡ ಸಂಗತಿಯಲ್ಲ.

ಆದರೆ ಒಂದು ನೆನಪಿಡಿ. ಅನ್ಯಸ್ತ್ರೀಯರ ದರ್ಶನದ ಸುಖಕ್ಕೆ ಮೈಮರೆತರೆ ಪುಣ್ಯಾತ್ಮರ ದರ್ಶನದ ಸುಖವೆಲ್ಲ (ಪುಣ್ಯವೆಲ್ಲ) ಹೊರಟುಹೋಗುತ್ತದೆ. ಅನ್ಯಸ್ತ್ರೀಯರ ಸ್ಪರ್ಶದಿಂದ; ಹರಿಯನ್ನು- ಶಾಸ್ತ್ರವನ್ನು ಸ್ಪರ್ಶಿಸಿ ಬಂದ ಪುಣ್ಯವೆಲ್ಲ ಸವೆಕಲು ನಾಣ್ಯದಂತಾಗುತ್ತದೆ. ಕಾಮಿನಿಯನ್ನು ಗೆದ್ದವರಿಗೆ ಮುಕುತಿಯ ಸೋಪಾನ. ವನಿತಾ ವಿತ್ತಗಳೆರಡು ಮೋಕ್ಷಕ್ಕೆ ಮಹಾಮಾರಿಗಳೆನಿಸಿವೆ.

ಜೀವನಿಗೆ ಯಾರದ್ದೋ ವ್ಯಭಿಚಾರದ ದೃಶ್ಯಾವಳಿಗಳನ್ನು ನೋಡುವುದರಲ್ಲಿರುವ ಆಸಕ್ತಿ ಶಾಸ್ತ್ರಾವಲೋಕನದಲ್ಲಿಲ್ಲ. ಯಾರದ್ದೋ ವ್ಯಭಿಚಾರ ಕರ್ಮದ ಬಗ್ಗೆ ಶ್ರವಣ ಮಾಡುವ ಆಸಕ್ತಿ; ಹರಿಯ ಜಾರಕರ್ಮಗಳ ಅಂತರಂಗವನ್ನು ಜಾಲಾಡುವುದರಲ್ಲಿಲ್ಲ. ರೂಪ ಹೊತ್ತ ರಾಕ್ಷಸ ಸ್ತ್ರೀಯರು ಕಲಿಯುಗದಲ್ಲಿ ಜನಿಸಿದ್ದಾರೆ. ಅವರಿಗೊಲಿಯ ಹೋದರೆ ನರಕ ನಲಿದು ಎದುರಾಗುತ್ತದೆ. ಕೆಂಡಕ್ಕಿಂತ ಕೆಂಪಾಗಿ ಕಾಯ್ದ ಬಲಿಷ್ಠ ಗಾತ್ರದ ಬೆಲೆವೆಣ್ಣುಗಳ ಲೋಹದ ದೇಹಗಳನ್ನು ಸಾವಿರಾರು ಕಲ್ಪ ಆಲಂಗಿಸಿಕೊಂಡೇ ನರಳಬೇಕಾಗುತ್ತದೆ.

ಹರಿಯು ಕಿವಿಗಳನ್ನು ನೀಡಿರುವುದು ಹರಿಕಥಾ ಶ್ರವಣಕ್ಕಾಗಿ. ಶ್ರವಣ ಮನನಕ್ಕಾಗಿ, ಮನನ ಮೋಕ್ಷಕ್ಕಾಗಿ. ಮೋಕ್ಷ ನಿತ್ಯ ಸುಖಕ್ಕಾಗಿ. 'ಕ್ಷಣವೂ ಹರಿಕಥಾ ಶ್ರವಣವಿಲ್ಲದೆ ಇರಬೇಡ' ಎಂದು ಶ್ರೀಮದಾಚಾರ್ಯರು ಅಪ್ಪಣೆ ಕೊಡಿಸಿದಂತೆ ನಡೆದಲ್ಲಿ ಪರಮಪದವಿ ನಿಶ್ಚಿತ. 'ಪವಿತ್ರಾಣಾಂ ಪವಿತ್ರಂ' ಮಂಗಲಾನಾಂ ಮಂಗಲಂ' ಎಂಬ ಬಿರುದು ಹರಿಕಥಾಕ್ಕೆ ಮಾತ್ರ. ಇದರಂತ ಪುಣ್ಯಕರವಾದದ್ದು ಮತ್ತೊಂದಿಲ್ಲ.

ವಾದಿರಾಜರು **'ರೋಮ್ಣಾಂ ಹರ್ಷಣಕಾರಿಣೀ ಶ್ರವಣತಃ ಪಾಪೌಘ ವಿಧ್ವಂಸಿನೀ'** ಎಂದರೆ 'ಜಗನ್ನಾಥದಾಸರು-' **ಶ್ರವಣ ಮನಕಾನಂದ ವೀವುದು ಭವಜನಿತ ದುಃಖಗಳ ಕಳೆವುದು. ವಿವಿಧ ಭೋಗಗಳಿಹ ಪರಂಗಳಲಿತ್ತು ಸಲಹುವುದು''** ಎಂದಿದ್ದಾರೆ. ನಿಜವಾದ ಶ್ರವಣಸುಖವನ್ನರಿತವರಿಗೆ ಅನ್ಯಶ್ರವಣದಲ್ಲಿ ಅನಾಸಕ್ತಿ ಮೂಡುತ್ತದೆ. ಅನ್ಯಸುಖದ ವಾರ್ತೆ ಕೇಳದಿರಲು ಯತ್ನ ನಡೆಯಲಿ. ಹರಿಕಥೆ ಕೇಳಲು ಆದರ ಹುಟ್ಟಲಿ. ಈ ಕ್ರಮದ ಚಿಕಿತ್ಸೆ ಹರಿಯೇ! ನಿನ್ನಿಂದ ನಿತ್ಯ ದೊರೆಯಲಿ.

ಒಳಜಾರಿ ಬಿದ್ದವಗೆ ನರಹರಿಯೇ ದಾರಿ
ಸ್ತ್ರೀಜಿತನು ಹರಿಪುರಕ್ಕೆ ನಿತ್ಯ ಕಡು ವೈರಿ.
ತಿಳಿದು ಹರಿಕಥೆ ಕೇಳಿ ಮುಕುತಿ ಪಥವೇರಿ
ವಿಜಯವನು ಸಾಧಿಸೆಲೊ ನಿನ ಕಾವ ಶೌರಿ.

ಅಕ್ಷಿಗೇ ಕುಕ್ಷಿದಳು ಕಾಮಾಕ್ಷಿ

ನ ಮಮಾಕ್ಷಿಯುಗಂ ಪ್ರವರ್ತತೇ
ಶ್ರೀ ಭಗವಚ್ಛಾಸ್ತ್ರಕುಲಾವಲೋಕನಾಯ |
ಅಪಿ ತು ಧ್ರುವಬಾಲನರ್ತಕೀನಾಂ
ಗಣಿಕಾನಾಂ ಪರಿನರ್ತನಾದಿದೃಷ್ಟ್ಯೈ ||೪||

ಹರಿಯೇ! ನನ್ನ ಕಣ್ಣು ತಿಳಿವಿನ ಸಾಗರದಂತಿರುವ ಶಾಸ್ತ್ರಗಳೆಡೆ ಸಾಗದು. ಹೊರತು ಷೋಡಶಿಯರಾದ ಬಿಚ್ಚೆದೆಯ ನರ್ತಕಿಯರ ಕಾಮದ ಕಾವಿನ ಹೆಜ್ಜೆಗಳೆಡೆ ಚಲಿಸುತ್ತಿದೆ. ಉದ್ಧರಿಸು!!

ಆಹಾ! ಎಂಥಹ ಸತ್ಯವಾದ ನುಡಿ. ವಿಜಯೀಂದ್ರರು ನಿಜವಾಗಿ ಇಂದ್ರನಂತೆಯೇ ಇದ್ದಾರೆ. ಕ್ಷತ್ರಿಯನಿಗಿರುವ ದೂರದೃಷ್ಟಿ. ಗುರಿ ಮುಟ್ಟಿ ಕಾರ್ಯ ಸಾಧಿಸುವ ಛಲ ಸಹಜವಾಗಿರುವಂತೆ ವಿಜಯೀಂದ್ರರೂ ಅಂದೇ ಇಂದಿನ ಜಗತ್ತಿನ ಜನರ ಭಾವನೆಗಳನ್ನು ಕಂಡವರು. ಜನರ ಭಾವನೆಗೆ ತಕ್ಕ ಚಿಕಿತ್ಸೆಯನ್ನು ನೀಡಿದ ಮಹಾಮೇಧಾವಿ ಧೀಮಂತ ಧಿಕ್ಷಣರಿಗೂ ಮೂರ್ಧನ್ಯರು. ಅಪರೋಕ್ಷಜ್ಞಾನಿಗಳು. ಇದಕ್ಕೆ ಇವರ ಈ ಮಾತೇ ಸಾಕ್ಷಿ.

ಇಂದು ಎಲ್ಲಿ ನೋಡಿದರೂ ಕಾಮಾಕ್ಷಿಯರದ್ದೇ ಆರ್ಭಟ. ಇದಕ್ಕಾಗಿ ಸಾವಿರ ಚಾನಲ್‌ಗಳು. ಕಂಪ್ಯೂಟರ್-ಇಂಟರ್‌ನೆಟ್-ಮೊಬೈಲ್‌ಗಳಲ್ಲಿ ಇರುವ ಅಶ್ಲೀಲ ದೃಶ್ಯಗಳು ಜಗತ್ತನ್ನೇ ಬೆತ್ತಲಾಗಿ ತೋರಿದಂತಿದೆ. ಇನ್ನು; ಯೌವ್ವನದ ಮೊಳಕೆ ಒಡೆಯುವಾಗಲೇ ಪುರುಷರಿಗೆ ಮೋಹಜಾಲ ಬೀಸಿ; ಅವರ ಹೃದಯ ಒಡೆಯುವ ಒನಕೆ ಓಬವ್ವರೇ ಜಾಸ್ತಿಯಾಗಿದ್ದಾರೆ. ಓಬವ್ವ ಶತ್ರುಗಳಿಗೆ ಒನಕೆ ಹಿಡಿದರೆ; ಇವರು ಸಜ್ಜನರ ಹೃದಯಕ್ಕೇ ಒನಕೆ ಹೊಡಿಯುತ್ತಾರೆ. "ಮಾನಿನಿಯರು ಮನೆಗೆ ಭೂಷಣ. ಮಹನೀಯರು ದುಡಿಮೆಗೆ ಭೂಷಣ" ಎಂದಿದ್ದ ಕಾಲ ಬದಲಾಗಿ ಮಾನಿನಿಯರೇ

ವ್ಯಾಪಾರಕ್ಕೆ ಕೇಂದ್ರವಾಗಿದ್ದಾರೆ. ಕಂಡ ಕಂಡಲ್ಲಿ ಇವರದ್ದೇ ಭರಾಟೆ. ಲಜ್ಜೆಯ ಬಿಟ್ಟು ವರ್ತಿಸಲು ಸೈ. ನರ್ತಿಸಲು ಸೈ. ಎನ್ನುತ್ತಾರೆ. ಅವರ ವ್ಯಕ್ತಿತ್ವಕ್ಕೆ ವಶರಾಗುವ ಪುರುಷರ ಸಂಖ್ಯೆ ಕಡಿಮೆ ಇದ್ದರೂ; ಹರಿಯು ಅವರಲ್ಲಿಟ್ಟ ಸೌಂದರ್ಯಕ್ಕೆ ವಶವಾಗಿ ವರ್ತಿಸುವ ಯುವಕರ ಸಂಖ್ಯೆ ಅಧಿಕವಾಗಿದೆ. ಶೀಲಕ್ಕೆ ವಶರಾಗದೆ ಅಶ್ಲೀಲಕ್ಕೆ ವಶರಾಗಿದ್ದಾರೆ. ಅಂತೂ ಇಂತೂ ಅರ್ಧ ಜಗತ್ತು ಮದನರಸ, ಮದ್ಯರಸಗಳಿಗೆ ವಶವಾಗಿದ್ದರೆ; ಇನ್ನರ್ಧ ಜಗತ್ತು ಹಗಲೂರಾತ್ರಿ ಧನದ ದಾಹವನ್ನು ನೀಗಿಸಿಕೊಳ್ಳುವ ಯತ್ನದಲ್ಲಿದೆ. ಆದರೆ ಕಾಮದ ನಿಶೆ ಧನದ ದಾಹಗಳಿಗೆ ವಶವಾಗುವುದರಿಂದಾಗಲೀ ಗಳಿಕೆಯಿಂದಾಗಲೀ ಚಿಕಿತ್ಸೆ ಸಾಧ್ಯವೇ ಇಲ್ಲ.

ನ ಜಾತು ಕಾಮಃ ಕಾಮಾನಾಂ ಉಪಭೋಗೇನ ಶಾಮ್ಯತಿ |
ಹವಿಷಾ ಕೃಷ್ಣವರ್ತ್ಮೇವ ಭೂಯ ಏವಾಭಿವರ್ಧತೇ ||

ಭೋಗದಿಂದ ಕಾಮದ ಹಸಿವೆ ನೀಗದು. ಬೆಂಕಿಯನ್ನು ತುಪ್ಪದಿಂದ ನಂದಿಸಹೊರಟರೆ ಮತ್ತೆ ಭುಗಿಲೇಳುವಂತೆ; ಕಾಮಿಸಿ ಮುಗಿಸುವೆನೆಂದರೆ ಹತ್ತಾರು ಕಾಮವಾಸನೆ ಮೂಗು ಮುಟ್ಟುವುದು. ಎಚ್ಚರ!.

ಸ್ವತಃ ವೀಜಯೀಂದ್ರರು ಕಾಮದ ಹೊಯ್ದಾಟದಿಂದ ಬಲುದೂರವಿದ್ದು ತಮ್ಮ ಅಸಾಧಾರಣ ಜಿತೇಂದ್ರಿಯತ್ವವನ್ನು ಜಗತ್ತಿಗೆ ತೋರಿದವರು. ಇಂದು ಹೊರಗೆ ಜಾರದೆ ಇದ್ದವರಿದ್ದಾರು. ಆದರೆ ಒಳಗೆ ಜಾರದಿದ್ದವರ್ಯಾರೆಂದು ಎಣಿಸಬೇಕು. ವಿಜಯೀಂದ್ರರು ಹೊರ ಒಳಗೆ ತಮ್ಮನ್ನು ಇಂದ್ರಿಗಳಿಂದ ಗೆದ್ದವರು. ನವಿರಾದ ಕರಸ್ಪರ್ಶದಿಂದ ಯೌವ್ವನ ವಿಲಾಸಿನಿಯರು ತಮ್ಮ ಹಾವಭಾವಗಳಿಂದ ವಿಜಯೀಂದ್ರರ ಮೈಮನಗಳ ಮುಟ್ಟಿ ಅಭ್ಯಂಗ ಮರ್ದನದ ಮೂಲಕ ಕಾಮವರ್ಧನೆಗೆ ಪ್ರಯತ್ನಿಸಿದಾಗ ತೆಳ್ಳಗಿನ ಎಳಸಾದ ಬಾಳೆಎಲೆಯನ್ನು ಕೌಪೀನಮಾಡಿಕೊಂಡು ಧರಿಸಿ ಮೆರೆದರೆಂದರೆ; ಇವರ ಜೀತೇಂದ್ರಿಯತ್ವದ ಚಮತ್ಕಾರಕ್ಕೆ ಬೆರಗಾಗಿ ಆನಂದದಿಂದ ಕಣ್ಣೀರಿಡದ ಸಾಧಕ ಯಾರಿದ್ದಾನೆ?!.

ರಾಮದೇವರ ಪಾದಕ್ಕಿಟ್ಟ ಹೂವಿನ ಪರಿಮಳದಿಂದ ಬೆಲೆವಣ್ಣಿನ ಕಾಮಾಗ್ನಿಯನ್ನು ನಂದಿಸಿ, ಆಕೆಯ ಬದುಕನ್ನು ಪರಿವರ್ತಿಸಿದ ಮಹಾರಾಯರಿವರು. ಆದ್ದರಿಂದಲೇ ಇವರಿಗೆ 'ಕಾಮಬಾಣಚ್ಛೇತೃ' ಎಂಬ ಬಿರುದು ಅನ್ವರ್ಥಕವಾದುದು. ಕಾಮ ಲಂಪಟರು ಇವರ ಹೆಸರು ಹೇಳಿದರೆ ಅವರಿಗೆ ಕಾಮ ಹುಟ್ಟದು. ಇಂತಹ ತಪಸ್ವಿಗಳಾದ ವಿಜಯೀಂದ್ರರು ಮುಂದಿನ ಸಮಾಜದ ಯುವಕ-ಯುವತಿಯರ ಮನಸ್ಸು ಹೇಗಿರುತ್ತದೆಂದು ಅವರ ಅಂತರಂಗಕ್ಕೆ ನುಗ್ಗಿ ಅವರ ಪರವಾಗಿ ಹರಿಯಲ್ಲಿ ಮೊರೆ

ಹೊಕ್ಕಿದ್ದಾರೆ.

ಜನರು ಇಂತಹ ಕ್ಷುದ್ರವಾದ ಬಾಹ್ಯ ಕಾಮಾಸಕ್ತಿಯನ್ನು ನೆಗ್ಗೊತ್ತಿ ಶಾಸ್ತ್ರದ ಸಾವಿರಾರು ಅದ್ಭುತವಾದ ಯುಕ್ತಿ ತರಂಗಗಳಲ್ಲಿ ಮೀಯುವಂತಾಗಬೇಕು. ದೇವರು ಕೊಟ್ಟ ನಯನಗಳು ಹರಿಮಂದಿರಕ್ಕೆ ನಡೆದು ಹೋಗಲು ಹೊರತು; ಕಾಳಸಂತೆಗಾಗಿಯಲ್ಲ. ಇದಕ್ಕೆ 'ನೇತ್ರ' ಎಂದು ಹೆಸರು. ಹರಿಯ ಬಳಿ, ಅರ್ಥಾತ್-ಶಾಸ್ತ್ರದ ಬಳಿ, ನಮ್ಮನ್ನು 'ನಯತಿ'ಕೊಂಡೊಯ್ಯುತ್ತದೆ 'ತ್ರಾಯತಿ' ಸಂಸಾರದಿಂದ ರಕ್ಷಿಸುತ್ತದೆ. ಈ ಅರ್ಥದಲ್ಲಿ ನೇತ್ರವೆನಿಸಿದೆ. ಹರಿಕೊಟ್ಟು ಕಣ್ಣಿಗೆ ಬೆಲೆಕಟ್ಟುವವನ್ಯಾರು. ಭಾರತ-ಭಾಗವತಗಳನ್ನೊಮ್ಮೆ ಇವುಗಳಿಂದ ಅವಲೋಕಿಸಿದರೆ ಅಶ್ವಮೇಧದ ಸುಕೃತ ನಮ್ಮದಾಗುತ್ತದೆ. ಅನಂತ ವಿಘ್ನಗಳ ನಡೆಯುವೆಯೂ ತಿಳಿಯಬಹುದಾದ ಸಾರತತ್ವಗಳು ಸಾಸಿರವಿವೆ. ಅದಕ್ಕೀ ದೃಷ್ಟಿ ಇಟ್ಟು; ಕನಿಷ್ಟ ಜೀವನನ್ನು ಗರಿಷ್ಟವನ್ನಾಗಿಸಬೇಕು. ಇಂತಹ ಬುದ್ಧಿ ನಯನಗಳು ಹರಿಕೊಟ್ಟ ಪರಮಭಾಗ್ಯವೆಂದು ಕಳಕಳಿಯ ಕೃತಜ್ಞತೆಯಿಂದ ಸ್ಮರಿಸಿಕೊಂಡು ಸಾರ್ಥಕಪಡಿಸಿಕೊಳ್ಳಬೇಕು. ಈ ಭಾವ - ಈ ದೃಷ್ಟಿ- ಇಲ್ಲದೆ ಕುದೃಷ್ಟಿಯಿಂದ ಸಾಗುವುದಾದರೆ ಯಾಕೆ ಬದುಕಬೇಕು. ಇಂತಹ ಪಶ್ಚಾತ್ತಾಪಕ್ಕಾದರೂ ಬದುಕಬೇಕು. ಪಶ್ಚಾತ್ತಾಪದಿಂದ ಬದುಕಿಗೊಂದು ಶಿಕ್ಷಣ ಕೊಟ್ಟು ಆತ್ಮೋಪಕಾರಿಗಳಾಗಿ ಮೆರೆಯಬೇಕೆಂಬುದೇ ವಿಜಯೀಂದ್ರರ ಹಾರ್ದ.

ಕಾಮವಾಸನೆಯೇ ಸೊಗಸೆಂದಿತು ಮೂಗು

ನ ಹಿ ನಾಸಿಕಾಯ ಕದಾಪಿ ವಿಷ್ಣೋಃ
ಪದಪದ್ಮಾರ್ಪಿತ ಪುಷ್ಪಗಂಧಬುದ್ಧಿಃ|
ಕಮಲೇಶ ಭವಾಮಿ ಕಿಂತು ವಿಷ್ಣೋ-
ಶ್ಚರಣಾನರ್ಪಿತಪುಷ್ಪಗಂಧಬುದ್ಧಿಃ ||೫||

ಹರಿಯೇ! ನಿನ್ನ ಪದಪುಷ್ಪಗಳ ಗಂಧವ ಘ್ರಾಣಮೂಸದು. ವಿಷಯ ವಾಸನೆಗೆನ್ನ ವಶವಾಯಿತು ನಾಸಿಕ! ಉದ್ಧರಿಸೋ ಹರಿಯೇ! ಉದ್ಧರಿಸು.

ಹರಿಯೇ! ಜೀವನ ಅವಸ್ಥೆ 'ಅತ್ತ ದರಿ ಇತ್ತ ಪುಲಿ' ಎಂದಂತಾಗಿದೆ. ವಟು

ಕೌಪಿನ ನ್ಯಾಯದಂತೆ ಎಲ್ಲ ಇಂದ್ರಿಯಗಳೂ ವಿಷಯ ಪದಾರ್ಥಗಳ ಕಡೆ ಜಾರುವ ಪ್ರಾವೀಣ್ಯವನ್ನು ಹೊಂದಿದ್ದಾವೆ ವಿನಾ ಸಂಸಾರ ಸಾಗರದಲ್ಲಿ ಮುಳುಗಿದ ಜೀವನನ್ನು ಉದ್ಧರಿಸುವ ತಾಕತ್ತು ಇವುಗಳಿಲ್ಲವಾಗಿದೆ.

ನೋಡಿ! ಈ ಘ್ರಾಣೇಂದ್ರಿಯದ ತಿಮಿರನ್ನು. ಇದಕ್ಕೆ ಕುತ್ಸಿತವಾದ ಚರ್ಮದ ಬೆವರಿನ ವಾಸನೆ ಸೊಗಸಂತೆ. ಪರಮ ಪದವಿಗೆ ಸೋಪಾನವೆನಿಸಿದ ಹರಿಪಾದ ಪದ್ಮಗಂಧವು ವಾಗತ್ತೆಯಂತೆ. ಏನು ಹೇಳಬೇಕು ಇದಕ್ಕೆ? ಅಮೇಧ್ಯವನ್ನೇ ಹುಡುಕುವ ನಾಯಿಗಳಂತೆ ಈ ಇಂದ್ರಿಯಗಳಿವೆ. ಇವುಗಳನ್ನು ಸಾಕಿಸಲಹುವ ಶ್ವಾನಪಾಲಕರು ನಾವಾಗಿದ್ದೇವೆ. ಇದೆಂತಹ ವಿಪರ್ಯಾಸ?!

ನಾಯಿ-ಬೆಕ್ಕುಗಳನ್ನು ಸಾಕಿದರೆ ಅವುಗಳು ಮನಸ್ಸಿನವಲ್ಲಿ ಯಜಮಾನ ಯಜಮಾನ್ತಿಯರು ಬೇಗ ಸಾಯಲೆಂದು ಶಪಿಸುತ್ತವಂತೆ. ಅಂತೆಯೇ ಈ ಇಂದ್ರಿಯಗಳು ಬೇಗನೇ ಸಾಯಿಸುವ ನಾಯಿಗಳಾಗಿವೆ. ಹುಚ್ಚುನಾಯಿಯ ಕಡಿತಕ್ಕೆ ಬಲಿಯಾದವ ಹೆಚ್ಚುದಿನ ಬದುಕಲಾರ. ಅದರಂತೆ ಈ ಕಾಳಸಂತೆಯ ವಿಷಯಗಳ ಮೆದ್ದು ರೋಗಕ್ಕೆ ಬಲಿಯಾದ ಹುಚ್ಚುನಾಯಿಗಳು ನಮ್ಮ ಇಂದ್ರಿಯಗಳು. ಇವಳನ್ನು ಸಾಕಿದ್ದಕ್ಕೆ ನಮಗೆ ಬೇಗ ಬರುವ ಸಾವೇ ಫಲ. ಬದುಕೆಲ್ಲ ನಿಷ್ಫಲ.

ಇದನ್ನೇ ಶ್ರೀ ಜಗನ್ನಾಥದಾಸರು ಹೇಳಿದ್ದು.

"ನಾಕೆಂಟು ನಾಯಿಗಳ ಸಾಕಿ ಮನೆಯೊಳಗೆ ಸಾ ಬೇಕೆಂದು ಹಾಲ ಹೊಯ್ದೆ"
"ಸಿರಿ ರಮಣ ತವ ಚರಣ ದೊರಕುವುದು ಹ್ಯಾಂಗಿನ್ನು ಪರಮ ಪಾಪಿಷ್ಟ ನಾನು"

ಇಲ್ಲಿ ಏಕಾದಶ ಇಂದ್ರಿಯಗಳು ಮತ್ತು ಬುದ್ಧಿಗಳಿಗೆ ನಾಯಿ ಎಂದಿದ್ದಾರೆ. 'ಹನ್ನೆರಡು ಇಂದ್ರಿಯಗಳಿಗೆ ಹಾಲು ಹಾಕುತ್ತಾ ಬದುಕೆಲ್ಲ ಹಾಲಾಹಲವಾಗಿದೆ' ಎಂದು ನಮಗೆ ಎಚ್ಚರಿಸಿದ್ದಾರೆ. ಇಂತಹ ಎಚ್ಚರಿಕೆಯ ನೂರಾರು ಕರೆಗಂಟೆಗಳು ಅಪ್ಪಳಿಸುತ್ತಿದ್ದರೂ ಎಚ್ಚರಗೊಳ್ಳದೆ ಜೀವನು ಇನ್ನೂ ಮಲಗಿದ್ದಾನೆಂದರೆ ಇದೊಂದು ಅಚ್ಚರಿಯಲ್ಲವೇ!

ಇಂದು ಹೊರಜಗತ್ತಿಗೆ ಕಾಲಿಡುವುದೇ ಕಷ್ಟ. ಮೂಗು ಮುಚ್ಚುವ ದುರ್ವಾಸನೆ. ಕಂಡ ಕಂಡಲ್ಲಿ ನಿಂತು ತಿನ್ನುವ ಪ್ರಾಣಿಗಳ ಸಂಖ್ಯೆ ಅಧಿಕವಾಗಿದೆ. ಚಲಿಸುವ ಸಸ್ಯಾಹಾರಿ ಮಾಂಸಾಹಾರಿ ಪಾಕದ ಮಳಿಗೆಗಳು ಎಂಥವರ ಮೂಗಿಗೂ ತಮ್ಮ ಪರಿಮಳ ತಟ್ಟಿಸದೆ ಬಿಡವು. ಒಂದು ಕ್ಷಣಕಾಲ ಮಡಿವಂತರೂ ಬೆರಗಾಗುವಂತೆ ವಾಸನೆ ನುಗ್ಗುತ್ತದೆ. ತಿನ್ನದವರಿಗೂ ಈ ಮೂಗು ವಾಸನೆಯನ್ನು ತಿನ್ನಿಸುತ್ತದೆ. ಬಹುತೇಕ ಈ ಮೂಗಿಗಿರುವ ಚಾಪಲ್ಯ ನಾಲಿಗೆಗೂ ಇಲ್ಲ. ಏಕೆಂದರೆ ನಾಲಗೆಗೆ ಇನ್ನೊಬ್ಬರ ತಟ್ಟೆಯ ಸವಿ ನೋಡಲಾಗದು. ಮೂಗು ಹಾಗಲ್ಲ. ಎಲ್ಲ ಎಂಜಲಿನ

ವಾಸನೆ ಇದು ಗ್ರಹಿಸುತ್ತದೆ. ಇದರ ವಿಷಯದಲ್ಲಿ ನಾವು ಅತ್ಯಂತ ಜಾಗರೂಕರಾಗಿರಬೇಕು.

ಭಗವಂತನ ಪಾದಾರವಿಂದಗಳಲ್ಲಿ ಹಾಕಿದ ಹೂ ತುಳಸಿಯನ್ನು ಆಘ್ರಾಣಿಸುತ್ತಿದ್ದರೆ ಅನ್ಯ ವಿಷಯಕ ವಾಸನೆ ಮಾಸಿ ಹೋಗುತ್ತದೆ. ಇಲ್ಲವಾದಲ್ಲಿ ಮನಸ್ಸು ರೋಸಿಹೋಗುತ್ತದೆ. ಹರಿ ನಿರ್ಮಾಲ್ಯ ಮೂಸಿದವ ಧರಿಸಿದವ ಅಚ್ಯುತನ ಭೃತ್ಯಾಗ್ರೇಸರನೆನಿಸಿದ್ದಾನೆ. "ಪಾದೋದಕಂ ಚ ನಿರ್ಮಾಲ್ಯಂ ಮಸ್ತಕೇ ಯಸ್ಯ ಸೋಽಚ್ಯುತಃ" ಎಂದು ಶ್ರೀಮದಾಚಾರ್ಯರು ಹೇಳಿದ್ದಾರೆ. ಏನೇ ಹೇಳಿದರೂ ನೆಟ್ಟಗಾಗದ ನಾಯಿಬಾಲದಂತೆ ಮನುಷ್ಯನ ಬುದ್ಧಿ. ವಿಹಿತವಾದ ಗಂಧವನ್ನು ಆಘ್ರಾಣಿಸುವುದರಿಂದ ಆನಂದ ಪುಣ್ಯ ಎರಡೂ ಫಲ ದೊರೆಯುತ್ತಿದ್ದರೂ ಹರಿಗನರ್ಪಿತವಾದ ಸುಗಂಧ ಪುಷ್ಪಗಳ ವಾಸನೆ ನೋಡುವ ಚಪಲ ಈ ಮೂಗಿಗಿದೆ. ಕಾಮಿನೀಕಾಯಲಿಪ್ತ ಉಚ್ಚಿಷ್ಟ ಗಂಧಕ್ಕೆ ಪುಟಿದೇಳುವ ಭೋಗಲಾಲಸೆಯಿಂದ ಹೇಗೆ ಎದ್ದೇಳಲಿ!! ಇಂದ್ರಿಯಗಳ ಗುಲಾಮಗಿರಿಯಲ್ಲಿ ಬಿದ್ದೇ ಇರುವ ನನಗೆ ಉದ್ಧಾರ ಮಾರ್ಗ ಯಾವುದು?! ಉದ್ಧರಿಸೋ ಸ್ವಾಮಿ! ಎಂಬ ಉದ್ಗಾರ ಗುರುಗಳ ಮಾತಿನಲ್ಲಿದೆ.

ಕೊಳೆತ ಮಾತಿನಲ್ಲಿ ನುರಿತ ನಾಲಗೆ

ನೃಹರೇಚ್ಯುತ ಮಾಧವೇಶ ಕೃಷ್ಣ
ಹರಿಗೋವಿಂದ ಮುಕುಂದನಾಮಜಾತಮ್ ।
ನ ಹಿ ಕೀರ್ತಯತೀಹ ಮೇ ಕುಜಿಹ್ವಾಽಪಿ ತು
ದುರ್ಲಿಂಗಭಗಾಂಕಿತಾನ್ನುಶಬ್ದಾನ್ ॥೬॥

ನರಹರಿಯೇ! ಅಚ್ಯುತ! ಮಾಧವ! ಈಶ! ಕೃಷ್ಣ! ಹರಿ! ಗೋವಿಂದ! ಮುಕುಂದ! ಮುಂತಾದ ಅದ್ಭುತನಾಮಗಳಿದ್ದಾಗಿಯೂ ಕೊಳೆತ ನಾಲಗೆಗೆ ಇವು ಸವಿಯಾಗವು. ಲಿಂಗ, ಭಗ, ಮುಂತಾದ ಶಬ್ದಗಳು ಸೊಗಸೆನ್ನುತಿಹುದು. ಇದರಿಂದ ಹೇಗೆ ಪಾರಾಗಲಿ!!

ಒಂದೊಂದು ಹರಿನಾಮಗಳು ಅಖಂಡ ಬ್ರಹ್ಮಾಂಡನಾಯಕನಾದ ಪರಬ್ರಹ್ಮನನ್ನು ಕೊಂಡಾಡುತ್ತಿವೆ. "ಹರಿಯ ನಾಮಕೆ ಕರಗದ ಪಾಪವು

ಧರೆಯೊಳಿಲ್ಲೆಂಬುದು ಖರೆ'' ಎಂದಿದ್ದಾರೆ ದಾಸರು.

ದೇವರು ಕೊಟ್ಟ ನಾಲಿಗೆಯು ಹರಿನಾಮವನ್ನು ಕೊಂಡಾಡಲು ಅದ್ಭುತ ಸಾಧನವೆನಿಸಿದೆ. ಮನಬಂದಂತೆ ಹರಿಕೀರ್ತನೆ ಮಾಡಿರೆಂದು ದೇವರು ನೀಡಿದ ಅದ್ಭುತವಾದ ಚರ್ಮವಾದ್ಯ ಈ ನಾಲಿಗೆ. ಸಂಸಾರಾಂಬುಧಿಯ ತೀರ ಮುಟ್ಟಲು ಇದೊಂದು ಸಾಕು. ನಿರಂತರ ಹರಿನಾಮ ಉಚ್ಚರಿಸುತ್ತಿದ್ದರೆ ಎಲ್ಲ ಸಂಕಟಗಳೂ ಪರಿಹಾರವಾಗುತ್ತವೆ. 'ನೃಹರೇ!' ಎಂದರೆ ಅಜ್ಞಾನ ಸಹಿತವಾಗಿ ದುರಿತಗಳೆಲ್ಲವೂ ನಿರ್ಮೂಲನವಾಗಿ ಭಾಗ್ಯೋದಯವಾಗುತ್ತದೆ. ಅಚ್ಯುತ! ಎಂದರೆ ದೇಶ, ಕಾಲಗಳಿಂದಾಗುವ ಅನರ್ಥಗಳು ಪರಿಹಾರವಾಗುತ್ತವೆ. ಮಾಧವ! ಎಂದರೆ ನಿರ್ದೈನ್ಯದ ಜೀವನ ನಮ್ಮ ಪಾಲಾಗುತ್ತದೆ. ಕೃಷ್ಣ ಎಂದರೆ ಕಷ್ಟಗಳೆಲ್ಲವೂ ಪರಿಹಾರವಾಗಿ ಎಂದೂ ಸಿಗದ ಪುಣ್ಯದ ಮೊತ್ತ ದೊರೆಯುತ್ತದೆ. ಹರಿ! ಎನ್ನೆ ಅತಿಶಯವಾದ ಪಾಪಗಳೂ ಧೂಳಿಪಟ. ಗೋವಿಂದ! ಎನ್ನೆ ಸರ್ವಾಪರಾಧಗಳೂ ಶಾಂತ. ಮುಕುಂದ! ಎನ್ನೆ ತೋರುವುದು ಮುಕುತಿಯ ದಾರಿ. ಹೀಗೆ ಅಪೂರ್ವಗುಣಗಳ ಅನಂತನಾಮಗಳಿದ್ದಾವೆ. ಅನಂತ ಕಲ್ಯಾಣಗುಣನಿಧಿಯಾದ ಏಕೈಕ ದೊರೆ ಶ್ರೀ ಹರಿ ಒಬ್ಬನೇ ಇದ್ದಾನೆ. ಹೀಗಿದ್ದರೂ ಕೆಲಸಕ್ಕೆ ಬಾರದ ಮಾತುಗಳಿಂದ ಕಾಲ ಕೊಲ್ಲುವ ಮೂಢರಿಗೇನನ್ನಬೇಕು.

ಒಬ್ಬನು ಬೀದಿಯಲ್ಲಿ ಸಾಗುವಾಗ ಅಮೇಧ್ಯವನ್ನು ತಿನ್ನುವ ನಾಯಿಯನ್ನು ಕಂಡು ಅಯ್ಯೋ ಪಾಪ ಇದಕ್ಕೆ ತಿನ್ನಲು ಗತಿಯಿಲ್ಲ ಎಂದು ಕನಿಕರದಿಂದ ತನ್ನ ಮನೆಗೆ ಕರೆತಂದು ಮೃಷ್ಟಾನ್ನ ಭೋಜನ ಮಾಡಿಸಿದನು. "ಮೃಷ್ಟಾನ್ನ ಹಾಕುತ್ತೇನೆ ಅಮೇಧ್ಯ ತಿನ್ನಬೇಡ" ಎಂದು ಉಸುರಿದನು. ಆದರೆ ಪುನಃ ಹಸಿದ ನಾಯಿಗೆ ಅಮೇಧ್ಯದ ಚಾಪಲ್ಯವೇ ಹುಟ್ಟಿತು. ಅಪೂರ್ವ ಮೃಷ್ಟಾನ್ನ ನಿತ್ಯ ದೊರೆಯುವ ಯೋಗ ದೊರಕಿದ್ದರೂ ಅದಕ್ಕೆ ತೋರುವ ಲಾಭ ಅಮೇಧ್ಯ. ಅದರಂತೆ ಬಲು ಅಪರೂಪದ ನಾಮ ಹರಿನಾಮ. ಇದರ ಉಚ್ಚಾರಣೆಯಿಂದ ಲಭಿಸುವ ಲಾಭಕ್ಕೆ ಬೆಲೆ ಕಟ್ಟಲಾಗದು. ಆದರೂ ಕುತ್ಸಿತವಾದ ನಮ್ಮ ಇಂದ್ರಿಯಗಳು ಬಯಸುವುದು ಕೆಟ್ಟ ವಿಷಯಗಳನ್ನೇ. ಹರಿಯನ್ನು ಕೊಂಡಾಡಬೇಕಾದ ನಾಲಗೆಯು ಯೋನಿ, ಲಿಂಗಗಳ ಬಗ್ಗೆ ಮಾತನಾಡುತ್ತದೆ ಎಂದರೆ ಏನೆನ್ನಬೇಕು. ಮುಟ್ಟಿದರೆ ಮೃತ್ತಿಕೆ ಹಚ್ಚಿ ಕೈತೊಳೆದುಕೊಳ್ಳಬೇಕಾದ ಇಂದ್ರಿಯದ ಬಗ್ಗೆ ನಾಲಗೆ ಚಡಪಡಿಸುತ್ತದೆ ಎಂದರೆ ಇದರ ಹೀನತೆ ಎಂಥಹದ್ದು. ಇಂತಹ ನೀಚಬುದ್ಧಿಯ ನಾಲಗೆಯಿಂದ ಭವಕಾಂತಾರದ ಕೊನೆ ಮುಟ್ಟಲು ಹೇಗೆ ಸಾಧ್ಯ? ದಾರಿ ತೋರಬೇಕಾದ ನಾಲಗೆಯೇ ದಾರಿ ತಪ್ಪಿಸಿದರೆ

'ಬೇಲಿಯೇ ಎದ್ದು ಹೊಲ ಮೇಯ್ದಂತಲ್ಲವೇ?. ಆದ್ದರಿಂದ ಹರಿಯೇ ಈ ನಾಲಿಗೆಗೊಂದು ಕಡಿವಾಣ ಹಾಕು. ಹರಿನಾಮದ ಸವಿಯನ್ನುಣಿಸಿ ಅದರಲ್ಲಿಯೇ ಆಸಕ್ತವಾಗುವಂತೆ ಮಾಡು. ಏಕೆಂದರೆ ಬೇರೆ ಜನ್ಮದ ಪ್ರಾಣಿಗಳಿಗೆ ನಾಲಗೆ ದಪ್ಪ. ಹರಿನಾಮ ಹೇಳಬೇಕೆಂದರೂ ಬಾರದು. ಮೂಕಪ್ರಾಣಿ ಎನಿಸಿದ್ದಾವೆ. ಆದರೆ ಮಾನವನಾಗಿಯೂ ನಿನ್ನ ನಾಮ ಉಚ್ಚರಿಸದಿದ್ದಲ್ಲಿ ಮೂಕಪ್ರಾಣಿಗಿಂತಲೂ ನಿಕೃಷ್ಟನಾಗುತ್ತೇನೆ. ಅನಂತ ಜನ್ಮದ ಪಾಪಗಳನ್ನು ಸುಡುವ ಯೋಗ ಬಂದಾಗಲೂ ಹರಿನಾಮದ ಬೆಂಕಿಯಿಂದ ಸುಡದಿದ್ದರೆ ಸುಡಗಾಡಿಗೂ ಈತ ಯೋಗ್ಯನಾಗಲಾರ. ಅಮೇಧ್ಯವೆಲ್ಲ ಮೈಗೆ ಅಂಟಿಕೊಂಡಾಗ ನೀರು ಸಿಕ್ಕಿದ್ದರೂ ತೊಳೆದುಕೊಳ್ಳದವ ಎಂಥಹ ಕೊಳಕು ವ್ಯಕ್ತಿತ್ವದವನಲ್ಲವೇ?. ಅಮೇಧ್ಯವು ಎಷ್ಟು ಮೃದುವಾಗಿತ್ತು ಅದರ ಪರಿಮಳವೇನು ಎಂದು ವರ್ಣಿಸುವವನ ಮಾತು ಎಷ್ಟು ಅಸಹ್ಯವೋ, ಅಷ್ಟೇ ಅಸಹ್ಯ ಕರ್ಮವನ್ನು 'ಲಿಂಗ' 'ಭಗ' ಮುಂತಾದ ಶಬ್ದಗಳನ್ನುಚ್ಚರಿಸುವ ಮೂಲಕ ಈ ನನ್ನ ನಾಲಗೆ ಅಸಭ್ಯತೆಯಿಂದ ನಡೆದುಕೊಳ್ಳುತ್ತಿದೆ. ಇದಕ್ಕೆ ಶಿಕ್ಷಣ ಕೊಟ್ಟು ಉದ್ಧರಿಸುವ ಹೊಣೆಗಾರಿಕೆ ನಿನ್ನ ತಲೆಯ ಮೇಲಿದೆ ಎಂಬ ದೈನ್ಯದ ಪ್ರಾರ್ಥನೆ ನಮ್ಮಲ್ಲಿರಬೇಕೆಂದು ವಿಜಯೀಂದ್ರತೀರ್ಥರು ಸೂಚಿಸಿದ್ದಾರೆ.

ಮುಟ್ಟಿ ಕೆಡಿಸಿದ ಕೈಗಳು

ತವ ಮಂದಿರಮಾರ್ಜನಾದಿ ಸೇವಾಂ
ನ ಕರೌ ಮೇ ಕುರುತಃ ಕದಾಪಿ ಭಕ್ತ್ಯಾ
ಅಪಿ ತೂರುಗುಣಾರ್ಯ ದುಷ್ಟವಸ್ತು-
ಗ್ರಹಣಾಯ್ವೈವ ಯತೇತ ಇಂದಿರೇಶ ||೭||

ಗುಣೋತ್ಕೃಷ್ಟನಾದ ಇಂದಿರೇಶನೇ! ನನ್ನ ಕೈಗಳು ನಿನ್ನ ಮಂದಿರದ ಸ್ವಚ್ಛತೆಯ ಕೈಂಕರ್ಯಾದಿಗಳಿಗೆ ಉಪಯೋಗವಾಗುತ್ತಿಲ್ಲ. ಲೋಕದ ದುಷ್ಟವಸ್ತುಗಳ ಸ್ವೀಕಾರಕ್ಕೆ ಮುನ್ನುಗ್ಗುತಿದೆ. ಮನ್ನಿಸು.

ಕನಿಷ್ಠಿಕಾ, ಅನಾಮಿಕಾ, ಮಧ್ಯಮಾ, ತರ್ಜನೀ, ಅಂಗುಷ್ಠ, ಅಂಗೈಗಳಿಂದ ಕೂಡಿದ ಕೈಯನ್ನು ಕರ ಎಂದಿದ್ದಾರೆ. ಪ್ರತಿಯೊಂದು ಕ್ರಿಯೆಗಳಿಗಳಲ್ಲಿಯೂ ಇದರ

ಪಾತ್ರ ತುಂಬಾ ದೊಡ್ಡದು. ವ್ಯಕ್ತಿಯ ಅಂತರಂಗವನ್ನು ಈ ಕೈ ಮಾಡುವ ಕರ್ಮಗಳಿಂದ ಅಳೆಯಬಹುದು. ಈ ಅರ್ಥದಲ್ಲಿಯೇ ಲೋಕದಲ್ಲಿ 'ಇವನ ಕೈ ಶುದ್ಧವಾಗಿದೆ. ಇವನ ಕೈ ಶುದ್ಧಿ ಇಲ್ಲ' ಎಂಬ ಮಾತುಗಳು ಬಂದಿವೆ. ಜಗನ್ನಾಥದಾಸರು ಕೈಗಳಿಂದ ಹರಿಯ ಚಿನ್ಮೂರ್ತಿಗಳ ರಂಗವಲ್ಲಿಗಳನ್ನು ಬಿಡಿಸುತ್ತಾ ರಂಗವಲಿದ ದಾಸರೆಂದೇ ವಿಖ್ಯಾತರಾದರು. ಸ್ವತಃ ವಿಜಯೀಂದ್ರತೀರ್ಥರು ನೂರಾರು ಹರಿಯ ಸುಂದರವಾದ ವಿಗ್ರಹಗಳನ್ನು ತಮ್ಮ ಅಸಾಧಾರಣ ಶಿಲ್ಪಕಲೆಯ ವಿಜ್ಞಾನದಿಂದ ಕಲಾತ್ಮಕವಾಗಿ ಕೆತ್ತಿದರು. ವ್ಯಾಸರಾಜರ ಗ್ರಂಥಗಳಿಗೆ ವ್ಯಾಖ್ಯಾನಿಸಿದ್ದು ಮಾತ್ರವಲ್ಲದೆ ನೂರಾರು ಗ್ರಂಥಗಳನ್ನು ತಮ್ಮ ಕೈಗಳಿಂದ ಲಿಪಿಸಿ ಹರಿಯ ಅನುಗ್ರಹಕ್ಕೆ ಪಾತ್ರರಾದರು. ಶ್ರೀ ಹೃಷೀಕೇಶತೀರ್ಥರು ಆಚಾರ್ಯರ ಭಾಷ್ಯಗ್ರಂಥಗಳನ್ನು ಲಿಪಿಸಿ ಗಂಗಾನದಿಯ ತೀರದಲ್ಲಿ ವಿಷ್ಣು ಮಂದಿರವನ್ನು ನಿರ್ಮಿಸಿದ ಪುಣ್ಯಕ್ಕೆ ಪಾತ್ರರಾದರು. ಹೀಗೆ ಕೈಗಳಿಂದ ಸಾರ್ಥಕ್ಯ ಹೊಂದಿದ ಮಹಾನುಭಾವರ ಸರಮಾಲೆಯೇ ಇದೆ.

ಕೈಗಳಿಂದ ಗಂಧ ತೇಯ್ದು ಹರಿಗೆ ಲೇಪಿಸಿದ ಕುಬ್ಜೆಯ ಡೊಂಕುಗಳೆಲ್ಲ ಹರಿಯನುಗ್ರಹದಿಂದ ಹೊರಟುಹೋಯಿತು. ಸುಂದರವಾದ ಹೂಮಾಲೆ ರಚಿಸಿ ಶ್ರೀಕೃಷ್ಣನಿಗೆ ಸಮರ್ಪಿಸಿದ ಸುಧಾಮಗೆ ಹರಿಧಾಮ ದೊರೆಯಿತು. ಸುರಭಿಯ ಹಾಲ್ಹಿಂಡಿ ಗೋವಿಂದಗೆ ಅಭಿಷೇಕ ಮಾಡಿದ ಸುರಪ ಅಪರಾಧ ಮುಕ್ತನಾದ. ಕೈಗಳಿಂದ ಹಾಲ್ ಕರೆದು ಬೆಣ್ಣೆ ಕಡೆದು ಹರಿಗುಣಿಸಿದ ಸಹಸ್ರಾರು ಗೋಪಿಯರ ತಂಡ ಮುಕ್ತಲೋಕಾರೂಢರಾದರು. ಸ್ವತಃ ತನ್ನ ಕೈಗಳಿಂದ ಗೃಹಮಂದಿರ ಮಾರ್ಜನಾಸಕ್ತನಾದ ಅಂಬರೀಷನು ಹರಿ ಒಲುಮೆಗೆ ಪಾತ್ರನಾದ. ಕೋಟಿ ಕೋಟಿ ಭೃತ್ಯರಿದ್ದಾಗಲೂ ಹಾಡಕಾಂಬರನ ಸೇವೆಯನ್ನು ಸಾಟಿ ಇಲ್ಲದಂತೆ ಛತ್ರ-ಚಾಮರ-ವ್ಯಜನ-ಪರಿಯಂಕ ಮುಂತಾದ ರೂಪದಲ್ಲಿ ನಿಂತು ಸರ್ವ ಸೇವಾ ಮಾಡುತ್ತಿದ್ದಾಳೆ ಮಹಾಲಕುಮಿ.

ಹೀಗೆ ಮಹತೋ ಮಹೀಯನಾದ ಶ್ರೀಹರಿಯ ಸೇವೆಗಾಗಿ ಮುಗಿಬೀಳುವ ಭಕ್ತಕೋಟಿಯೇ ಇದೆ. ಅವರೆಲ್ಲರನ್ನೂ ಅನುಗ್ರಹಿಸುವ ಔದಾರ್ಯವೂ ಶ್ರೀಹರಿಗಿದೆ. ಆದ್ದರಿಂದಲೇ ತೀರ್ಥರು ಹರಿಯನ್ನು ''ಉರುಗುಣಾರ್ಯ' ಎಂದು ಸಂಬೋಧಿಸಿದ್ದಾರೆ.

ದೇವರು ನಮಗೆ ಕೊಟ್ಟ ಕೈಗಳಲ್ಲಿ ಹತ್ತಾರು ಮುಖದ ಕೈಂಕರ್ಯವನ್ನು ಮಾಡಬಹುದು. ದೇವಾಲಯದ ಕಸಗುಡಿಸಿ ಸಾರಿಸಿ ರಂಗವಲ್ಲಿ ಹಾಕುವುದು. ಹರಿ

ಪ್ರತೀಕದಲ್ಲಿ ಆವಾಹನಾದಿ ಮುದ್ರೆಗಳಿಂದ ಆವಾಹಿಸುವುದು. ರತ್ನಸಿಂಹಾಸನವನ್ನು ಸಮರ್ಪಿಸಿ ಪಾದ್ಯ ಅರ್ಘ್ಯಗಳಿಂದ ಸತ್ಕರಿಸುವುದು. ಆಚಮನ, ಸ್ನಾನ, ವಸ್ತ್ರ, ಉಪವೀತ, ಗಂಧ, ಪುಷ್ಪ, ಧೂಪ, ದೀಪ, ನೈವೇದ್ಯ, ನಮಸ್ಕಾರ, ಪ್ರದಕ್ಷಿಣೆ, ದಕ್ಷಿಣೆಗಳಿಂದ ಉಪಚರಿಸಬಹುದು. ಕರತಾಡನ ಮಾಡಿ ದೇವರ ಮುಂದೆ ನರ್ತಿಸಿದರೆ ಅನಂತ ಜನ್ಮಗಳ ಅಪರಾಧವೆಲ್ಲವೂ ದೂರವಾಗುತ್ತದೆ.

ಆದರೆ ಇಷ್ಟು ಸೇವೆಗಳನ್ನು ಮಾಡಬೇಕಾದ ನಮ್ಮ ಕೈಯು ಏನೇನು ಮಾಡುತ್ತಿದೆ ಯೋಚಿಸಬಲ್ಲಿರಾ?. ರಮಾಬ್ರಹ್ಮಾದಿವಂದ್ಯಪಾದನಾದ ಹರಿಯನ್ನು ಮುಟ್ಟಿ ಭಜಿಸಬೇಕಾದ ಕೈ ಕೆಟ್ಟುಹೋಗಿದೆ. ತನ್ನದ್ದಲ್ಲದ ಸೊತ್ತನ್ನು ಮುಟ್ಟಬಯಸುತ್ತದೆ. ತನ್ನದ್ದಲ್ಲದ ಸ್ತ್ರೀಯರ ಒಳಮೈ ಸ್ಪರ್ಶಕ್ಕೆ ಬಿಸಿಯಾಗಿದೆ. ಬೇಡವಾದ ಪದಾರ್ಥಗಳನ್ನು ಜಜ್ಜಿ ಹೊಸೆದು ಬಾಯಿಗುಣಿಸುತ್ತಿದೆ. ವೈಶ್ವದೇವ, ಬ್ರಾಹ್ಮಣಾರಾಧನೆ ಮಾಡಿ ಅನ್ನ ತಿನ್ನಬೇಕಾದ ಕೈ; ಮ್ಲೇಚ್ಛರ ಎಂಜಲಿಗೆ ತವಕಿಸುತ್ತಿದೆ. 'ತನಗೇನೊ ಸುಖವಿದೆ' ಎಂದು ಭ್ರಾಂತಿಗೆ ತುತ್ತಾದ ಮನಸ್ಸಿನ ಮಾತು ಕೇಳಿ ನೀಚಜನರ ಸೇವೆಗೆ ಮುನ್ನುಗ್ಗುತ್ತಿದೆ. ಸ್ರುಕ್, ಸ್ರುವಗಳನ್ನು ಹಿಡಿದು ದರ್ಭಪಾಣಿಯಾಗಿ ಯಜ್ಞಯಾಗಗಳನ್ನು ಮಾಡಬೇಕಿದ್ದ ಕೈ, ಕಾರು-ಕೀ- ಮೊಬೈಲ್ ಮುಂತಾದವುಗಳನ್ನು ಶಂಖ ಚಕ್ರಗಳಿಗಿಂತಲೂ ಹೆಚ್ಚಿನ ಆದರದಿಂದ ಧರಿಸಿಕೊಂಡಿದೆ. ದರ್ಭೆ ಕತ್ತರಿಸಬೇಕಾದ ಕೈ ಸರ್ವಜನರ ಎಂಜಲಿನ ದುಡ್ಡಿಗೆ ಚಾಚಿಕೊಳ್ಳುತ್ತಿದೆ. ಮಧ್ವಶಾಸ್ತ್ರಗಳ ಪುಸ್ತಕಗಳನ್ನು ಧರಿಸಬೇಕಾದ ಕೈ. ಕಂಪ್ಯೂಟರ್-ಲ್ಯಾಪ್‌ಟಾಪ್-ಮೌಸ್‌ಗಳ ಮೇಲೆ ಮೊಬೈಲ್ ಅಕ್ಷರಗಳ ಮೇಲೆ ನಿರಂತರ ಆಡುತ್ತಿದೆ. ಪ್ರಯೋಜನ ಏನಿದೆಯೋ, ಉಪದ್ರವ ಎಷ್ಟಿದೆಯೋ ಯೋಚಿಸದೆ ತಾತ್ಕಾಲಿಕ ಸುಖಕ್ಕಾಗಿ ಮಕ್ಕಳು ಆಟಿಕೆ ಬಯಸುವಂತೆ ತಾಂತ್ರಿಕ ಸಲಕರಣೆಗಳು ದೊಡ್ಡವರ ಆಟಿಕೆಗಳಾಗಿರುವುದಂತು ನಿಜ. ಮಕ್ಕಳ ಆಟಿಕೆಯಲ್ಲಿ ಆಪತ್ತಿಲ್ಲ. ದೊಡ್ಡವರ ಆಟಿಕೆಗಳಾದ ಕಾರು, ಮೊಬೈಲ್ ಇತ್ಯಾದಿ ಬಳಕೆಯಿಂದ ಭಾರೀ ಅನರ್ಥಗಳು, ರೋಗಗಳು, ಧನವ್ಯಯ ಮುಂತಾದ ಹತ್ತಾರು ಆಪತ್ತುಗಳು ಎದುರಾಗುತ್ತವೆ. ಮಕ್ಕಳು ವಿನೋದದಿಂದ ಆಟಿಕೆಗಳ ಮೋಹ ಬಿಡುತ್ತಾರೆ. ದೊಡ್ಡವರಿಗೆ ಈ ಆಟಿಕೆಗಳು ಚಟಗಳಾಗಿ ಪರಿಣಮಿಸಿ ಅವಸಾನಕ್ಕೆ ಕಾರಣವಾಗುತ್ತವೆ. ಹರಿಯೇ! ಮತ್ತೊಬ್ಬರ ಹಸ್ತಲಾಘವಕ್ಕೆ ಹಾತೊರೆಯುವ ಕೈಗಳಿಗೆ ಶ್ರೀಹರಿಯ ಶಾಲಗ್ರಾಮ ಸ್ಪರ್ಶ ಮಾಡುವ ಬುದ್ಧಿ ಕೊಡು. ಶಾಲಾಗ್ರಾಮ ಸ್ಪರ್ಶಮಾಡಿದವನ ಹಸ್ತಲಾಘವವನ್ನು ಅಮರಾವತಿಯ ಸುರರೆಲ್ಲರೂ

ಬಯಸುತ್ತಾರಂತೆ - "ಶಾಲಗ್ರಾಮಶಿಲಾಸ್ಪರ್ಶಂ ಯೇ ಕುರ್ವಂತಿ ದ್ವಿಜೋತ್ತಮಾಃ| ವಾಂಛಂತಿ ಕರ ಸಂಸ್ಪರ್ಶಂ ತೇಷಾಂ ದೇವಾಃ ಸವಾಸವಾಃ" ಎಂದಿದ್ದಾರೆ ಶ್ರೀಮದಾಚಾರ್ಯರು.

ಹೊಟ್ಟೆಗೊಂದು ಧಿಕ್ಕಾರ ಹಾಕಿ

ಉದರಂ ಮಮ ಧಿಕ್ ಶಠಸ್ಯ ವಿಷ್ಣ್ವರ್ಪಿತ-
ಪೂತಾನ್ನ ವಿವರ್ಜಿತಂ ನಿತಾಂತಮ್ |
ಯದಪೂತತರಾಸಮರ್ಪಣೀಯಾಧಮ-
ವೃಂತಾಕಪಲಾಂಡು ಪೂರ್ವಭಾಜಃ ||೮||

ಹರಿಯೇ! ಬದನೆ, ಈರುಳ್ಳಿ ಮುಂತಾದ ನಿಷಿದ್ಧ ವಸ್ತುಗಳಿಂದ ನನ್ನ ಜಠರ ಅಶುದ್ಧವಾಗಿದೆ. ನಿನ್ನ ನೈವೇದ್ಯವನ್ನು ತುಂಬಿಸಿಕೊಳ್ಳದ ಹೊಟ್ಟೆಗೆ ಧಿಕ್ಕಾರ.

ಸ್ಟೋರ್ ಕೀಪರ್ ಸರಿ ಇದ್ದರೆ ಅಡಿಗೆ ಮನೆಗೆ ಶುದ್ಧವಾದ ಆಹಾರ ಹೋಗುತ್ತದೆ. ಈ ನಾಲಿಗೆ ಸ್ಟೋರ್ ಕೀಪರ್‌ನಂತಿದೆ. ಇದು ಸರಿಯಿಲ್ಲದ ಪರಿಣಾಮ ದೇವರಿಗೆ ಯೋಗ್ಯವಾದ ಶರೀರವೆಂಬ ಮಂದಿರದಲ್ಲಿ ಬೇಡವಾದ ನಿಷಿದ್ಧ ಪದಾರ್ಥಗಳು ತುಂಬಿಹೋಗಿವೆ.

ದೇವರು ನಿರ್ಮಿಸಿದ ಶರೀರದಲ್ಲಿ 72 ಸಾವಿರ ನಾಡಿಗಳಿದ್ದಾವೆ. 72 ಸಾವಿರ ಭಗವದ್ರೂಪಗಳು ಈ ನಾಡಿಗಳಲಿದ್ದಾವೆ. ಆ ನಾಡಿಗಳು ಶುದ್ಧವಾಗಿರಬೇಕಾದರೆ ಶುದ್ಧವಾದ ಆಹಾರ ದೊರೆಯಬೇಕು. ಕೊಳಚೆ ನೀರು ಹರಿಯುವ ಪೈಪ್‌ಗಳು ಬೇಗ ಕಸ ಹೊಲಸು ಕಟ್ಟಿ ಹಾಳಾಗುತ್ತವೆ. ನಮ್ಮ ಬಹುತೇಕ ನಾಡಿಗಳಿಗೆ ಈ ಶುದ್ಧಿ ಒದಗದೆ ಹಾಳಾಗುತ್ತಿವೆ. ಪೈಪ್ ಹಾಳಾದರೆ ನೀರು ಬಾರದು. ಅದರಂತೆ ಕೆಟ್ಟ ಆಹಾರದಿಂದ ಹಾಳಾದ ನಾಡಿಗಳೆಂಬ ಪೈಪ್‌ಗಳಿಂದ ಒಳ್ಳೆಯ ವಿಚಾರಗಳೇ ತಲೆಗೆ ಬರುತ್ತಿಲ್ಲ. 'ಆಹಾರ ಶುದ್ಧೌ ಸತ್ವ ಶುದ್ಧಿಃ' ಎಂಬುದು ಬಲ್ಲವರ ಮಾತು. ಇಂದು ಆಹಾರ ಪದಾರ್ಥಗಳಲ್ಲಿ ಸೇರಿರುವ ಕಾರ್ಕೋಟಕ ವಿಷವನ್ನು ತಿಂದರೂ ತಿನ್ನುತ್ತಿದ್ದರೂ ಮಾನವರು ಬದುಕಿದ್ದಾರೆಂದರೆ 'ವಿಷಂ ಭುಕ್ತ್ವಾಪಿ ನೋ ಹತಃ' ಎಂದರೆ ಬಹುಷಃ ಇದು ಪ್ರಾಣದೇವರ ಅನುಗ್ರಹವೆಂದೇ ಭಾವಿಸಬೇಕು.

ನಾಲಗೆಗೆ ನಿಯಂತ್ರಣ ಬೇಕು. ಬಹುಶಃ ಹೊಟ್ಟೆಯೇ ನಿಯಂತ್ರಕ. ಹೊಟ್ಟೆ ಎಂಬುದು ಇಲ್ಲದಿದ್ದರೆ ಮಾನವ ಸದಾ ತಿನ್ನುತ್ತಲೇ ಇರುತ್ತಿದ್ದ. ಇಂದಿನ ಜನರು ಏನು ಕೊಟ್ಟರೂ ಜಗಿಯುತ್ತಾರೆ. ಇದರ ಪರಿಣಾಮ ಮಾತ್ರ ಹೊಟ್ಟೆಯೇ ಅನುಭವಿಸಬೇಕು. ಸ್ಟೀಮ್ ಮಾಡಿದ ಅಕ್ಕಿ ಬೇಳೆಗಳು, ಸ್ಪೆನ್ಸರ್‌ನಂತಹ ಫಾಸ್ಟ್ ಫುಡ್‌ಗಳು ಮಡಿವಂತ ಜನರನ್ನು ಕಂಗಾಲಾಗಿಸುತ್ತಿವೆ. ಇಂದು ಬದನೆ, ಕ್ಯಾರೆಟ್, ಮೂಲಂಗಿ, ಈರುಳ್ಳಿ ತಿನ್ನುವುದು ಅತ್ಯಂತ ಸರಳವಾಗಿದೆ. ಇವರ್‍ಯಾರೂ ಅಪರಾಧಿಗಳೇ ಅಲ್ಲವೆಂದಾಗಿದೆ. ಆದರೆ ವ್ಯಾಸರ ಪುರಾಣಗಳಲ್ಲಿ ಈ ನಿಷಿದ್ಧ ಪದಾರ್ಥಗಳನ್ನು ನಾಯಿಯ ಜನನಾಂಗಗಳಿಗೆ ಹೋಲಿಕೆ ಮಾಡಿದ್ದಾರೆ. ಬಹುಷಃ ಕ್ಯಾರೆಟ್ ಈರುಳ್ಳಿಗಳನ್ನು ನಾಯಿಗಳೂ ತಿನ್ನುವುದಿಲ್ಲ ಜನರು ತಿನ್ನುತ್ತಿದ್ದಾರೆ. ಎಂತೆಂತಹ ಆಹಾರಗಳು ಮನಸ್ಸಿನಲ್ಲಿ ಕೆಟ್ಟ ಪರಿಣಾಮ ನೀಡುತ್ತದೆಂದು ಆರ್ಷಪ್ರಪಂಚವು ಇದನ್ನು ಅಧ್ಯಯನ ಮಾಡಿ ಇಂತಹದ್ದನ್ನು ತಿನ್ನಬೇಡಿರೆಂದು ನಿರಾಕರಿಸಿದೆ. ಹೋಟೆಲ್ ಸಂಸ್ಕೃತಿ ತಲೆದೂರಿದ ಮೇಲೆ ಈ ಆರ್ಷಸಂಸ್ಕೃತಿ ತುಂಬಾ ತಿರಸ್ಕೃತವಾಗಿದೆ. ಆದ್ದರಿಂದ ಸಜ್ಜನರೇ ನೀವಾಗಿದ್ದಲ್ಲಿ ಮನೆಯಲ್ಲಿ ಗ್ಯಾಸ್ ಊಟವನ್ನಾದರೂ ಬೇಕಾದರೆ ಮಾಡಿ ಹೋಟೆಲ್‌ನಲ್ಲಿ ಮಾತ್ರ ತಿನ್ನಬೇಡಿ. ಹೀಗೆಂದ ಮಾತ್ರಕ್ಕೆ ಗ್ಯಾಸ್ ಒಳ್ಳೆಯದ್ದೆಂದಲ್ಲ. ದೇವರಿಗೆ ಒಂದು ತುಂಡು ಬೆಲ್ಲ, ಒಂದು ಲೋಟ ನೀರನ್ನಾದರೂ ಸಮರ್ಪಿಸಿ ಅದನ್ನು ಸ್ವೀಕರಿಸುವ ಔದಾರ್ಯ ಹೊಂದಿರಿ. ಹೀಗಾದರೂ ನಿಮ್ಮ ಜಾಠರ ಶುದ್ಧವಾಗಿರುತ್ತದೆ. ಏನು ಮಾಡದಿರುವುದಕ್ಕಿಂತ ಸ್ವಲ್ಪ ಮಾಡಿದರೂ ಹರಿ ಮೆಚ್ಚುತ್ತಾನೆ. **'ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್' 'ಮಣಮಾತಿಗಿಂತಲೂ ಕಣಕೃತಿಯೇ ಮಿಗಿಲೆಂದು'** ಗಾದೆಮಾತಿಲ್ಲವೆ? ಇಂದು ಆತ್ಮಾರಾಧನೆಯಲ್ಲಿ ತಲ್ಲೀನರಾದ ನಾವು ಪರಮಾತ್ಮನ ಆರಾಧನೆಯನ್ನು ಮರೆತಿದಿದ್ದೇವೆ.

ಸುಗ್ರೀವನು ರಾಮನ ಸೇವೆಗೆ ಅವಕಾಶ ಸಿಕ್ಕಿದ್ದಾಗಲೂ ನಾಳೆ ಆಗಲಿ, ಮಳೆಗಾಲ ಕಳೆಯಲಿ ಎಂದು ಕುಂಟು ನೆವ ಹೇಳುತ್ತಿದ್ದ. ರಾಮನಿತ್ತ ಭೋಗ ಭಾಗ್ಯಗಳನ್ನು ಅನುಭವಿಸುತ್ತಾ 'ಇದು ರಾಮನ ಕರುಣೆ' ಎಂದು ನೆನೆಯುವುದನ್ನು ಮರೆತ. ಪರಿಣಾಮ ಏನಾಯಿತು ಗೊತ್ತೆ. ರಾಮನು ಕೃಷ್ಣನಾದಾಗ ಸುಗ್ರೀವ ಕರ್ಣನಾದ. ಕೃಷ್ಣನು ಸ್ವಯಂ ತಾನೇ ಭೀಮನಿಗೆ ಸ್ಫೂರ್ತಿಯನ್ನಿತ್ತು ಕರ್ಣನ ರಥ ತುರಗಗಳನ್ನು ಭೀಮನ ಕೈಯಿಂದ ೨೧ ಬಾರಿ ನಾಶಗೊಳಿಸಿ ಹಿಗ್ಗಾಮುಗ್ಗಾ ಥಳಿಸಿದ. ಸೂರ್ಯಾವತಾರಿಯಾದ ಸುಗ್ರೀವನಿಗೇ ಇಂಥಾ ಸ್ಥಿತಿ ಬಂದ ಬಳಿಕ ನಮಗೇನಾದೀತೆಂದು ಊಹಿಸಿಕೊಳ್ಳಿ.

ಎಂದಿಗೂ ಸಜ್ಜನರ ಮತ್ತು ಪರಮಾತ್ಮನ ಕೋಪಕ್ಕೆ ತುತ್ತಾಗಬಾರದು. ಆದ್ದರಿಂದ ಸಜ್ಜನರು ಏನು ಹೇಳಿದ್ದಾರೋ ಅದೇ ಶಾಸ್ತ್ರವೆಂದು ಅದಕ್ಕೆ ತಲೆಬಾಗಿ ನಡೆದುಕೊಳ್ಳಬೇಕು. ಕ್ಯಾರೆಟ್ ಏಕೆ ತಿನ್ನಬಾರದು? ಅದರಲ್ಲಿ ವಿಟಮಿನ್ಸ್ ಇಲ್ಲವೇ? ಮುಂತಾಗಿ ವಾದಿಸಬಾರದು.

ತಸ್ಮಾತ್ ಶಾಸ್ತ್ರಂ ಪ್ರಮಾಣಂ ತೇ ಕಾರ್ಯಾ ಕಾರ್ಯ ವ್ಯವಸ್ಥಿತೌ|
ಜ್ಞಾತ್ವಾ ಶಾಸ್ತ್ರವಿಧಾನೋಕ್ತಂ ಕರ್ಮಕರ್ತುಮಿಹಾರ್ಹಸಿ |
ನಿಯತಸ್ಯ ತು ಸನ್ಯಾಸಃ ಕರ್ಮಣೋ ನೋಪಪದ್ಯತೇ |
ಮೋಹಾತ್ತಸ್ಯ ಪರಿತ್ಯಾಗಃ ತಾಮಸಃ ಪರಿಕೀರ್ತಿತಃ ||

ಮುಂತಾದ ವಚನಗಳು ಶಾಸ್ತ್ರದ ವಿಧಿಯನ್ನು ಉಲ್ಲಂಘಿಸಬೇಡ ಎಂದು ಎಚ್ಚರಿಸುತ್ತಿವೆ.

ಇನ್ನು ಹರಿ ನೇವೇದ್ಯವನ್ನು ಭುಂಜಿಸುವವನಿಗೆ ಒಂದೊಂದು ಅಗಳು ಅಗಳಿಗೆ ಅಶ್ವಮೇಧ ಯಜ್ಞದ ಫಲವಿದೆ ಎಂದು ವರಾಹಪುರಾಣ ಸಾರಿದೆ. ಅಗ್ನಿಯಲ್ಲಿ ತಾಮ್ರಪಾತ್ರೆಯಲ್ಲಿ ಸಂಸ್ಕರಿಸಿದ ಅನ್ನ ಅತ್ಯಂತ ಆರೋಗ್ಯಕರ ಮತ್ತು ಅತಿಶಯಪುಣ್ಯಪ್ರದವೂ ಕೂಡ.

ಹೃದಿರೂಪಂ ಮುಖೇ ನಾಮ ನೈವೇದ್ಯಮುದರೇ ಹರೇಃ |
ಪಾದೋದಕಂ ಚ ನಿರ್ಮಾಲ್ಯಂ ಮಸ್ತಕೇ ಯಸ್ಯ ಸೋಚ್ಯುತಃ ||

"ಹೃದಯದಿ ರೂಪವು ವದನದಿ ನಾಮವು ಉದರದಿ ನೈವೇದ್ಯವು ಶಿರದಿ | ಪದಜಲ ನಿರ್ಮಾಲ್ಯವನೇ ಧರಿಸಿ ಸಜ್ಜನರ ಹೆಗ್ಗದವ ಕಾಯುವುದೇ| ಫಲವಿದು ಬಾಳ್ದುದಕೆ||" ಎಂದಿದ್ದಾರೆ. ಜಿಹ್ವೋಪಸ್ಥಗಳ ಜಯವೇ ಜಯ. ನಾಲಗೆಗೆ ಶಿಕ್ಷಣ ಕೊಟ್ಟರೆ ಹೊಟ್ಟೆಗೆದ್ದಂತೆಯೇ. ಹೊಟ್ಟೆಗೆದ್ದರೆ ದೇಹವೆಂಬ ರಥ ನಿಯಂತ್ರಣಕ್ಕೆ ಸಿಕ್ಕುತ್ತದೆ. ದೇಹವೆಂಬ ರಥ ನಿಯಂತ್ರಣಕ್ಕೆ ಸಿಕ್ಕಿದರೆ ದೇಹಿಯಾದ ರಥಿಕನಾದ ಜೀವನ ಪ್ರಯಾಣ ಸುಖಕರವಾಗಿ ಮುಂದುವರೆಯುತ್ತದೆ. ಆದ್ದರಿಂದ ಕೃಷ್ಣನು ಗೀತೆಯಲ್ಲಿ ಆಹಾರದ ನಿಯಂತ್ರಣ ತುಂಬ ಮುಖ್ಯವೆಂದು ಆಹಾರದ ನಿಯಂತ್ರಣದ ಬಗ್ಗೆ ಬಹು ಬಗೆಯಿಂದ ಎಚ್ಚರಿಸಿದ್ದಾನೆ.

"ನಾತ್ಯಶ್ನತಸ್ತು ಯೋಗೋಸ್ತಿ ನ ಚೈಕಾಂತಮನಶ್ನತಃ |"
"ಯಾತಯಾಮಂ ಗತರಸಂ ಪೂತಿ ಪರ್ಯುಷಿತಂ ಚ ಯತ್ |
ಉಚ್ಛಿಷ್ಟಮಪಿ ಚಾಮೇಧ್ಯಂ ಭೋಜನಂ ತಾಮಸಪ್ರಿಯಮ್ ||"

ಮುಂತಾಗಿ. ಆದ್ದರಿಂದ ಹೊಟ್ಟೆ ಇದೆ ಎಂದ ಮಾತ್ರಕ್ಕೆ ತುಂಬುವುದೇ

ಸಿದ್ಧಾಂತವಾಗಬಾರದು. ಮುಂದಿನ ಪರಿಣಾಮವೇನೆಂದು ಗಮನಿಸಬೇಕು. ತಿಂದ ಆಹಾರ 3 ಭಾಗವಾಗುತ್ತದೆ. ಒಂದು ಭಾಗ ಮಲ-ಮೂತ್ರಗಳಾಗಿ ಹೊರಗೆ ಬಿದ್ದರೆ; ಮತ್ತೊಂದು ಭಾಗ ರಕ್ತವಾಗಿ ಪರಿಣಾಮ ಹೊಂದುತ್ತದೆ. ಮತ್ತೊಂದು ಭಾಗ ಮನಸ್ಸಾಗಿ ಪರಿವರ್ತನೆ ಹೊಂದುತ್ತದೆ. ಇದರ ಬಗ್ಗೆ ಗಮನ ಇರಬೇಕು. ಕೆಟ್ಟ ಆಹಾರ ಮನದಲ್ಲಿ ಸೇರಿದರೆ ಬದುಕಿಗೆ ಚಿಂತೆ ಎಂಬ ರೋಗ ಹತ್ತಿ ಚಿತೆಗೆ ಕರೆದೊಯ್ಯುತ್ತದೆ ಎಚ್ಚರ!

ಆದ್ದರಿಂದ ವಿದುರ ಹೇಳುತ್ತಾನೆ. ಮತ್ತೊಬ್ಬರ ಮನೆಯಲ್ಲಿ ಊಟ ಮಾಡಿದವರು 'ಊಟ ಸವಿಯಾಯಿತೇ?' ಎಂದರೆ 'ನಾಳೆ ಹೇಳುತ್ತೇನೆ' ಎನ್ನಬೇಕಂತೆ. ಏಕೆಂದರೆ 'ನಿನ್ನ ಅನ್ನ ಮನಸ್ಸಿನ ಮೇಲೆ ಎಷ್ಟು ಪರಿಣಾಮ ಬೀರಿದೆ ಎಂಬುದು ನಾಳೆಯೇ ತಿಳಿಯುತ್ತದೆ' ಎಂದು ಅವನ ಭಾವ.

ಕೃಷ್ಣನು ಬಾಲ್ಯದಲ್ಲಿ ಗೋಪಿಯರ ಮನೆ ಮನೆಗೆ ನುಗ್ಗಿ ಬೆಣ್ಣೆಯನ್ನೇನೋ ಮೆದ್ದ. ಆದರೆ ದೊಡ್ಡವನಾದ ಬಳಿಕ ಆಹಾರಕ್ಕಾಗಿ ಕಾತುರನಾಗಲಿಲ್ಲ. ಭೀಷ್ಮರು ಕೃಷ್ಣನಿಗೆ ಹಾಲೆಂದರೆ ಬಲುಪ್ರೀತಿಯೆಂದು ಹಾಲುಣಿಸಲು ಅಣಿಯಾದಾಗ ಸಂಧಾನಕ್ಕೆಂದು ಹೋಗಿದ್ದ ಕೃಷ್ಣ ನೇರ ವಿದುರನ ಮನೆಗೆ ಹೋದ. ಏಕೆಂದರೆ ಭೀಷ್ಮರು ದ್ರೌಪದಿಯ ಮಾನಾಪಹರಣ ಪ್ರಸಂಗದಲ್ಲಿ ಮೌನ ವಹಿಸಿದ್ದರಿಂದ ಪಾಪ ಹೊಂದಿದ್ದಾರೆ. ಅವರ ಮನೆಯ ಹಾಲಿನಲ್ಲಿ ದುಷ್ಟಭಾವ ಇದೆ ಎಂದು ತೋರಿ ವಿದುರನ ಮನೆಗೆ ಹೋದ. ಇದು ಕೃಷ್ಣನು ಆಹಾರದ ಬಗ್ಗೆ ಎಚ್ಚರ ಮೂಡಿಸಿದ ಕೃತಿ.

ಇನ್ನು ಅಶ್ವತ್ಥಾಮರು ಹಾಲಿಗೆ ಮೋಹಿತರಾಗಿ ಜೀವನವನ್ನೆಲ್ಲಾ ಹಾಲಾಹಲ ಮಾಡಿಕೊಂಡು ಕೃಷ್ಣನನ್ನೇ ಕೊಲ್ಲಬೇಕೆಂಬ ನೀಚ ಸಂಕಲ್ಪಕ್ಕೂ ಅಣಿಯಾಗಿದ್ದರೆಂಬುದನ್ನು ಯೋಚಿಸಿ ಆಹಾರವನ್ನು ಬಾಯಿಗಿಡಿ. ಜಾಗ್ರತೆ. ತಿನ್ನುವುದೇ ಪುರುಷಾರ್ಥವಲ್ಲ. ತಿಳಿದು ತಿನ್ನುವುದು ಪುರುಷಾರ್ಥ.

ಬರೆ ಬಿದ್ದರೂ ಬುದ್ಧಿ ಕಲಿಯದ ಕಾಲ್ಗಳು

ಖಲಜಾರವಧೂಗೃಹಾಣಿ ನಿತ್ಯಂ
ಚರಣಾಭ್ಯಾಮನುಯಾಮ್ಯಹಂ ತ್ವರಾಭ್ಯಾಮ್ |
ನ ತು ಮಾಧವ ತಾವಕಾಲಯಾಂಶ್ಚ
ಪ್ರತಿಯಾಮೀಶ ಮಹತ್ತಮಾಗ್ರಹೋಽಹಮ್ ||೯||

ಮಾಧವನೇ! ನನ್ನ ಕಾಲ್ಗಳು ಖಲ-ವೇಶ್ಯೆಯರ ಮನೆಗಳಿಗೆ ನುಗ್ಗಲು ತ್ವರೆ ಮಾಡುತ್ತಿವೆ. ಆದರೆ ನಿನ್ನ ಮಂದಿರಕ್ಕೆ ನಡೆಯಲು ಪ್ರತಿಭಟಿಸುತ್ತಿವೆ ರಕ್ಷಿಸು. ಅವುಗಳನ್ನು ಶಿಕ್ಷಿಸು.

"ಚರಣೌ ತೌ ತು ಸಫಲೌ ಕೇಶವಾಲಯ ಗಾಮಿನೌ" ಎಂದಿದ್ದಾರೆ. ಆಚಾರ್ಯರು. ಕಾಲ್ಗಳಿಗೆ ಸಾರ್ಥಕ್ಯ ಹರಿಮಂದಿರಕ್ಕೆ ಸಾಗಿದಾಗಲೇ ಆದರೆ ಹರಿಮಂದಿರಕ್ಕೆ ಕಾಲೇಳವು. ಆದರೆ, "ಸ್ವೈರಿಣೀ ಕರೆದಿದ್ದಾಳೆ. ಧನ ಸಿಗುತ್ತದೆ" ಎನ್ನಿ. ತಲೆ ನೆರೆದ ಮುದುಕನೂ ಛಂಗನೆ ಎದ್ದು ನಿಲ್ಲುತ್ತಾನೆ. ಎಲ್ಲಿಲ್ಲದ ಬಲ ಕಾಲ್ಗಳಿಗೆ ಬರುತ್ತದೆ. ಇಂದು ದುಷ್ಕರ ತಾಣಗಳು ಅನೇಕ ಇವೆ. ಕೈಬೀಸಿ ಕರೆಯುತ್ತಿವೆ. ಮದ್ಯ, ವನಿತೆಯರ ಜತೆ ಸ್ವಚ್ಛಂದವಾಗಿ ವಿಹರಿಸುವವರ ಸಂಖ್ಯೆ ಅಧಿಕವಾಗಿದೆ. ಷೇರ್‌ಮಾರ್ಕೆಟ್ ಬಡ್ಡಿ, ವ್ಯವಹಾರ, ಫೈನಾನ್ಸ್ ಈ ಕ್ರಮದ ಲಾಬಿ ನಿತ್ಯವೂ ತಪ್ಪದೆ ಅತ್ಯುತ್ಸಾಹದಿಂದ ನಡೆಯುತ್ತಿದೆ. ಇಲ್ಲಿಗೆ ದಿನೇ ದಿನೇ ಸಾಗುವವರ ಸಂಖ್ಯೆ ಅಧಿಕವಾಗುತ್ತಿದೆ. ಕೆಲವರು ಮಡಿವಂತಿಕೆ ಸಮಾಜದಲ್ಲಿ ಹುಟ್ಟಿದೆವಲ್ಲ. ಇಂತಹ ಸ್ಥಳಗಳಿಗೆ ಹೋಗಲಾಗುತ್ತಿಲ್ಲವಲ್ಲ ಎಂದು ಪರಿತಪಿಸುವವರೂ ಇದ್ದಾರೆ. ಕೆಲವರು ಅಲ್ಲಿಯ ಸ್ವಚ್ಛಂದತೆಯಲ್ಲಿ ತಾವು ಭಾಗವಹಿಸದೇ ಇದ್ದರೂ ಭಾಗವಹಿಸುವವರ ರೀತಿ, ಉನ್ಮಾದ ಸ್ಥಿತಿಗತಿಗಳನ್ನು ಅವಲೋಕಿಸಿಕೊಂಡು ಬರುವ ಹವ್ಯಾಸ ಹೊಂದಿರುತ್ತಾರೆ. ಇದು ವಿಷಯೋನ್ಮತ್ತರಿಗೆ ಇವರು ನೀಡುವ ಪ್ರೋತ್ಸಾಹವೆಂದೇ ಹೇಳಬೇಕು. ಅಂತೂ ಇಂತಹ ಪ್ರಸಂಗಗಳ ಬಗ್ಗೆ ಮಾತನಾಡುವವರು ಹಲವರು, ದುಷ್ಟ ವನಿತೆಯರ ಸಂಪರ್ಕ ಇಟ್ಟುಕೊಳ್ಳುವವರು ಕೆಲವರು. ಅಸಹಾಯಕರು ಕೆಲವರು. ಹೀಗೆ ವಿಭಾಗಿಸುತ್ತಾ ಹೋದರೆ ಹರಿ ಮಂದಿರಕ್ಕೆ ಪ್ರತಿದಿನವೂ ಅದೇ ಕುತೂಹಲದಿಂದ ಸಾಗುವವರ ಸಂಖ್ಯೆ ಎಷ್ಟಿದೆ? ಕ್ಷಣಕಾಲ ವಿದ್ಯುತ್ ಸ್ತಂಭನವಾದರೆ ಗರಬಡಿದವರಂತೆ ಬೊಬ್ಬಿಡುವರಿದ್ದಾರೆ. ನಿತ್ಯವೂ 'ಹರಿಸ್ಮರಣೆ' ಎಂಬ ವಿದ್ಯುತ್ ಸ್ತಂಭಿತವಾಗಿದ್ದರೂ ಇದಕ್ಕೇಕೆ ತಲೆಕೆಡಿಸಿಕೊಳ್ಳುತ್ತಿಲ್ಲ. ಬಹುಷಃ ಹೊಟ್ಟೆಯು

ಹಸಿವಿನಿಂದ ಚುರುಗುಟ್ಟುವಂತೆ ತಲೆಗೂ ಇಂತಹ ಒಂದು ಹಸಿವಿನ ಸಂವೇದನೆಯನ್ನು ಶ್ರೀಹರಿಯು ನೀಡಿದ್ದಲ್ಲಿ ಚೆನ್ನಾಗಿರುತ್ತಿತ್ತೋ ಏನೋ!. ಕೆಲವರಂತೂ ಇಂಥ ಸಂವೇದನೆ ಅವನೇಕೆ ನೀಡಲಿಲ್ಲವೆಂದು ನಾಮಸ್ಮರಣೆಯ ಹೊಣೆಗಾರಿಕೆಯನ್ನು ಹರಿಯ ತಲೆಯ ಮೇಲೆ ಹಾಕಿ ತಾವು ಸ್ವಚ್ಛಂದವಾಗಿ ವರ್ತಿಸುತ್ತಾರೆ. ಅರೆ ಬೆತ್ತಲೆಯ ವೇಶ್ಯೆಯರ ದೃಶ್ಯಾವಳಿಗಳಲ್ಲಿರುವ ತವಕ ಹರಿಯ ವಿಶ್ವರೂಪದರ್ಶನದಲ್ಲಿಯೂ ಇವರಿಗಿಲ್ಲ. ಇಂತಹ ಅಸುರ ಮಂದಿಯ ನಡುವೆ ಕೆಲವು ಸಜ್ಜನರನ್ನು ಹರಿಯು ಸೇರಿಸಿದ್ದಾನೆ. ಆದರೆ ಅವರ ಹಾವಳಿಯಿಂದ ಸರಿಯಾದ ಮಾರ್ಗಕ್ಕೆ ಸಜ್ಜನರು ಬರುವಲ್ಲಿ ಹಿಂದೇಟು ಹಾಕುತ್ತಿದ್ದಾರೆ. ಅಧರ್ಮಗಾಮಿ ಕಂಸನ ಭಯದಿಂದ ಬ್ರಾಹ್ಮಣರು ಅಂದೇ ಕೃಷ್ಣನ ಬಳಿ ಹೋಗಲು ಅಂಜಿದರಂತೆ. ಗರ್ಗಮುನಿಗಳು ಕಂಸನಿಗೆ ಹೆದರಿ ಗುಟ್ಟಿನಲ್ಲಿ ಕೃಷ್ಣ, ರಾಮ ಎಂದು ನಾಮಕರಣ ಮಾಡಿದರಂತೆ. ಅಂತಹವಗೇ ಭಯವಿದ್ದಾಗ ನಮ್ಮಂಥವರಿಗೆ ಅಧರ್ಮದ ವಿರುದ್ಧ ಸೆಟೆದು ನಿಲ್ಲುವ ಕಿಚ್ಚು ಹುಟ್ಟುವುದೆಂತು. ಸಹವಾಸ ದೋಷದಿಂದ ದುರಾಗ್ರಹ ಹೊಂದಿದ ಬುದ್ಧಿಯು ನನ್ನ ಕಾಲ್ಗಳನ್ನು ಹರಿಮಂದಿರಕ್ಕೆ ಕೊಂಡೊಯ್ಯಲು ಪ್ರತಿಭಟಿಸುತ್ತದೆ. ಇದಕ್ಕೆ ತಿಳುವಳಿಕೆ ನೀಡುವ ಉಪಾಯವೇನೆಂದು ಅರುಹೆಲೋ ಹರಿಯೇ! ಎಂಬ ದೈನ್ಯತೆಯ ಪ್ರಾರ್ಥನೆ ಪೂಜ್ಯರ ಈ ಪದ್ಯದಲ್ಲಿದೆ.

ದುಷ್ಟರ ತಪ್ಪಿಗೆ ಶಿಷ್ಟರಿಗೇಟು

ಮನ ಏವ ಹರೇಽಖಿಲೇಂದ್ರಿಯಾಣಾಂ
ವರಮಿತ್ಥಂ ಪ್ರಮಿತಂ ಶ್ರುತಿಸ್ಮೃತಿಭ್ಯಾಮ್ |
ಸಮನೋಜಯಿನೋಽಖಿಲೇಂದ್ರಿಯಾಣಾಂ
ಜಯ ಏವೇತಿ ಜನಾನುಭೂತಿರಸ್ತಿ ||೧೦||

ಹರಿಯೇ! ಇಂದ್ರಿಯಗಳ ರಾಜ ಮನಸ್ಸೆಂಬುದು ಪ್ರಮಾಣ ಸಿದ್ಧವಾಗಿವೆ. ಮನಸ್ಸೊಂದು ಗೆದ್ದರೆ ಇಂದ್ರಿಯಗಳನ್ನು ಗೆದ್ದಂತೆ ಎಂಬುದು ಎಲ್ಲರ ಅನುಭವ.

ಒಂದೂರಿನಲ್ಲಿ ಒಬ್ಬ ಅಜಪಾಲನಿದ್ದ. ದಿನವೂ ಆಡುಕುರಿಗಳನ್ನು ಮೇಯಿಸಿ ಕಾಲಕಳೆಯುತ್ತಿದ್ದ. ಹೊಲ-ಗದ್ದೆ ಗುಡ್ಡಗಳಿಗೆ ಆಡು-ಕುರಿಗಳನ್ನು ಕರೆದೊಯ್ದು

ಅವುಗಳನ್ನು ಮೇಯಲು ಬಿಡುತ್ತಿದ್ದ. ಅವುಗಳು ಸುಖವಾಗಿ ಮೇಯುತ್ತಿರಲು ತನಗೆ ಹಸಿವಾದಾಗ ತಾನು ತಂದಿಟ್ಟುಕೊಂಡ ಬುತ್ತಿಯನ್ನು ತಿಂದು ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ. ಹೀಗೇ ದಿನ ಕಳೆಯುತ್ತಿರಲು ಒಂದು ದಿನ ಅಜಪಾಲಕ ಮನೆಯಿಂದ ಮೊಸರನ್ನದ ಬುತ್ತಿ ತಂದಿಟ್ಟುಕೊಂಡಿದ್ದ. ಕಾಡುಮೇಳಗಳಲ್ಲಿ ತಿರುಗುತ್ತಾ ಆಯಾಸವಾಗಿ ಬಲು ನೀರಡಿಕೆಯಾಯಿತು. ತಂದ ನೀರೆಲ್ಲ ಖಾಲಿಯಾಗಿತ್ತು. ದೂರದಲ್ಲೊಂದು ಸರೋವರವನ್ನು ಕಂಡ. ಅಲ್ಲಿಗೆ ಹೋಗಿ ನೀರು ತರಬೇಕೆಂದು ಹೊರಟ. ಹೋಗುವಾಗ ತನ್ನ ಮನೆಯಿಂದ ತಂದ ಬುತ್ತಿಯನ್ನು ಅಲ್ಲೆ ಒಂದು ಮರದ ಪೊಟರೆಯಲ್ಲಿಟ್ಟು ನಡೆದ. ಇವನನ್ನೇ ಗಮನಿಸುತ್ತಿದ್ದ ಕೋತಿಯೊಂದು ಆ ಪರಿಸರದಲ್ಲಿತ್ತು. ಆವಿಪಾಲಕ ಆಚೆ ನೀರಿಗಾಗಿ ನಡೆದ. ಈಚೆಯಿಂದ ಕೋತಿಯು ಹಸಿವಿನಿಂದ ಕಂಗೆಟ್ಟು ಅವನ ಬುತ್ತಿ ಇಟ್ಟ ಜಾಗದ ಬಳಿ ಬಂದಿತು. ದೇವರೇ ಕೊಟ್ಟ ಮೃಷ್ಟಾನ್ನವೆಂದು ಬಗೆದು ಬುತ್ತಿ ಬಿಚ್ಚಿ ಯಥೇಷ್ಟವಾಗಿ ತಿಂದಿತು. ಇನ್ನು ಬುತ್ತಿಯ ಯಜಮಾನ ಬರುವ ಹೊತ್ತಾಯಿತೆಂದು ತಿಳಿದು ಸ್ವಲ್ಪ ಗಾಬರಿಯಾಯಿತು. ಅವನು ಬಂದು ನೋಡಿದರೆ ಸಿಟ್ಟಾಗಿ ಅಟ್ಟಿಸಿ ಹೊಡೆದಾನೆಂದು ಸ್ವಲ್ಪ ಕುಯುಕ್ತಿಯನ್ನು ಬಳಸಿತು. ಅಲ್ಲಿಯೇ ಒಂದು ಮುದ್ದಾದ ಮೇಕೆಯ ಮರಿ ಈಗತಾನೇ ಪ್ರಕೃತಿಯ ಗರ್ಭದಿಂದ ಹೊರಬಂದು ಛಂಗಛಂಗನೆ ಕೆನೆಯುತ್ತಿತ್ತು. ಇದರ ಮೇಲೆ ಕೋತಿಗೆ ದೃಷ್ಟಿ ಬಿತ್ತು. ತಾನು ಇಷ್ಟು ಹೊತ್ತು ತಿಂದ ಎಲ್ಲ ಮೊಸರಿನ ಅನ್ನದ ಕೈಯನ್ನು ಮೇಕೆ ಮರಿಯ ಮುಸುಡಿಗೆ ಒರೆಸಿ ಪರಾರಿಯಾಯಿತು. ಅತ್ತ ಹಸಿದಿದ್ದ ಕುರಿಗಾರ ಬಂದ. ತನ್ನ ಬುತ್ತಿಯ ಬಳಿ ಸಾಗಿ ನೋಡುತ್ತಾನೆ. ಬುತ್ತಿ ಎಲ್ಲವೂ ಖಾಲಿಯಾಗಿದೆ. ಸಿಟ್ಟಾಗಿ ದೃಷ್ಟಿ ಇಟ್ಟು ನೋಡಿದ ಮೇಕೆಯ ಬಾಯಲ್ಲಿ ಮೊಸರನ್ನದ ಗುರುತು ಕಂಡಿತು. ನನ್ನ ಆಹಾರವನ್ನು ಮೇಕೆಯ ಮರಿಯೇ ತಿಂದಿತೆಂದು ಭ್ರಾಂತನಾಗಿ ಹಸಿವಿನಿಂದ ಕಂಗೆಟ್ಟು ಕೋಲಿನಿಂದ ಮೇಕೆ ಮರಿಗೆ ಬಲವಾಗಿ ಹೊಡೆದ. ಏನೂ ಅರಿಯದ ಮೂಕಪ್ರಾಣಿ ಮುಗ್ಧತನದ ತನ್ನ ಕಣ್ಣಾಲಿಗಳಿಂದ ಯಜಮಾನನ್ನೇ ನೋಡುತ್ತ ಪ್ರಾಣಬಿಟ್ಟಿತು.

ಬಹುಷಃ ಈ ಕಥೆ ನಮ್ಮ ಮನಸ್ಸಿಗೆ ಅನ್ವಯವಾಗುತ್ತದೆ. ಕೆಟ್ಟ ಖಾರದ ಪದಾರ್ಥ ತಿನ್ನು ಎಂದು ಮನಸ್ಸು ಪ್ರೇರಣೆ ಮಾಡಿ ಬಿಟ್ಟುಬಿಡುತ್ತದೆ. ಅದರ ಪರಿಣಾಮ ನಾಲಿಗೆ ಅನುಭವಿಸಬೇಕಾಗುತ್ತದೆ. ಕೆಟ್ಟಕರ್ಮ ಕೈಯಿಂದ ಮಾಡಿಸುವುದು ಮನಸ್ಸು. ಪೆಟ್ಟು ಶರೀರಕ್ಕೆ. ತಾನು ಆರಾಮವಾಗಿರುತ್ತದೆ. ಕಪಿಯಂತಹ ಮನಸ್ಸಿನಿಂದ

ಕುರಿಮರಿಯಂತಹ ಇಂದ್ರಿಯಗಳಿಗೆ ಬಲು ಉಪದ್ರವವಾಗಿದೆ. ಇದನ್ನು ಒಬ್ಬ ಕವಿ ಸೊಗಸಾಗಿ ನಿರೂಪಿಸುತ್ತಾನೆ.

ಖಲಃ ಕರೋತಿ ದುರ್ವೃತ್ತಂ ನೂನಂ ಫಲತಿ ಸಾಧುಷು |
ದಶಾನನೋ ಹರತ್ ಸೀತಾಂ ಬಂಧನಂ ತು ಮಹೋದಧೇಃ ||

ದುಷ್ಟರು ಕೆಟ್ಟ ಕೆಲಸಗಳನ್ನು ಮಾಡುತ್ತಾರೆ. ಅದರ ಪರಿಣಾಮವನ್ನು ಶಿಷ್ಟರು ಅನುಭವಿಸಬೇಕಾಗುತ್ತದೆ. ಸೀತೆಯನ್ನು ಕದ್ದೊಯ್ದವನು ರಾವಣ. ಆದರೆ ಬಂಧನ ಮಾತ್ರ ಸಮುದ್ರಕ್ಕಾಯಿತು. ಇದರಂತೆ ಮನಸ್ಸಿನ ಪ್ರೇರಣೆಯಿಂದ ಇಂದ್ರಿಯಗಳು ಕರ್ಮ ಮಾಡುತ್ತವೆ. ಕಳ್ಳ ಮಾಡಿದ್ದು ಮನಸ್ಸು. ಆದರೆ ಪೆಟ್ಟು ಇಂದ್ರಿಯಗಳಿಗೆ. ರಾಜನ ಆಜ್ಞೆಗೆ ಗುರಿಯಾದ ಭೃತ್ಯ ಶತ್ರುಗಳಿಂದ ಒದೆಯನ್ನು ಅನಿವಾರ್ಯವಾಗಿ ತಿನ್ನುವಂತೆ ಮನೋರಾಜನ ಆದೇಶಪಾಲಕರಾದ ಇಂದ್ರಿಯಭೃತ್ಯರಿಗೆ ಪೆಟ್ಟು ತಿನ್ನುವ ಅಪಾಯವಿದೆ. ಈ ಮನಸ್ಸೊಂದನ್ನು ಸರಿಪಡಿಸಿಕೊಂಡಲ್ಲಿ ಎಲ್ಲವೂ ಸ್ವಸ್ಥ, ಕ್ಷೇಮ. **'ಮನೋ ಹಿ ಹೇತುಃ ಸರ್ವೇಷಾಂ ಇಂದ್ರಿಯಾಣಾಂ ಪ್ರವರ್ತನೇ'** ಎಂಬ ಮಾತೂ ಸ್ಪಷ್ಟವಾಗಿದೆ. ಈ ಮನಸ್ಸು ಒಳ್ಳೆ ಹಾದಿ ಹಿಡಿದರೆ ಮುಕ್ತಿದ್ವಾರವೇ ತೆರೆದುಕೊಳ್ಳುತ್ತದೆ. **'ಮನ ಏವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋಃ'** ಆದರೆ ಈ ಮನಸ್ಸಿನ ವಿರುದ್ಧ ಸಾಗುವ ಬಗೆ ಹೇಗೆ ತಿಳಿಯದಾಗಿದೆ.

ಹರಿ ಒಲುಮೆಗೆ ಪ್ರಯತ್ನವಿಲ್ಲ

ಮನಸಾಚ್ಯುತಕೃಷ್ಣ ತಾದೃಶೇನಾ
ಪ್ಯನುಚಿಂತ್ಯೈವ ಭವಂತಮಾತ್ಮಭಕ್ತಾನ್ |
ಭವವಾರಿನಿಧೇಃ ಸುತಾರಯಂತಂ
ಭವವಾರ್ಧಿಂ ನ ಹಿ ತರ್ತುಮಸ್ತಿ ಯತ್ನಃ ||೧೧||

ಅಚ್ಯುತಕೃಷ್ಣನೇ! ಇಂತಹ ಪ್ರಬಲವಾದ ಮನಸ್ಸಿದ್ದರೂ ನಿನ್ನ ಮತ್ತು ನಿನ್ನ ಸಂಗಿಗಳ ಸಂಗದಿಂದ ಸಂಸಾರವನ್ನು ದಾಟುವ ಪ್ರಯತ್ನ ನಡೆದೇ ಇಲ್ಲ.

ಹರಿಯೇ! ಭಕ್ತರನ್ನು ಉದ್ಧರಿಸುವವನು ನೀನು. ಭಕ್ತರನ್ನು ಜಾರದಂತೆ ಕಾಪಾಡುವ ಅಚ್ಯುತನು ನೀನು. ನಿನ್ನಂಥ ಸರ್ವಸಮರ್ಥನನ್ನು ಸ್ಮರಿಸಿ ಭವಬೇಗುದಿಯಿಂದ ದಾಟಲು ಸಾಧ್ಯತೆಗಳಿದ್ದರೂ ಅದಕ್ಕಿನ್ನು ಮನಸ್ಸು ತಯಾರಾಗಿಲ್ಲ. ಅನಾದಿ ಸಂಸಾರದ ವಿಷವು ಆತ್ಮನ ಒಳಕ್ಕೆ ನುಗ್ಗಿ ಬಂಧನವನ್ನೇ

ಸುಖವೆಂದು ಭ್ರಮಿಸಿದೆ ಈ ಮನಸ್ಸು. ಅನೇಕ ಶ್ರುತಿ ಸ್ಮೃತಿಗಳು ಇದು ಸುಖವಲ್ಲ. ಸುಖದ ಭ್ರಾಂತಿ. ಇದು ನಶ್ವರ. ಹೇಯ. ಅಲ್ಪವಾದುದು. 'ತುರಗಜ್ಜಿಯ ಸುಖದಂತೆ'. ಗೆರೆಟೆ ನೆಕ್ಕಿದಂತೆ'. ಕಾಮಧೇನುವಿನ ಬಳಿ ಗೋಮಯ ಬಾಚಿದಂತೆ!. 'ಹಾವಿನ ಹೆಡೆಯ ನೆರಳಿನಂತೆ'. 'ಬಿಸಿಲುಗುದುರೆಯನರಸಿದಂತೆ'. 'ಚೇಳಿನ ಭಯಕ್ಕೆ ಹೆದರಿ ಹುಲಿಯ ಬಾಯಿಗೆ ಬಿದ್ದಂತೆ'. 'ಕಸ ಮುಚ್ಚಿದ ಪಾಳು ಬಾವಿಯಂತೆ'. 'ತಿರುಕನ ಕನಸಿನಂತೆ' 'ಗುಡಜಿಹ್ವೆಕೆಯಂತೆ'. ಎಂದು ಸಾವಿರಾರು ದೃಷ್ಟಾಂತಗಳನ್ನು ಕೊಟ್ಟು ಹೇಳಿದರು. ಅದಕ್ಕೇನು ಪರಿಣಾಮವಾಗುತ್ತಿಲ್ಲ. 'ಕಾಳ ಬೆಳದಿಂಗಳು ಈ ಸಂಸಾರ ಕತ್ತಲೆ ಬೆಳದಿಂಗಳು. ಮೂರು ದಿನದ ಭಾಗ್ಯ ಝಣ ಝಣ' ಮುಂತಾಗಿ ಪದ್ಯ ಪಠಿಸಿ ಗೊತ್ತೇ ವಿನಾ ಅದರ ಅಂತರಾರ್ಥಕ್ಕಿನ್ನು ಮನಸೋಲಲಿಲ್ಲ.

ಕಾಳಸಂತೆಯ ವ್ಯಾಪಾರಿಗಳ ಕೂಗಿಗೆ ಯಾರೂ ಗಮನ ಹರಿಸದಿರುವಂತೆ ಶ್ರುತಿ ಸ್ಮೃತಿಗಳ ಪಾಡು ಹಾಗಾಗಿದೆ. ಶ್ರುತಿ ಸ್ಮೃತಿಗಳು ಯಾರಿಗಾಗಿ ಹೇಳುತ್ತಿವೆ ಎಂಬ ಯೋಚನೆಯೇ ಇಲ್ಲವಾಗಿದೆ.

ಸ್ವಲ್ಪ ಗಂಭೀರವಾಗಿ ಯೋಚಿಸಿ ನೋಡಿದರೆ ಲಕ್ಷ್ಮೀಪತಿಯ ಮಕ್ಕಳಾದ ನಾವು ತೊಟ್ಟಿಯಲ್ಲಿ (ಡಸ್ಟ್‌ಬಿನ್) ಬಿದ್ದಿರುವ ಎಂಜಲು ಅಗಳುಗಳನ್ನು ಹೆಕ್ಕುತ್ತಿದ್ದೇವೆ' ಎನ್ನಿಸದಿರದು. ರಾಜಪುತ್ರರು ಎಂಜಲು ತಿನ್ನುವುದು ಎಷ್ಟು ಸರಿ? ನಾವೆಲ್ಲರೂ ಶ್ರೀಮನ್ನಾರಾಯಣನ ಮಕ್ಕಳು. ಆದರೆ ದರಿದ್ರರ ಮಕ್ಕಳಂತೆ, ಕಲಿಯ ಮಕ್ಕಳಂತೆ, ಸ್ವಾರ್ಥ ಐಹಿಕ ಭೋಗಗಳೇ ಬಲು ಶ್ರೇಷ್ಠ ಎಂದು ಭ್ರಾಂತರಾಗಿದ್ದೇವೆ. ಇದು ದೇವರಿಗೆ ಮಾಡುವ ಅಪಮಾನ. ದೇವರ ಮಕ್ಕಳಾದ ನಾವು ದೇವರು ಕೊಟ್ಟ ವರ್ಣಾಶ್ರಮವೋಚಿತವಾದ ಕೆಲಸಗಳನ್ನು ಮಾಡಿಕೊಂಡು ಹರಿಪೂಜೆ ಎಂದು ಸಮರ್ಪಿಸುತ್ತಿರಬೇಕು.

ಅರ್ಜುನನು ಯುದ್ಧಕ್ಕೆಂದು ಬಂದು ಓಡತೊಡಗುತ್ತಾನೆ. ಕೃಷ್ಣ ಕೇಳುತ್ತಾನೆ. ಬಂದದ್ದೇಕೆ? ಹೋಗುತ್ತಿರುವುದೇಕೆ?

ಅರ್ಜುನ :- ರಾಜ್ಯ ಲಾಭಕ್ಕಾಗಿ ಯುದ್ಧ ಮಾಡಬೇಕೆಂದು ಬಂದೆ. ಗುರುಗಳನ್ನು ಕೊಂದು ಅನುಭವಿಸುವ ರಾಜ್ಯ ಸುಖ ಬೇಡವೆನಿಸಿತು ಅದಕ್ಕೆ ಹೊರಟೆ ಎಂದ.

ಕೃಷ್ಣ ಹೇಳುತ್ತಾನೆ. ಅದು ಸರಿ ಯುದ್ಧರೂಪವಾದ ಕರ್ಮವನ್ನು ರಾಜ್ಯಲಾಭಕ್ಕಾಗಿ ಮಾಡಬೇಕೆಂದು ನಿನಗೆ ಹೇಳಿಕೊಟ್ಟವರು ಯಾರು?

ಈ ಪ್ರಶ್ನೆಗೆ ಅರ್ಜುನ ಅವಾಕ್ಕಾದ?

ಕೃಷ್ಣ ಕೇಳುತ್ತಾನೆ. ಯುದ್ಧವನ್ನು ರಾಜ್ಯಕ್ಕಾಗಿ ಮಾಡಬೇಕೆಂದು ಯಾರ್ಯಾರು

ಬಂದಿದ್ದಾರೆ? ಅರ್ಜುನನು ಎದುರು ನಿಂತಿರುವ ದುರ್ಯೋಧನಾದಿಗಳನ್ನು ತೋರಿಸುತ್ತಾನೆ. ಆವಾಗ ಕೃಷ್ಣನು ಅದ್ಭುತವಾದ ಮನಶ್ಶಾಸ್ತ್ರವೆನಿಸಿದ ಗೀತೋಪದೇಶ ಮಾಡುತ್ತಾನೆ.

ಯುದ್ಧವು ದುಷ್ಟರ ವಿರುದ್ಧ ಕ್ಷತ್ರಿಯರು ನಡೆಸಬೇಕಾದ ದೇವರ ಪೂಜೆ. ಇಲ್ಲಿ ಲಾಭ-ನಷ್ಟ, ಜಯ-ಅಪಜಯ, ಮಾನ-ಅಪಮಾನ ಯಾವುದಕ್ಕೂ ಮೂರು ಕಾಸು ಬೆಲೆಯಿಲ್ಲ. ಹರಿಯು ಪ್ರಸನ್ನನಾಗುವಂತೆ ಕರ್ತವ್ಯ ಮಾಡಿದುದೇ ಫಲ. ನೀನು ಫಲಕಾಮನೆಯಿಂದ ಯುದ್ಧ ಮಾಡಬೇಡ. ಭಗವತ್ಪ್ರೀತಿಗಾಗಿ ಸೆಣಸಾಡು. ಇದರಿಂದ ನಿನಗಾವ ಪಾಪ ಲೇಪವೂ ಆಗದು ಎಂದಾಗ. ಅರ್ಜುನ ಕರ್ತವ್ಯಕ್ಕಾಗಿ ಸಿಡಿದು ನಿಲ್ಲುತ್ತಾನೆ. ಇಂದು ಕರ್ತವ್ಯ ಮೂಢರಾದ ನಾವೂ ಗೀತೆಯಿಂದ ಇದೇ ಸ್ಫೂರ್ತಿಯನ್ನು ಹೊಂದಬೇಕಾಗಿದೆ. ಶ್ರುತಿಸ್ಮೃತಿಗಳು ಯಾವುವೂ ಐಹಿಕ ಸುಖಕ್ಕಾಗಿ ಕರ್ಮ ಮಾಡಿ ಎನ್ನುತ್ತಿಲ್ಲ. ಫಲವನ್ನು ಹರಿ ಅಧೀನವೆಂದರಿತು ಜೀವನವನ್ನು ಯಜ್ಞ ಭಾವನೆಯಿಂದ ನಡೆಸಿರಿ ಎನ್ನುತ್ತಿವೆ. ಯಜ್ಞದಲ್ಲಿ ಪ್ರತಿಯೊಂದು ಆಹುತಿಯ ದಾನದ ಪ್ರಸಂಗದಲ್ಲಿಯು 'ಸ್ವಾಹಾ' 'ಇದಂ ನ ಮಮ' ಎನ್ನುವಂತೆ ಪ್ರತಿಯೊಂದು ಕರ್ತವ್ಯದ ಹಿಂದೆಯೂ 'ಹರಿಪ್ರೀತಿಗಾಗಿ! ಈ ಕರ್ಮ'. 'ನನಗ್ಯಾವ ಐಹಿಕ ಸುಖಗಳು ಇದರಿಂದ ಬೇಡ' ಎಂದು ಮಾಡುತ್ತಿರಿ. ಇದರಿಂದಾಗುವ ಪ್ರಯೋಜನವೇನೆಂದು ನೀವೇ ಬಲ್ಲವರಾಗುತ್ತೀರಿ. ಬಹಳ ಸುಲಭವಾಗಿ ಹರಿಯನ್ನು ಸಮೀಪಿಸಬಹುದಾದ ತಿಳಿಯಾದ ಹಿರಿದಾದ ತತ್ವವನ್ನು ಶ್ರೀಮದಾನಂದ ತೀರ್ಥ ಭಗವತ್ಪಾದಾಚಾರ್ಯರು ನಮ್ಮ ಪಾಲಿಗೆ ಪ್ರೀತಿಯಿಂದ ತಿಳಿಸಿದ್ದರೂ ನಮ್ಮ ಅಜ್ಞಾನ ಕೂಪದಿಂದ ಇನ್ನೂ ನಾವು ಹೊರಬಂದಂತಿಲ್ಲ. ಇದಕ್ಕಾವ ಪ್ರಯತ್ನಗಳು ನಡೆಯುತ್ತಿಲ್ಲ. ಇದಕ್ಕೇನು ಮಾಡಬೇಕೆಂದು ನಮ್ಮ ಪರವಾಗಿ ಹರಿಯನ್ನೇ ಮೊರೆಹೊಕ್ಕಿದ್ದಾರೆ ವಿಜಯೀಂದ್ರರು.

ಹರಿಪರವಾಗಿ ಮನವನ್ನು ತಿದ್ದುವುದೇ ಪ್ರಯತ್ನ ಎನಿಸಿದೆ. ಮಧ್ವರಂತಹ ಗುರುಗಳನ್ನು ನಿತ್ಯ ನೆನೆಯುವುದೇ ಸತ್ಕರ್ಮ ಎನಿಸಿದೆ. (ಕೃತ್ಯೇಷು ಪ್ರವರ ಇತೀಹ ವರ್ಣಯಾಮಃ) ಸುಖದುಃಖಗಳೆರಡು ಹರಿಯಧೀನ. ದುಃಖವು ಹೇಗೆ ಬಯಸದಿದ್ದರೂ ಬಂದೇ ತೀರುವುದೋ ಸುಖವೂ ಹಾಗೆ. ಬೇಡ ಬೇಡ ಎಂದರೂ, ಬರುವ ಸುಖ ಬಂದೇ ಬರುತ್ತದೆ. ಅದಕ್ಕಾಗಿ ಪ್ರಯತ್ನ ಮಾಡುವವನ ಬಳಿ ಶಾಸ್ತ್ರ ಕೇಳುತ್ತದೆ. "ಸುಖ ದುಃಖಗಳೆರಡು ಸಮಾನ. ಸುಖಕ್ಕೆ ಪ್ರಯತ್ನ ಪಡುತ್ತಿದ್ದೀಯಲ್ಲ ಅದರಂತೆ ದುಃಖಕ್ಕೇಕೆ ಪ್ರಯತ್ನಿಸುತ್ತಿಲ್ಲ" ಎಂದು. ಇದಕ್ಕೆ ನಾವು ಮೂರ್ಖರೆಂಬುದೇ ಉತ್ತರವಾಗಿದೆ. ಎಚ್ಚರ!. ಆದ್ದರಿಂದ ಬಾಹ್ಯವಾಗಿ ಸುಖದುಃಖಗಳು ಒದಗಿ ಬಂದಾಗ

ಇದನ್ನು ಹರಿಸಂಕಲ್ಪವೆಂದು ಬಗೆದು ತಳ್ಳಿಹಾಕಬೇಕು. ಸಕಲವಿಧದ ಪ್ರಯತ್ನವೂ ಹರಿಯಲ್ಲಿ ಮನಸ್ಸನ್ನು ನೆಲೆಗೊಳ್ಳಿಸಲು ಜೀವನ ಯಜ್ಞವು ಹರಿಪೂಜೆಯಂತಾಗಲು ನಡೆಸಬೇಕು. ಇದೇ 'ಪ್ರಯತ್ನ' ಶಬ್ದದ ಅರ್ಥ. ಆತ್ಮೋದ್ಧಾರದ ಪ್ರಯತ್ನವೇ ಪ್ರಯತ್ನ ಎನಿಸಿದೆ. ಇಂಥಹವರನ್ನು ಹರಿಯು ಕಾಯುವ. ಇದನ್ನರಿಯದೆ ಮೂರ್ಖನಾಗಿದ್ದೇನೆ. ಉದ್ಧರಿಸು!!

ಹರಿಯೇ ನಿನಗೊಂದು ಕೃತಜ್ಞತೆ

ಮಮ ಪಾಪಚಯಸ್ಯ ವಾಸುದೇವಾಂತಕ-
ಲೋಕಸ್ಥಿತಿರೇವ ಚೇತ್ಫಲಂ ತು |
ನ ಸುಖೀ ಸದೃಶೋಸ್ತಿ ಮೇ ತ್ರಿಲೋಕ್ಯಾಂ
ಫಲಭಾವೇನ ಮಹತ್ತಮೋಽಸ್ತಿ ಸಿದ್ಧಮ್ ||೧||

ಹರಿಯೇ! ನೀನು ನನ್ನ ಪಾಪಕ್ಕೆ ನರಕಕ್ಕೇ ತಳ್ಳಿದಿ ಎಂದರೆ ನಿಮಗೊಂದು ನಮನ. ಏಕೆಂದರೆ ನನ್ನ ಪಾಪಕ್ಕೆ ಅಂಧ ತಮಸ್ಸೇ ಗತಿ ಎಂದು ನಾನು ಹೆದರಿದ್ದೆ. ಆದರೆ ಕರುಣೆಯಿಂದ ನರಕಕ್ಕೆ ಹಾಕಿ ನನ್ನನ್ನು ಸಂತೋಷಪಡಿಸಿದೆ.

ನಾವು ದಿನನಿತ್ಯ ಮಾಡುವ ಪಾಪಕರ್ಮಗಳನ್ನು ಲೆಕ್ಕಿಸುತ್ತಾ ಹೋದರೆ ನಾವೇ ಗಾಬರಿಪಟ್ಟೆವು. 10 ಲಕ್ಷ ಸಾಲ ಮಾಡಿದವ ಬಡ್ಡಿ ಕಟ್ಟದಿದ್ದರೆ ದಿನೇದಿನೇ ಬಡ್ಡಿ ಬೆಳೆದು, ಅಸಲಿಗಿಂತಲೂ ಅಧಿಕವಾಗಿ ಸಾಲ ಬೆಳೆಯುವಂತೆ ಪ್ರತಿನಿತ್ಯವೂ ಔದಾಸೀನ್ಯದಿಂದ ನಾಳೆ ನಾಳೆ ಎಂದು ಧರ್ಮದ ಆಚರಣೆಗೆ ಮುಂದೂಡುತ್ತಾ ಇದ್ದರೆ ಪಾಪಪ್ರಚಯ ಅಧಿಕವಾಗಿ ಬೆಳೆಯುವುದು. ಒಂದು ನಿಮಿಷಕ್ಕೆ ಹತ್ತು ಜನ್ಮಕ್ಕೆ ಬೇಕಾಗುವಷ್ಟು ಪಾಪಗಳನ್ನು ಜೀವ ಮಾಡುತ್ತಾನೆ. ಕ್ಷಣಾರ್ಧದಲ್ಲಿ ಸಾವಿರಾರು ವರ್ಷ ನರಕದಲ್ಲಿ ಶಿಕ್ಷೆ ಅನುಭವಿಸಬೇಕಾಗುವಷ್ಟು ಪಾಪಗಳನ್ನು ನಿತ್ಯ ಮಾಡುತ್ತಲೇ ಇದ್ದೇವೆ. ಹೀಗೆ ಅನಂತ ಜನ್ಮಗಳಲ್ಲಿನ ಪಾಪಕರ್ಮಗಳನ್ನು ಲೆಕ್ಕ ಮಾಡುತ್ತಾ ಹೊರಟರೆ ಪುನರುತ್ಥಾನವಿಲ್ಲದ ಅಂಧಂತಮಸ್ಸಿಗೆ ಯೋಗ್ಯವಾಗುವಷ್ಟು ಪಾಪಗಳನ್ನು ಮಾಡಿದ್ದೇನೆ.

ಇಂತಹ ಪರಮಪಾಪಿಯಾದ ನನಗೆ ನೀನೇನಾದರೂ ನರಕಕ್ಕೆ ಮಾತ್ರ ಹಾಕಿದೆ ಎಂದರೆ ನಿನ್ನಂಥ ಕರುಣಿಯೇ ಈ ಜಗತ್ತಿನಲ್ಲಿ ಇಲ್ಲ ಎಂದು ಭಾವಿಸುತ್ತೇನೆ. ಏಕೆಂದರೆ ಮಹಾತಮಸ್ಸಿಗೆ ಕಾರಣವಾದ ಪಾಪವನ್ನು ಮಾಡಿದ ಪರಮ ಪಾಪಿಷ್ಠನಾದ ನನಗೆ ಕೇವಲ ನರಕವಾಸದಿಂದ ಮಹಾತಮಸ್ಸಿನ ನರಕವನ್ನು ತಪ್ಪಿಸಿದೆಯಲ್ಲ!. ಇಂತಹ ನಿನಗೆ ಅನಂತಾನಂತ ಕೃತಜ್ಞತೆಗಳು.

ವಿಜಯೀಂದ್ರರು ಇಂದಿನ ಭಕ್ತರ ಪಾಪವನ್ನು ಅಂದೇ ನೋಡಿ ಹೇಳಿದ ಮಾತಿದು. ದೇವರು ನರಕ ಕೊಟ್ಟರೂ ನಮ್ಮ ಮೇಲೆ ತೋರಿದ ದೊಡ್ಡ ಕರುಣೆ ಎಂಬ ಪ್ರಾರ್ಥನೆ ಬಲು ನೂತನವಾಗಿದೆ.

ಹರಿಯೇ ನಿನಗೊಂದು ಸವಾಲು

ನ ಸುಖಾನುಭವಾಯ ಪಾಪಕರ್ಮಾ-
ಣ್ಯಹಮೀಶಾನುದಿನಂ ತನೋಮಿ ಕಿಂತು |
ಅಘನಾಶಯಶಃ ಪರೀಕ್ಷಣಾರ್ಥಂ
ತವ ನಾಮ್ನಾಮನುತಾಪಸಿದ್ಧ ಏವ ||೧೩||

ದೇವನೇ! ನಾನು ಏನೋ ಸುಖ ಸಿಗುತ್ತದೆಂದು ಪಾಪಕರ್ಮಗಳೆನ್ನಸಗುತ್ತಿಲ್ಲ. ಪಾಪಪರಿಹಾರಕನಾದವ ನೀನೇ ಎಂಬ ನಿನ್ನ ಕೀರ್ತಿಯ ಪರೀಕ್ಷೆಗಾಗಿ ಪಾಪ ಮಾಡುತ್ತೇನೆ. ನನ್ನಂಥ ಪಾಪಿಯನ್ನು ಉದ್ಧರಿಸಿದರೆ ನಿನಗೇ ಕೀರ್ತಿ.

ನನ್ನಂಥ ಪಾಪಿ, ನಿನ್ನಂಥ ಕರುಣಿ ಯಾರೂ ಇಲ್ಲ ಎಂಬುದನ್ನು ಇಬ್ಬರೂ ಸಾಬೀತು ಪಡಿಸಬೇಕು. ಅದಕ್ಕಾಗಿ ಸಾವಿರಾರು ಪಾಪ ನಾನು ಮಾಡುತ್ತೇನೆ. ಅದೆಲ್ಲವನ್ನು ಕ್ಷಣ ಮಾತ್ರದಲ್ಲಿ ನೀನು ಪರಿಹರಿಸು.

ಒಂದು ಬಾರಿ ಹೊಸದಾಗಿ ತಪ್ಪು ಮಾಡಿದರೆ ದಾಕ್ಷಿಣ್ಯ ಪಡಬೇಕು. ನಿತ್ಯ ತಪ್ಪು ಮಾಡುವ ಇಂದ್ರಿಯಗಳ ಗುಲಾಮರಾದ ನಾವು ನಮ್ಮನ್ನು ಸಮರ್ಥಿಸಿಕೊಳ್ಳಲು ಏನಾದರೊಂದು ಸಮಜಾಯಿಷಿಯನ್ನು ಹೇಳಲೇಬೇಕು. ಆದರೆ ಅದು ಹರಿಯ ಸ್ವಾತಂತ್ರ್ಯ ಜೀವರ ಅಲ್ಪತೆಯ ಮೇಲೆ ಬೆಳಕು ಚಲ್ಲುವಂತಿರಬೇಕು. ಇಂತಹ ಒಂದು ಅದ್ಭುತವಾದ ಮಾತಿನ ಶೈಲಿಯಿಂದ ನಮ್ಮ ಪಾಪವನ್ನು ಮನ್ನಾ ಮಾಡಿ

ಅನುಗ್ರಹಿಸೆಂದು ನಮ್ಮ ಪರವಾಗಿ ಗುರುಗಳು ಪ್ರಾರ್ಥಿಸುತ್ತಿದ್ದಾರೆ.

ಹತ್ತಾರು ವರ್ಷ 'ಸರ್ಕಾರಿ ವ್ಯವಸಾಯ ಸಹಕಾರ ಬ್ಯಾಂಕ್'ನಲ್ಲಿ ಸಾಲ ಮಾಡುತ್ತಲೇ ಇರುವ ಕೃಷಿಕನು ಮುಂದೆ ಬದುಕಬೇಕೆಂದರೆ ಅನಿವಾರ್ಯವಾಗಿ ಸರ್ಕಾರವು ಆ ಕೃಷಿಕನ ಸಾಲವನ್ನು ಮನ್ನಾ ಮಾಡಲೇಬೇಕು. ಇಲ್ಲವಾದಲ್ಲಿ 'ರೈತ ಆತ್ಮಹತ್ಯೆಗೆ ಸಾಲದಿಂದ ಶರಣಾದ. ನಿರ್ಲಕ್ಷ್ಯ ವಹಿಸಿದ ಸರ್ಕಾರ' ಎಂಬ ಆಪಾದನೆಗಳು ಬರುತ್ತವೆ. ಇದರಂತೆ ಜೀವರಿಗೆ ಹತ್ತಾರು ಜನ್ಮಗಳ ಮಾತ್ರ, ದೇವತಾ ಋಣಗಳು ತೀರಿಸಬೇಕಾದ ಹೊಣೆಗಾರಿಕೆ ಇದೆ. ಜೊತೆಗೆ ಇಂತಹ ಸಾಧನೆಯ ಅದ್ಭುತವಾದ ಶರೀರವನ್ನು ನೀಡಿದ ಹರಿಕರುಣೆಯನ್ನು ಕೃತಜ್ಞತೆಯಿಂದ ಸ್ಮರಿಸದೆ ಮಹಾಪರಾಧಕ್ಕೆ ತುತ್ತಾಗಿದ್ದೇವೆ. ಜೊತೆಗೆ ಭ್ರೂಣಹತ್ಯೆ, ಸ್ತ್ರೀಹತ್ಯೆ, ಬ್ರಾಹ್ಮಣ - ಗೋಹತ್ಯೆಗಳಿಗೆ ಸಮಾನವಾದ ನೂರಾರು ಪಾಪಗಳು ನಡೆಯುತ್ತಲೇ ಇರುತ್ತವೆ. ಒಂದು ಅಪರಾಧಕ್ಕೆ ಹಿಂದಿರುಗುವ ಸ್ವಭಾವ ಜೀವನಿಗೇನಿಲ್ಲ. ಹೀಗೆ ಅನಂತ ಅಪರಾಧಗಳ ಕಂತೆ ಜೀವ. ಇವನನ್ನು ಸೃಷ್ಟಿಗೆ ತಂದ ಮಹಾನುಭಾವ ಶ್ರೀ ಹರಿ. ಅದಕ್ಕಾಗಿಯಾದರೂ ಅವನ ಮರ್ಯಾದೆ ಕೀರ್ತಿಗೆ ಅಪಖ್ಯಾತಿ ಬಾರದಿರಲು ನಮ್ಮಂಥ ಪಾಪಿ ಜನರನ್ನು ಉದ್ಧಾರ ಮಾಡಬೇಕಾದ ಅನಿವಾರ್ಯತೆಯನ್ನು ನಿವೇದಿಸುತ್ತಿದ್ದಾರೆ. ನಾನೆಂಥ ಪಾಪಿಯಾದರೂ ಅದನ್ನು ಮನ್ನಿಸುವ ಕಾರುಣ್ಯ ಮತ್ತು ಪಾಪಪರಿಹರಿಸುವ ಸಾಮರ್ಥ್ಯ ಶ್ರೀಹರಿಯಲ್ಲಿದೆ. ಶ್ರೀಹರಿಯ ಕರುಣೆ ದೊರೆಯದೆ ಇದ್ದಲ್ಲಿ ನನ್ನ ಉದ್ಧಾರ ನನ್ನಿಂದ ಅತ್ಯಂತ ಅಸಂಭಾವಿತವಾದದ್ದು.

ಇದನ್ನೇ ದಾಸರು 'ನಡೆದು ಬಾರಯ್ಯ ಭವ ಕಡಲಿಗೆ ಕುಂಭಸಂಭವ! ಎಂದು ಸಂಬೋಧಿಸಿ ಹರಿಯನ್ನು ಕರೆದಿದ್ದಾರೆ. ಭವಸಮುದ್ರಕ್ಕೆ ಅಗಸ್ತ್ಯರಂತಿರುವಿ ನೀನು. ಸಮುದ್ರವನ್ನೇ ಆಚಮನ ಮಾಡಿದ ಕುಂಭಸಂಭವರಾದ ಅಗಸ್ತ್ಯರಂತೆ ನನ್ನ ಸಂಸಾರ ಸಮುದ್ರವನ್ನು ಆಚಮನ ಮಾಡುವ ಅಗಸ್ತ್ಯ ನೀನು ಎಂದು ಹೇಳಿ; ಮುಂದೆ

'ಬಿರುದು ಬೇಕಾದರೆ ಸರಸರನೆ ಬಾ' ಎಂದು ವಿಜಯೀಂದ್ರರ ಭಾವವನ್ನೇ ಹೊತ್ತು ಹಾಡು ಹೆಣೆದಿದ್ದಾರೆ. ಮಾಡಬಾರದ ಕೆಲಸ ಮಾಡಿದ ಮಗನು, ತುತ್ತು ಕೊಟ್ಟು, ಬಟ್ಟೆ, ನೆರಳು, ಪ್ರೀತಿ, ವಾತ್ಸಲ್ಯಗಳನ್ನು ಹರಿಸಿದ ತಂದೆಯ ಬಳಿ ಮುಖಕೊಟ್ಟು ಹೇಗೆ ನಿಲ್ಲಲಾರನೋ ಹಾಗೆಯೇ ಅನಂತ ಜನ್ಮಗಳಲ್ಲಿ ಉಪಕರಿಸಿ ಸಾಧನೆಗೆ ಕಳಿಸಿದ ಹರಿಯ ಮುಂದೆ ಇಂತಹ ನೀಚ ಅಪರಾಧಗಳನ್ನು ಮಾಡಿ ನಾನು ಹೇಗೆ ಮುಖಕೊಟ್ಟು ಮಾತನಾಡಲಿ!! ಎಂದು ಪಶ್ಚಾತ್ತಾಪದಿಂದ ಕಂಗೆಟ್ಟ ಸಜ್ಜನ ವಿಧೇಯ ಮಕ್ಕಳಿಗೆ, ವಿಜಯೀಂದ್ರರು 'ಈ ಪದ್ಧತಿಯಿಂದ ದೇವರ ಬಳಿ ಮಾತನಾಡಿ' ಎಂದು

ಅಪರಾಧಿ ಭಕ್ತರ ಪರವಾಗಿ ವಕಾಲತ್ತು ಮಾಡುತ್ತಿದ್ದಾರೆ ಎಂಬಂತಿದೆ ಈ ಪದ್ಯ.

ಎನ್ನ ಪಾಪಗಳೆಲ್ಲ ಅಸುರರಿಗಾಗಿ

ನಿಜವಾಸರುಷಾ ಪ್ರದಾತುಮಾರ್ತಿಂ
ಹ್ಯಧಿಕಾಂ ಪಾಪ ನಿಯಾಮಾಕಾಸುರೇಭ್ಯಃ |
ಅಶುಭಾನ್ಯಪಿ ಕಾರಯನ್ಮಯಾ ತ್ವಂ
ರಮಸೇ ಸರ್ವನಿಯಾಮಕೋ ವಿಭಾಸಿ ||೧೪||

ಹರಿಯೇ ! ನಿನ್ನ ಭಕ್ತರ ಶರೀರದೊಳಹೊಕ್ಕ ರಕ್ಕಸರ ಮೇಲಿನ ಉಕ್ಕಿ ಬಂದ ಕಡುಕೋಪದಿಂದ ನನ್ನಿಂದ ಪಾಪ ಮಾಡಿಸುವೆಯಾ!. ಇಂತಹ ಆಟಕ್ಕೆ ನನ್ನನ್ನು ಬಳಸಿಕೊಂಡೆಯಾದಲ್ಲಿ ನಾನು ಧನ್ಯ. ಗೆದ್ದಂತೆ.

ನಮ್ಮ ಶರೀರದಲ್ಲಿ ತತ್ವಗಳ ಒಡೆಯರಾಗಿ ಕಲ್ಯಾದಿ ದೈತ್ಯರೂ ಕುಳಿತಿದ್ದಾರೆ. ಬ್ರಹ್ಮಾದಿ ದೇವತೆಗಳೂ ಸನ್ನಿಹಿತರಾಗಿದ್ದಾರೆ. ಪಾಪಾಭಿಮಾನಿ ಪುಣ್ಯಾಭಿಮಾನಿಗಳ ಕೇಂದ್ರಸ್ಥಾನ ನಮ್ಮ ಶರೀರ. ದೈತ್ಯರ ವಿರುದ್ಧವಾಗಿ ದೇವತೆಗಳು ಪುಣ್ಯಕರ್ಮ ಮಾಡಿಸುತ್ತಿದ್ದರೆ; ಅದೇ ದೇವತೆಗಳ ವಿರುದ್ಧ ದೈತ್ಯರು ಪಾಪ ಕರ್ಮ ಮಾಡಿಸುತ್ತಿದ್ದಾರೆ. ಅಂತೂ ಜೀವನೊಬ್ಬ ಇಲ್ಲಿ ಬಲಿಪಶು. ಆದರೆ ಜೀವನು ತನ್ನಿಂದ ನಡೆಯುವ ಕರ್ಮಗಳಲ್ಲಿ ಪಾಪಾಭಿಮಾನಿದೈತ್ಯರನ್ನು ಪುಣ್ಯಾಭಿಮಾನಿ ದೇವತೆಗಳನ್ನು ನೆನೆದಲ್ಲಿ ಅದೆರಡರ ಸಂಬಂಧ ಅವರಿಗೇ ಮುಟ್ಟುತ್ತದೆ. ಪಾಪವನ್ನು ನಾನೇ ಮಾಡಿದ್ದೇನೆಂದರೆ ಅದರ ಫಲವನ್ನು ನಾವೇ ಅನುಭವಿಸಬೇಕು. ಪುಣ್ಯವನ್ನು ನಾನೇ ಮಾಡಿದೆ ಎಂದರೆ ಅಹಂಕಾರ ಪಟ್ಟಿದ್ದಕ್ಕೆ ಪಾಪವೇ ಬರುತ್ತದೆ. ಆದ್ದರಿಂದ ತತ್ವಾಭಿಮಾನಿಗಳ ಕರ್ಮಾನುಸಂಧಾನ ಇಲ್ಲಿ ತುಂಬಾ ಮುಖ್ಯವಾದುದು.

ಕೆಲವರು ಒಳ್ಳೆಯ ಕರ್ಮಗಳನ್ನು ಮಾಡುತ್ತಾರೆ. ಕೃಷ್ಣಾರ್ಪಣ ಮರೆಯುತ್ತಾರೆ. ಅವರು ಮಾಡಿದ ಪುಣ್ಯಕರ್ಮವನ್ನು ದೈತ್ಯರು ಅಪಹರಿಸುತ್ತಾರೆ. ಬ್ಯಾಂಕಿನ ತುಂಬಾ ಅಥವಾ ಮನೆಯ ತುಂಬಾ ದುಡ್ಡು ತುಂಬಿ ಬ್ಯಾಂಕಿಗೆ ಅಥವಾ ಮನೆಗೆ ಬೀಗ ಹಾಕುವುದನ್ನೇ ಮರೆತು ಊರಿಗೆ ನಡೆದರೆ ಧನವೆಲ್ಲ ಕಳ್ಳರ ಪಾಲಾಗುವಂತೆ; ಸತ್ಕರ್ಮ ಮಾಡಿ ಕೃಷ್ಣಾರ್ಪಣ ಎನ್ನದಿರೆ ಅದರ ಫಲ ಅನುಭವಿಸಲಾಗದು. ಆದರೆ ಸಜ್ಜನರಿಂದ, ಈ ಕ್ರಮಧಲ್ಲಿ ದೈತ್ಯರು ಕದ್ದ ಪುಣ್ಯದ ಫಲವನ್ನು ಶ್ರೀಹರಿಯು ಅವರಿಗೆ

ಅನುಭವಿಸಲು ಬಿಡ. ಅದನ್ನು ಉಪಾಯದಿಂದ ಕಸಿದು ಸಜ್ಜನರಿಗೆ ಕೊಡುತ್ತಾನೆ.

ಎಂಥವರಿಗೆ ಕೊಡುತ್ತಾನೆ ಎಂದರೆ ಒಬ್ಬ ತಿರುಪತಿಗೆ ನಡೆದು ಹೊರಟಿದ್ದಾನೆ. ಅವನ ಕೈಯಲ್ಲಿ ಒಬ್ಬ 500 ರೂಪಾಯಿ ಕೊಟ್ಟು 'ನನ್ನ ಹೆಸರಿನಲ್ಲಿ ದೇವರ ಹುಂಡಿಗೆ ಹಾಕು' ಎಂದು ಹೇಳಿದ. ಅದರಂತೆ ಪ್ರಾಮಾಣಿಕವಾಗಿ ಅವನು ನಡೆದುಕೊಂಡರೆ 500 ರೂಪಾಯಿ ಕೊಟ್ಟವನಿಗೆ ಏನು ಪುಣ್ಯವಿದೆ; ಅದೇ ಪುಣ್ಯ ಹುಂಡಿಗೆ ಹಾಕಿದವನಿಗೂ ಇದೆ. ಈ ಪುಣ್ಯ ಇವನಿಗೆ ಎಲ್ಲಿಂದ ಬಂತು? ಎಂದು ಒಂದು ಪ್ರಶ್ನೆ ಇಲ್ಲಿದೆ.

ಇನ್ನು ಕೆಲವರು ಸತ್ಕರ್ಮದ ಸಂಕಲ್ಪದಲ್ಲಿಯೇ ಫಲವನ್ನು ಹೊಂದುತ್ತಾರೆ. ಅವರಿಗೆ ಪುಣ್ಯ ಎಲ್ಲಿಂದ ಬಂತು? ಎಂದರೆ ದೈತ್ಯರು ಏನು ಸಜ್ಜನರ ಕೃಷ್ಣಾರ್ಪಣವಿಲ್ಲದೆ ಮಾಡಿದ ಕರ್ಮದ ಪುಣ್ಯವನ್ನು ಕದ್ದಿದ್ದಾರೆ ಅದನ್ನು ಕಸಿದು ದೇವರು ಇಂಥಹವರಿಗೆ ಕೊಡುತ್ತಾನೆ. ಇಷ್ಟೇ ಏನು! ಭಾಗವತ ಹೇಳುವ ಸಾಧಕರೊಡನೆ ಹರಿಪ್ರತೀಕ ಇವರು ಎಂಬ ಚಿಂತನೆಯಿಂದ ಅವರ ಜೊತೆಗೆ ಪುಸ್ತಕ ಹಿಡಿದು ಹೊರಟರೆ ಒಂದು ಹೆಜ್ಜೆಗೆ ಒಂದು ಅಶ್ವಮೇಧಯಜ್ಞದ ಪುಣ್ಯವಿದೆ ಎಂದಿದ್ದಾರೆ. ಆದ್ದರಿಂದ ಕದ್ದದ್ದು ಎಂದಿಗೂ ದೈತ್ಯರಿಗೆ ಧಕ್ಕಿಸಿಕೊಳ್ಳಲಾಗದು. ಸತ್ಕರ್ಮ ಮಾಡಿದರೆ ಸಜ್ಜನರಿಗೆ ಅದರ ಫಲ ಎಂದಿಗೂ ತಪ್ಪದು. ಇಲ್ಲಿ ಪಾಪವೂ ಪುಣ್ಯವಾಗುವ ಸಾಧ್ಯತೆ ಸಜ್ಜನರ ಪಾಲಿಗಿದೆ. ಹೇಗೆಂದರೆ ನಮ್ಮಿಂದ ತಿಳಿಯದೆ ಪಾಪಕರ್ಮ ನಡೆದಾಗ; ಹರಿಯೇ! 'ಇದು ನಿನ್ನ ಸಂಕಲ್ಪ. ಬಲಿಷ್ಠವಾದ ಇಂದ್ರಿಯಗಳಿಗೆ ವಶವಾಗಿ ದಾರಿ ತಪ್ಪಿದೆ' ಮನ್ನಿಸು! "ಇದೆಲ್ಲವು ಪಾಪಾಭಿಮಾನಿ ದೈತ್ಯರ ಕ್ರಿಯೆ" ಎಂದು ಅನುಸಂಧಾನ ಮಾಡಿದರೆ ಆ ಪಾಪವನ್ನು ದೈತ್ಯರಿಗೆ ಕೊಡುತ್ತಾನೆ. ಹೀಗೆಂದು ಪಾಪಕರ್ಮದ ಸ್ಫೂರ್ತಿಯನ್ನು ಹೊಂದಬಾರದು. ಇದು ಕೇವಲ ತಿಳಿಯದೆ ಮಾಡಿದಾಗ ಉದ್ದೇಶವಿಲ್ಲದೆ ನಡೆದಾಗ ಮಾತ್ರ ಅನ್ವಯವಾಗುತ್ತದೆ.

ದ್ರೋಣಾಚಾರ್ಯರು ದುರ್ಯೋಧನನಿಗಾಗಿ ಸ್ವಧರ್ಮವನ್ನು ತ್ಯಾಗ ಮಾಡಿ ಪಾಂಡವರ ವಿರುದ್ಧವಾಗಿ ಕೃಷ್ಣನ ಮುಂದೆ ನಿಂತು ಭಯಂಕರವಾದ ಯುದ್ಧವನ್ನು ಮಾಡಿದರು. ದ್ರೋಣರನ್ನು ತನ್ನ ಸ್ವಾರ್ಥಕ್ಕೆ ಸೆಳೆದ ಪಾಪಕ್ಕೆ ದ್ರೋಣಾಚಾರ್ಯರ ಅಧರ್ಮದ ಫಲವನ್ನೆಲ್ಲ ದುರ್ಯೋಧನನೇ ಅನುಭವಿಸಿದ. ದ್ರೋಣರು ಯೋಗಸಿದ್ಧಿಯಿಂದ ಪ್ರಾಣತ್ಯಾಗ ಮಾಡಿ ಸದ್ಗತಿಯನ್ನೇ ಹೊಂದಿದರು. ಹರಿಯು ಸಜ್ಜನರನ್ನು ದುಷ್ಟರೊಡನೆ ಇಟ್ಟು; ದುಷ್ಟರ ಸ್ವಭಾವಕ್ಕೆ ತಕ್ಕ ದುಷ್ಕರ್ಮವನ್ನೇ

ಮಾಡಿಸಿ ಅವರಿಗೆ ಅತಿಶಯವಾದ ಪಾಪವನ್ನೇ ನೀಡುತ್ತಾನೆ. ಅದರಂತೆ ದುಷ್ಟರಿಗೆ ಪಾಪವನ್ನು ನೀಡುವುದಕ್ಕಾಗಿ 'ನನ್ನಿಂದ ಪಾಪಕರ್ಮವನ್ನು ಮಾಡಿಸಿದ್ದೀ' ಎಂದು, 'ತಿಳಿಯದೆ ಮಾಡಿದ ಪಾಪಕರ್ಮಕ್ಕೆ' ಸಜ್ಜನರು ಸಮಾಧಾನ ಪಟ್ಟುಕೊಂಡು ಮುಂದೆ ಉನ್ನತ ಸಾಧನೆಗೆ ಅಣಿಯಾಗಬೇಕೆಂದು ಈ ಮೂಲಕ ತಿಳಿಸುತ್ತಿದ್ದಾರೆ.

ಉದಾರಿಯ ಬಳಿ ದರಿದ್ರನ ತ್ಯಾಗದ ಮಾತಿನಂತೆ

ಯದಿ ಕೃಷ್ಣ ಕದಾಚನಾಪಿ ಪುಣ್ಯಂ
ಘಟತೇ ಪಾಪಮಯಸ್ಯ ಮೇऽಪಿ ತತ್ತು|
ಪ್ರಬಲಾಘಚಯೈರ್ನಿಹನ್ಯತೇ ವಾ
ದುರಿತಧ್ವಂಸಕೃತಾರ್ಥಮೀಶ ವಾ ಸ್ಯಾತ್ ||೧೫||

ಹರಿ ಕೃಷ್ಣನೇ! ಪಾಪದ ಪ್ರವಾಹದಲ್ಲಿ ತೊಳಲಾಡುವ ನಾನು ಕ್ಷಣಕಾಲ ಪುಣ್ಯಸಂಪಾದಿಸಿದರೂ ಪಾಪದ ಎತ್ತರದ ತರಂಗ ಈ ಪುಣ್ಯದ ಬಿಂದುವನ್ನು ಹೊಡೆದು ಹಾಕುತ್ತದೆ. ಅಥವಾ ಇದರಿಂದ ಸ್ವಲ್ಪ ಪಾಪವು ನಷ್ಟವಾದೀತು.

"ನಾನು ಏಕಾದಶಿ ಮಾಡಿದೆ". "ವಿಷ್ಣು ಪಂಚಕ ವ್ರತ ಮಾಡಿದೆ". "ಚಾತುರ್ಮಾಸ್ಯ ವ್ರತ ಆಚರಿಸಿದೆ". "ತೀರ್ಥಯಾತ್ರೆ ದಾನ ಮಾಡಿದೆ". ನನಗೂ ಒಳ್ಳೆಯದನ್ನು ಮಾಡು!' ಎಂದು ದೇವರ ಮುಂದೆ ಬೊಬ್ಬೆ ಹೊಡೆಯುವವರೂ ಇದ್ದಾರೆ. ಆದರೆ ಈ ಮಾತುಗಳು ಔದಾರ್ಯದಿಂದ ರತ್ನಾಭರಣಗಳ ಕಣಜವನ್ನೇ ದಾನ ಮಾಡಿದ ಧೀರನ ಮುಂದೆ ದರಿದ್ರ ಮಾಡಿದ ಚಾಪೆ ದಾನದ ಮಾತಿನಂತೆ. ದೇವರು ನಮಗಾಗಿ ಇಂದ್ರಿಯ-ಶರೀರ-ಬುದ್ಧಿ-ಆಹಾರ-ಗಾಳಿ-ಬೆಳಕು - ನೆಲೆ-ಸುಖ- ಎಲ್ಲವನ್ನೂ ಕೊಟ್ಟು, ಸಾಧನೆಗೆ ಅವಕಾಶವನ್ನು ಕೊಟ್ಟು, ಸಾಧನೆ ಮಾಡದೆ ನಿನ್ನ ಭಕ್ತ ಎಂದರೂ ಉದ್ಧರಿಸುವ ಕರುಣೆಯಾಗಿರುವಾಗ, ಅವನ ಮುಂದೆ 'ನಾನು ಹೀಗೆ ಮಾಡಿದೆ. ಹಾಗೆ ಮಾಡಿದೆ' ಎನ್ನುವ ಮಾತು? ಎಷ್ಟು ಅಲ್ಪವಾದದ್ದು. ಹೋಗಲಿ ಮಾಡಿದ್ದಾದರೂ ಯಾರಿಗಾಗಿ. ಲಕ್ಷ್ಮೀಪತಿಯಾದ ಅವನಿಗೆ ನಮ್ಮ ಕಿಲುಬುಗಾಸು ಬೇಕೆ? ಗಂಗಾ ಜನಕನಿಕೆ ಗಡಿಗೆ ನೀರು ಬೇಕೆ. ಶತರವಿತೇಜಗೆ ಬತ್ತಿಯ ಏಕಾರತಿ ಏಕೆ? ಅಹಿತಲ್ಪಗನಿಗೆ

ಹರಿದ ಹಾಸೇಕೆ? ನಿತ್ಯಪೂರ್ಣನಾದ ಹರಿಗೆ ನಾವೇನು ಕೊಟ್ಟರು ಅದು ಅಪೂರ್ಣ. ಆದ್ದರಿಂದ ಸಮರ್ಪಣೆ ಎಂದರೆ ವಸ್ತುಗಳ ಅಲ್ಪತೆಯನ್ನು ಬೋಧಿಸಿ ಹರಿಯ ಮಹತ್ವವನ್ನು ಅರಿಯುವುದು. ಈ ಅನುಸಂಧಾನದಿಂದ ಕರ್ಮಸಂಪೂರ್ಣವಾಗುತ್ತದೆ.

ಕ್ಷಣಕ್ಷಣವೂ ಸಾವಿರಾರು ಪಾಪಕರ್ಮಗಳಲ್ಲಿ ಸೆಳೆದೊಯ್ಯುವ ಶತ್ರುಗಳಂತಿರುವ ಇಂದ್ರಿಯಗಳಿಂದ ನಡೆದ ಪುಣ್ಯಸಾಧನೆಯಾದರೂ ಯಾವುದು?. ಅಕಸ್ಮಾತ್ ನಡೆದಿದ್ದರೂ ಪಾಪಪ್ರವಾಹ ವಿರುದ್ಧ ನಿಲ್ಲುವಷ್ಟು ಪುಣ್ಯಸಂಗ್ರಹವಿದೆಯೇ? ಪಾಪದ ಕೂಪದಲ್ಲಿ ಬಿದ್ದ ಒಂದು ಬಿಂದು ಪುಣ್ಯವೂ ಕಳೆದುಹೋಗುವ ಅಪಾಯ ನಮಗಿದೆ. ಒಂದು ವೇಳೆ ನಾವು ಸಂಗ್ರಹಿಸಿದ ಪುಣ್ಯವು ಪಾಪವನ್ನು ಸುಡುತ್ತದೆ ಎಂದಿಟ್ಟುಕೊಂಡರೂ ಅದು ಎಷ್ಟು ಪಾಪವನ್ನು ದಹಿಸೀತು?

ಒಬ್ಬ 12 ಮದುವೆ ಆಗಿದ್ದಾನೆ. ಒಬ್ಬೊಬ್ಬ ಹೆಂಡತಿಯಲ್ಲಿ ಕನಿಷ್ಟ ಹತ್ತು ಮಕ್ಕಳನ್ನು ಪಡೆದಿದ್ದಾನೆ. ಅವರನ್ನು ಸಾಕಲು ಒಂದು 10 ಸಾವಿರ ಬಾಡಿಗೆ ಮನೆ ಹಿಡಿದಿದ್ದಾನೆ. ಅವರ ಬಟ್ಟೆ ಆಹಾರ ರೋಗ ರೋಜಿನಗಳಿಗೆ ತಿಂಗಳಿಗೆ 25 ಸಾವಿರ ಖರ್ಚಾಗುತ್ತದೆ. ಸ್ವತಃ ತಿಂಗಳಿಗೆ 3 ಸಾವಿರ ಸಂಬಳ ತೆಗೆದುಕೊಳ್ಳುತ್ತಿದ್ದಾನೆ. ಇಂತಹವನ ಸಂಸಾರದ ವ್ಯವಸ್ಥೆ ಎಷ್ಟುದಿನ ಸುವ್ಯವಸ್ಥಿತವಾಗಿ ನಡೆಯಬಹುದೆಂದು ಯೋಚನೆ. ಸ್ವಲ್ಪ ಸಮಯ ದಿನಸಿ ಅಂಗಡಿಯಲ್ಲಿ ಸಾಲ ಮಾಡಬಹುದು. ಮನೆ ಯಜಮಾನನಿಗೆ 3 ತಿಂಗಳು ತಡೆದು ಬಾಡಿಗೆ ಕಟ್ಟುತ್ತೇನೆ ಎನ್ನಬಹುದು. ಹೀಗೆ ಹೇಗೊ 2-3 ತಿಂಗಳು ತಡೆದು ಬಾಡಿಗೆ ಕಟ್ಟುತ್ತೇನೆ ಎನ್ನಬಹುದು. ಹೀಗೆ ಹೇಗೋ 2-3 ತಿಂಗಳು ಕಾಲ ತಳ್ಳಬಹುದು. ನಂತರದ ಸ್ಥಿತಿಯನ್ನು ನೀವೇ ಊಹಿಸಿಕೊಳ್ಳಿ. 35 ಸಾವಿರ ಖರ್ಚು ಅನಿವಾರ್ಯವಾಗಿರುವಾಗ 3 ಸಾವಿರ ಸಂಪಾದಿಸುವವನಿಗೆ ಮಾನಸಿಕ ನೆಮ್ಮದಿ ಸಿಗುತ್ತದೆ ಎಂದರೆ ನಂಬಲು ಸಾಧ್ಯವೇ?! ಇವನ ಪ್ರಯತ್ನ ಸಂಪಾದನೆಗಳು ಖರ್ಚಿನ ಮುಂದೆ ಅತ್ಯಲ್ಪ. ಅದರಂತೆ ಇಂದ್ರಿಯಗಳ ಗುಲಾಮನಾದ ಜೀವನು ಒಂದೊಂದು ಇಂದ್ರಿಯಗಳು ಬಯಕೆಯ ಹೆಣ್ಣಿನಂತಿವೆ. ಒಂದೊಂದಕ್ಕೆ ಒಂದೊಂದರ ಚಪಲ. ಕಣ್ಣು ಟಿ.ವಿ. ತಾ ಎಂದರೆ ಕಿವಿ ಬಂಗಾರ ತಾ ಎನ್ನುತ್ತದೆ. ಬಾಯಿ ತಿನಿಸಿಗಾಗಿ ದಿನಸಿ ಅಂಗಡಿಯನ್ನೇ ತಾ ಎನ್ನುತ್ತದೆ. ಮೂಗು ಪರಿಮಳ ದ್ರವ್ಯಬೇಕೆನ್ನುತ್ತದೆ. ತ್ವಗಿಂದ್ರಿಯ A.C. ಬೇಕೆನ್ನುತ್ತದೆ. ಕಾಲು ಚಪ್ಪಲಿ ಕೊಡಿಸೆಂದರೆ ಕೈ ಮೊಬೈಲ್ ಕೊಡು ಎನ್ನುತ್ತದೆ. ಉಪಸ್ಥವೂ ತನಗೆ ಬೇಕಾದ್ದನ್ನು ಕೇಳುತ್ತದೆ. ಹೀಗೆ ಜೀವನನ್ನು ಹಿಂಡುವ ಇಂದ್ರಿಯಗಳು ಹಂಚಿಕೊಂಡಿವೆ. ಇವುಗಳ ಕಾಮನೆಯನ್ನು ಪೂರೈಸಿ ಸಾಧನೆಗೆ ಅಣಿಯಾಗುತ್ತೇನೆಂದರೆ ಸಮುದ್ರದಲ್ಲಿ ತೆರೆಗಳು

ನಿಂತ ಮೇಲೆ ಸ್ನಾನ ಮಾಡುತ್ತೇನೆ ಎಂದಂತೆ. ಒಂದು ಇಂದ್ರಿಯ ವಿಷಯದಲ್ಲಿ ತೃಪ್ತಿ ಪಡೆಯಿತೆಂದರೆ ಮತ್ತೊಂದು ಇಂದ್ರಿಯ ಭೋಗಕ್ಕೆ ತಯಾರಾಗಿರುತ್ತದೆ. ಇದರ ಮಧ್ಯ ಪುಣ್ಯ ಸಂಪಾದನೆ ಎಂದರೆ ಹಿಮಾಲಯದ ತುದಿಯಲ್ಲಿ ಮೊಸರನ್ನು ತಿಂದಂತೆ. ಆಕಾಶಕ್ಕೆ ಅಭಿಷೇಕ ಮಾಡಹೋದಂತೆ.

ಆದ್ದರಿಂದ ಜೀವನದಲ್ಲಿ ಪುಣ್ಯ ಸಂಪಾದಿಸುತ್ತೇವೆ. ಎಂಬ ಮಾತು. ತಾಯಿಯ ಬಳಿ ಮಗು ಜಿಹ್ವೆಯನ್ನು ಗೆಲುತ್ತೇನೆ ಎಂದಂತೆ. ನಮ್ಮ ಜೀವನದಲ್ಲಿ ನಡೆಯುವ ಸತ್ಕರ್ಮ ಮತ್ತು ದುಷ್ಕರ್ಮಗಳನ್ನು ವಿಂಗಡಿಸಿದರೆ. ದುಷ್ಕರ್ಮ ಮೇರುವಿನಂತೆ ಕಾಣುತ್ತದೆ. ಮತ್ತು ಕಾಡುತ್ತದೆ. ಸತ್ಕರ್ಮ ಸಾಸಿವೆ ಕಾಳಿನಂತೆ ಕಾಣುತ್ತದೆ. ಇದು ಹೇಗಿದೆ ಎಂದರೆ "ಬಂಜೆಯ ಮಗನು ಮೊಲದ ಕೊಂಬಿನ ಧನಸ್ಸು ಹಿಡಿದು ಬಂಗಾರದ ಜಿಂಕೆಗೆ ಆಕಾಶ ಪುಷ್ಪದ ಬಾಣವನ್ನು ಬಿಡಲು ಹೋದ" ಎಂಬ ಮಾತಿನಂತೆ ಅತ್ಯಂತ ಅಸಂಭಾವಿತವಾದುದು. ಆದ್ದರಿಂದ ನಿನ್ನ ಮುಂದೆ "ನಾನ್ಯಾತರವನಯ್ಯ ಇಂದಿರೇಶ! ಎಂಬ ಭಿನ್ನಹದ ಹೊರತಾಗಿ ಅನ್ಯಮಾತುಗಳ ಸಂಭ್ರಮಕ್ಕೆ ಬೆಲೆಯಿಲ್ಲ. ಅದಕ್ಕಾಗಿ ನಮ್ಮ ಮನದ ಭಾವನೆ ಸರ್ವದಾ ಹೀಗಿರಬೇಕೆಂದು ವಾದಿರಾಜ ಗುರುಸಾರ್ವಭೌಮವರು ಅಪ್ಪಣೆ ಕೊಡಿಸಿದ್ದಾರೆ.

"ಅಧೋಽಹಂ ಕರುಣಾಸಿಂಧೋ ವೀಕ್ಷೇ ನ ಕ್ಷೇಮ ಪದ್ಧತಿಮ್ |
ಇಂದಿರೇಶ ಕರಂ ಗೃಹ್ಣನ್ ವರ್ತಯಾನಿಂದ್ಯ ವರ್ತ್ಮನಿ ||

ಹರಿಯೇ ನಾನೊಬ್ಬ ಕುರುಡ! ಒಳಿತನ ಮಾರ್ಗ ತಿಳಿಯದ ಅಂಧತ್ವ ನನ್ನಲ್ಲಿದೆ. ಕರುಣೆ ಮತ್ತು ಬಲಗಳಿಂದ ಕೂಡಿದ ಲಕ್ಷ್ಮೀಪತಿ ನೀನು. ನನ್ನ ಬದುಕನ್ನು ನಿರ್ದುಷ್ಟವಾದ ದಾರಿಯಲ್ಲಿ ಕೈಹಿಡಿದು ಕರೆದುಕೊಂಡು ಹೋಗು. ಎಂದು ಇಷ್ಟೇ ಪ್ರಾರ್ಥಿಸಬೇಕು.

ಮಗು ಒಂದು ತಾಯಿಯ ಬಳಿ ತನಗೆ ಸಿಕ್ಕಿದ್ದೆಲ್ಲ ಕೊಡುತ್ತದೆ. ಯಾರಾದರೂ ದುಡ್ಡು ಕೊಟ್ಟರೆ ಅಮ್ಮನಿಗೆ ತಂದು ಕೊಡುತ್ತದೆ. ಅಮ್ಮ ಅದನ್ನು ಈ ಮಗುವಿನ ದುಡ್ಡು ಎಂದು ತೆಗೆದಿಡುತ್ತಾಳೆ. ಮತ್ತೊಂದು ಮಗುವಿನ ದುಡ್ಡನ್ನು ಹೀಗೆ ತೆಗೆದಿಡುತ್ತಾಳೆ. ದುಡ್ಡು ಕೊಟ್ಟ ಮಗು ಅವಾಗವಾಗ 'ನನ್ನ ದುಡ್ಡು ಎಷ್ಟಿದೆ ಹೇಳು' 'ಅದನ್ನು ಕೊಡು' ಎಂದು ಹೇಳಿದರೆ ತಾಯಿ ಸಿಟ್ಟಿನಿಂದ ಎತ್ತಿ ಕೊಟ್ಟು ಇನ್ನೊಂದು ಬಾರಿ ಆ ಮಗುವಿನ ದುಡ್ಡನ್ನೇ ಮುಟ್ಟಳು. ತಾಯಿಯ ಹೃದಯವನ್ನು ಅರ್ಥೈಸಿಕೊಂಡ ಮಗು ಗಲಾಟೆ ಮಾಡಬಾರದು. ತಾಯಿಯು ನಿಷ್ಕಾಮನೆಯನ್ನು ಮಗುವಿನ ಬಳಿ ಬಯಸುತ್ತಾಳೆ. ಹಟ ಮಾಡಿದರೆ ಮಾತೃತ್ವ ಮಮತೆಯಿಂದ ಮಗು

ದೂರ ಉಳಿಯುತ್ತದೆ. ಅದರಂತೆ ನಮ್ಮ ತಾಯಿ ಹರಿ. ನಮಗೇನು ಜೀವನದಲ್ಲಿ ಬಂದರು ಅದನ್ನು ಅವನಿಗೆ ಸಮರ್ಪಿಸಬೇಕು. ಆಯಾ ಮಕ್ಕಳ ಸಂಪತ್ತನ್ನು ಪ್ರತ್ಯೇಕವಾಗಿ ತೆಗೆದಿಡುವ ತಾಯಿಯಂತೆ ಶ್ರೀಹರಿಯೂ ಅವರವರ ಕರ್ಮಗಳನ್ನು ತೆಗೆದಿಟ್ಟಿರುತ್ತಾನೆ. ಮಗು ತಾಯಿಯ ಬಳಿ ಏನೂ ಕೇಳದೆ ಇದ್ದಾಗ ಮಗುವಿಗೆ ಬೇಕಾದ ಎಲ್ಲ ಅನುಕೂಲವನ್ನು ತಾಯಿ ಒದಗಿಸಿ ಕೊಡುತ್ತಾಳೆ. ಇದರಂತೆ ಹರಿಯು ನಿಷ್ಕಾಮ ಕರ್ಮದಿಂದ ಪ್ರೀತನಾಗಿ ನಮ್ಮ ಅಣು ಕರ್ಮವನ್ನೇ ಅನಂತ ಮಾಡಿ, ನೀಡಿ ಉದ್ಧರಿಸುತ್ತಾನೆ. ಇದಕ್ಕೆ ಸಾಧಕರಾದ, ಹರಿಯ ಮಕ್ಕಳಾದ ನಮ್ಮಲ್ಲಿರಬೇಕಾದದ್ದು ಸ್ವಲ್ಪ ತಾಳ್ಮೆ. ಸ್ವಲ್ಪವಾದರೂ ಸಮರ್ಪಣೆ. ಹರಿಯ ಪರೀಕ್ಷೆಯಲ್ಲಿ ನಾವು ಎಂದೂ ಅನುತ್ತೀರ್ಣರಾಗಬಾರದು. ತಾಯಿಯಲ್ಲಿನ ಪ್ರೀತಿ ಹರಿಯಲ್ಲಿ ತೋರಬೇಕು. ಆದ್ದರಿಂದ ಕರ್ಮದಲ್ಲಿ ಅಧಿಕಾರವೇ ವಿನಾ ಫಲದಲ್ಲಿ ನಮಗೇನು ಸ್ವಾತಂತ್ರ್ಯವಿಲ್ಲ. ಹರಿಯು ಹೇಳಿದಂತೆ ಅವನ ಪ್ರೀತಿಗಾಗಿ ಜೀವನಯಜ್ಞ ನಡೆಯಬೇಕು. ಈ ಯಜ್ಞದಲ್ಲಿ ಸ್ವಾರ್ಥ ಬಯಸ ಹೋದಲ್ಲಿ ಅನರ್ಥಕ್ಕೀಡಾಗುತ್ತೇವೆ.

ಅದಕ್ಕೆ ಹೆಚ್ಚು ಉಸಾಬರಿಗೆ ಹೋಗದೆ ಇಷ್ಟು ಮಾಡಿ ಎಂದು ಪುರಂದರ ದಾಸರು ಅಪ್ಪಣೆ ಕೊಡಿಸಿದ್ದಾರೆ.

"ಹರಿಯು ಕರುಣದೊಳಾದ ಭಾಗ್ಯವ ಹರಿ ಸಮರ್ಪಣೆ ಮಾಡಿ ಬದುಕಿದರೋ ಒಡೆಯ ಪುರಂದರ ವಿಟ್ಠಲರಾಯರನ ಚರಣ ಕಮಲವ ನಂಬಿ ಬದುಕಿರೋ" ಎಂದು.

ಭಯವ ಪರಿಹರಿಸೋ ಭಯನಾಶಕ!

ತದಿಹೋಭಯತಶ್ಚ ಪುಣ್ಯಮೂರ್ತೇ
ಸುಕೃತಂ ನೋ ಘಟತೇ ಮನಾಗಪೀಶ |
ವದ ಮೇ ಪುರತಸ್ತ್ವತೀವ ಭೀರೋ-
ರ್ಭಗವನ್ ಕಾಲಭಯಾಪಹರ್ತೃಪಾಯಮ್ ||೧೬||

ಪುಣ್ಯಮೂರ್ತಿಯೇ! ನನ್ನ ಪುಣ್ಯವೇ ಪಾಪದಿಂದ ನಾಶವಾಗಬಹುದು. ಅಥವಾ ಪೂಣ್ಯದಿಂದ ಸ್ವಲ್ಪ ಪಾಪ ನಾಶವಾಗಬಹುದು. ಹೀಗಾಗಿ ನನ್ನ ಬಳಿಯಲ್ಲಿ ನಿನ್ನ ಬಳಿಗೆ ಬರಲು ಬೇಕಾಗುವಷ್ಟು ಪುಣ್ಯವಿಲ್ಲ. ಇದರಿಂದ ಹೆದರಿದ ನನಗೆ ಬೇಗ ಕಾಲ ಭಯಪರಿಹಾರಕ ಚಿಕಿತ್ಸೆ ಒದಗಿಸು.

ನನ್ನ ಪಾಪಪರ್ವತದ ಮುಂದೆ ಪುಣ್ಯವನ್ನು ಹೇಗೆ ವಿನಿಯೋಗಿಸಬೇಕೆಂದು ತಿಳಿದುಕೊಳ್ಳುವ ಸ್ಥಿತಿಯಲ್ಲಿಯೂ ನಾನಿಲ್ಲ. ಏಕೆಂದರೆ ಅಲ್ಪವಾದ ಪುಣ್ಯ ಮೇರುಸದೃಶಯವಾದ ಪಾಪರಾಶಿಯನ್ನು ಹೇಗೆ ಹೊಡೆದು ಬೀಳಿಸೀತು? ಹೀಗಾಗಿ ಪಾಪವೂ ಗಂಗಾ ಪ್ರವಾಹದಂತೆ ನಿರಂತರ ನಡೆಯುತ್ತಿದೆ. ಪುಣ್ಯವು ಕಣ್ಣೀರಿನಂತೆ ಯಾವಾಗಲೋ ಸ್ವಲ್ಪ ಹರಿಯುತ್ತದೆ. ಇಂತಹ ಸ್ಥಿತಿಯನ್ನು ಕಂಡು ನನಗೆ ಅತಿಯಾದ ಭಯವಾಗಿದೆ.

ಇಷ್ಟೇ ಅಲ್ಲದೆ ಭಯಪರ್ವತಗಳು ಎಷ್ಟೆಂದು ಹೇಗೆ ಹೇಳಲಿ!. ಭರ್ತೃಹರಿಯು ಒಂದು ಕಡೆ ಹೇಳುತ್ತಾನೆ.

ಭೋಗೇ ರೋಗಭಯಂ ಕುಲೇ ಚ್ಯುತಿಭಯಂ
ವಿತ್ತೇ ನೃಪಾಲಾದ್ಭಯಮ್
ಮಾನೇ ದೈನ್ಯಭಯಂ ಬಲೇ ರಿಪುಭಯಂ
ರೂಪೇ ಜರಾಯಾ ಭಯಂ |
ಶಾಸ್ತ್ರೇ ವಾದಭಯಂ ಗುಣೇ ಖಲಭಯಂ
ಕಾಯೇ ಕೃತಾಂತಾದ್ಭಯಮ್
ಸರ್ವಂ ವಸ್ತು ಭಯಾವಹಂ ಭುವಿ ನೃಣಾಂ
ವೈರಾಗ್ಯಮೇವಾಭಯಮ್ ||

ಭೋಗಿಸಿ ಸುಖಪಡೋಣ ಎನ್ನುವಾಗ ರೋಗದ ಭಯ ಆರಂಭವಾಗುತ್ತದೆ. ದುಡ್ಡನ್ನು ಅಧಿಕವಾಗಿ ಸಂಪಾದಿಸಿ ಅದರಿಂದ ಸುಖಪಡೋಣ ಎನ್ನುವಾಗ ಎಷ್ಟು ತೆರಿಗೆಯನ್ನು ಕಟ್ಟಬೇಕೆಂಬ ಭಯ ಆರಂಭವಾಗುತ್ತದೆ. ಮಾನ-ಸನ್ಮಾನಗಳಿಂದ ಸುಖಪಡೋಣ ಎನ್ನುವಾಗಲೇ ಮತ್ತೊಬ್ಬರಿಗೆ ತಲೆಬಾಗುವ ಪ್ರಸಂಗ ಬಂದೊದಗುತ್ತದೆ. ನಾನು ಬಲಿಷ್ಠನಾಗಿ ಮೆರೆಯುವೆನೆಂಬುವಾಗ ನನಗಿಂತ ಬಲಿಷ್ಠರ ಭಯದ ಪ್ರಸಂಗವಿದೆ. ಒಳ್ಳೆ ರೂಪವಂತನಾಗಿ ಮೆರೆಯೋಣ ಎಂಬುವಾಗ ವೃದ್ಧಾಪ್ಯದ ನೆರೆ ಆರಂಭವಾಗಿ ಸೌಂದರ್ಯ ನಾಶವಾಗುತ್ತದೆಂಬ ಭಯ ಎದುರಾಗುತ್ತದೆ. ಪಾಂಡಿತ್ಯ ಗಳಿಸಿ ಮೆರೆಯುವಾಗ ಪ್ರತಿವಾದಿಯ ಭಯವು ಆರಂಭವಾಗುತ್ತದೆ. ಸದ್ಗುಣಿಯಾಗಿ ಶೋಭಿಸೋಣ ಎನ್ನುವಾಗ ದುರ್ಗುಣಿಗಳು ಮಾತ್ಸರ್ಯದಿಂದ ಸಾಸಿವೆಯಂತಹ ದುರ್ಗುಣವನ್ನು ಮೇರುವಿನಂತೆ ತೋರಿಸಲು ಮುಂದಾಗುತ್ತಾರೆ. ಶರೀರಕ್ಕೆ ಮರಣದ ಭಯ. ಹೀಗೆ ಜಗತ್ತಿನಲ್ಲಿ ಯಾವ ವಸ್ತುವನ್ನು ಮುಟ್ಟಲು ಮುಂದಾದರೂ ಧುತ್ತೆಂದು ಭಯಗಳು ಎದುರಾಗುತ್ತವೆ. ಈ ಭಯವು

ಅಜ್ಞಾನದ ಕೂಸಾಗಿದೆ. ಇಂಥಹ ಭಯಗಳೆಂಬ ಅಜ್ಞಾನ ಪರ್ವತಗಳನ್ನು ಕೊಚ್ಚಲು ಭಯರೂಪರಾದ ದುಷ್ಟ ಕ್ಷತ್ರಿಯರನ್ನು ಕೊಚ್ಚಿದ ಕೊಡಲಿರಾಮನೇ ಬರಬೇಕು. ಪುನಃ ಪುನಃ ಹುಟ್ಟಿದ ದುಷ್ಟರನ್ನು ಪುನಃ ಪುನಃ ಸಂಚರಿಸಿ ಕೊಡಲಿಯಿಂದ ಕಡಿದು ಬೆಟ್ಟವೇರಿಸಿದಂತೆ ಭಯ ಪರ್ವತಗಳನ್ನು ಪರಶುರಾಮನೇ ತರಿಯಬೇಕು.

ಸಂಸಾರದಲ್ಲಿ ಸಾಧಕನಾದವನು ಯಾವ ಸುಖವನ್ನು ಬಯಸಲಿ. ಅಲ್ಲೊಂದು ದುಃಖ. ಅಲ್ಲೊಂದು ಭಯ ನಿಶ್ಚಯ. ಹರಿತವಾದ ಖಡ್ಗಕ್ಕೆ ಜೇನು ಲೇಪಿಸಿ ನೆಕ್ಕಿದಂತೆ. ಜೇನಿನ ಸವಿಯನ್ನು ಜಿಹ್ವೆಯು ಉಣ್ಣುವಾಗಲೇ ಖಡ್ಗದ ಅಲಗು ನಾಲಿಗೆ ಸೀಳಿರುತ್ತದೆ. ಅದರಂತೆ ಸಕಲ ಸುಖ ಸಾಧನೆಗಳೆಡೆಯಲ್ಲಿಯೇ ದುಃಖ ನಿಶ್ಚಿತವಾಗಿರುತ್ತದೆ. ಇದನ್ನು ರಾಮನ ಪರಶು ತಿಳಿಸುತ್ತದೆ. ಪರಶುವಿಗೆ ಕಾವನ್ನು (ಹಿಡಿ) ಸೇರಿಸಿದಾಗ ಬೇಕಾದಂತೆ ಪರಶುವನ್ನು ಬಳಸಿಕೊಳ್ಳಬಹುದು. ಅದರಂತೆ ಸಂಸಾರವೆಂಬ ಪರಶುವಿಗೆ ಹಿಡಿಯಂತೆ ಆಧಾರನಾದ ಶ್ರೀ ಹರಿಯನ್ನು ಆಶ್ರಯಿಸಿದಲ್ಲಿ ಭಯಕ್ಕೆ ಅವಕಾಶವಾಗದು. ಇದನ್ನರಿತು ಗೃಹಸ್ಥನಾದವನು ಅತಿಯಾದ ಆಶಾಪಾಶಗಳಿಗೆ ವಶನಾಗದೆ ಸನ್ಮಾರ್ಗದಲ್ಲಿ ಸಂಸಾರವನ್ನು ನಡೆಸಿಕೊಂಡು ಹೋಗಬೇಕು. ಅತಿಯಾದ ಸುಖಗಳ, ಬೆನ್ನುಹತ್ತಿ ಇದ್ದ ಸುಖವನ್ನು ಕಳೆದುಕೊಂಡು 'ಇತ್ತದರಿ, ಅತ್ತಪುಲಿ!' ಎಂಬ ಉಭಯ ಸಂಕಟದಲ್ಲಿ ಸಿಕ್ಕಿಕೊಳ್ಳಬಾರದೆಂದೂ ಹರಿಯ ಉಪದೇಶವಿದೆ.

ಈ ಎಲ್ಲ ಭಯಗಳಿಗೂ ಉತ್ತಮ ಚಿಕಿತ್ಸಕ ನೀನೇ ಆಗಿರುವಿ.

ನಿನ್ನ ಹೊರತಾಗಿ ಬೇರೆ ಯಾವ ಉಪಾಯವನ್ನು ಕಾಣದವನಾಗಿದ್ದೇನೆ. ಅರವಿದೂರನೇ! ನನ್ನನ್ನು ಉದ್ಧರಿಸು!!! ಅನುಗ್ರಹಿಸು!!

ವೈಷ್ಣವ ಜನ್ಮದ ದುರ್ಬಳಕೆ

ಅತುಲಂ ನೃಷು ವೈಷ್ಣವಂ ಸುಜನ್ಮಾ-
ಚ್ಯುತದತ್ತಂ ಕೃಪಯಾ ತ್ವಯಾಪ್ಯವಾಪ್ಯ |
ಕ್ಷಣಜೀವ್ಯಪಿ ಕಲ್ಪಗತ್ವಬುದ್ಧ್ಯಾ
ಪಶುಚಂಡಾಲವದೇವ ಸಂಚರಾಮಿ ||೧೭||

ಅಚ್ಯುತನೇ! ನೀನು ಕೊಟ್ಟ ಈ ವೈಷ್ಣವ ಜನ್ಮ ಅತ್ಯಂತ ಪ್ರಶಸ್ತವಾದುದು. ಇದರಲ್ಲಿ ಬದುಕುವ ಅವಕಾಶ ಅತ್ಯಲ್ಪ. ಹೀಗಿದ್ದರೂ ನಾನು

ಕಲ್ಪಾಯುಷಿ ಎಂಬ ಭ್ರಾಂತಿಯಿಂದ ಪಶು-ಚಂಡಾಲರಂತೆ ಭೋಗದಿಂದ ಕರ್ಮತ್ಯಾಗಿಯಾಗಿ ಬದುಕುತ್ತಿದ್ದೇನೆ

ಜೀವರಿಗೆ ಕರ್ಮದ ಪ್ರಚಯವು ಸಮುದ್ರದ ತೆರೆಯಂತಿದೆ. ಒಂದು ಕರ್ಮವನ್ನು ಅನುಭವಿಸಲು ಹೊರಟವ ಒಂದು ಕರ್ಮದ ಪರ್ವತವನ್ನೇ ನಿರ್ಮಿಸಿಕೊಳ್ಳುತ್ತಾನೆ. ಇಲ್ಲಿಂದ ನರಕದ ಶಿಕ್ಷೆಗೆ ತುತ್ತಾಗುತ್ತಾನೆ. ನರಕದಲ್ಲಿ ನೂರಾರು ಮುಖದ ಶಿಕ್ಷೆಯನ್ನನುಭವಿಸುತ್ತಿದ್ದರೂ ಆ ಜೀವನ ಬುದ್ಧಿ ಸಾಧನೆ ಮಾರ್ಗಕ್ಕೆ ಸಾಗದು. ಸಾಧನೆ ಮಾರ್ಗವಿರಲಿ ಸ್ವರ್ಗಸುಖಕ್ಕಾಗಿಯಾದರೂ ಸಾಧನೆ ಮಾಡಬೇಕೆನಿಸುವುದಿಲ್ಲ. ಜೀವನಿಗಂಟಿದ ಪ್ರಕೃತಿ ಜೀವನನ್ನು ಇಷ್ಟು ಅಜ್ಞಾನವಶನನ್ನಾಗಿ ಮಾಡುತ್ತದೆ. ಕೊನೆಗೆ ಇವನ ನೆಲೆಯನ್ನು ಕಂಡ ಹರಿಯು ಕರುಣೆಯಿಂದ ಋಷಿಗಳಿಗೆ "ಈತನನ್ನು ಭೂಮಿಯಲ್ಲಿ ಹುಟ್ಟಿಸಿ ಸತ್ಕರ್ಮಗಳಲ್ಲಿ ಆಸಕ್ತಿ ಹುಟ್ಟುವಂತಹ ಶರೀರವನ್ನು ಕರುಣಿಸಿ" ಎಂದು ಆದೇಶಿಸುತ್ತಾನೆ. ಅದರಂತೆ ಜೀವರು ಈತನಿಗೆ ಸಾಧನ ಶರೀರವನ್ನು ನೀಡಿ ಅವನಿಂದ ಅಗ್ನಿಹೋತ್ರಾದಿ ಸತ್ಕರ್ಮಗಳನ್ನು ಮಾಡಿಸುತ್ತಾರೆ. ಈತ ಮಾಡಿಕೊಂಡು ಪಾಪಕರ್ಮವೆಂಬ ಸಾಲ 100, 200, 300, 400, 500, 1000 ಲಕ್ಷ, ಕೋಟಿ, ಜನ್ಮಗಳನ್ನು ಎತ್ತಿದರೂ ತೀರದಿರುವಷ್ಟಿದೆ. ಆದರೂ ಒಂದು ಜನ್ಮದ ಸಾಧನೆಗೆ ಹಿಂದಿನ ಪಾಪದ ಮೊತ್ತ ನೋಡದೆ ಸ್ವರ್ಗಸುಖ ಉಣಿಸುತ್ತಾನೆ. ಭೂಮಿಯಲ್ಲಿ ರಾಜಾಧಿರಾಜನನ್ನಾಗಿ ಪುಟ್ಟಿಸುತ್ತಾನೆ. ಇಷ್ಟು ದೇವರು ಸುಖ ಕೊಟ್ಟರೂ ಅಲ್ಪನಾದ ಜೀವನ ಸ್ಥೂಲ ಬುದ್ಧಿಗೆ ಇದ್ಯಾವುದೂ ತಿಳಿಯದೆ ಅದರಲ್ಲೇ ಉನ್ಮತ್ತನಾಗಿರುತ್ತಾನೆ.

ಈ ಸಂಸಾರವು ಭಯಂಕರವಾದ ಕಾಡಿನಂತಿದೆ. ಇಲ್ಲಿ ಜೀವಾತ್ಮನನ್ನು ಕಣ್ಣಿಗೆ ಬಟ್ಟೆ ಕಟ್ಟಿ ಬಿಟ್ಟಿದ್ದಾರೆ. ಈ ಭಯಂಕರ ಅಡವಿಯಲ್ಲಿ ಯಾವ ಪ್ರಾಣಿ ಹೇಗೆ ಈತನನ್ನು ಹರಿದು ತಿನ್ನುತ್ತದೆಯೋ ತಿಳಿಯದು. ಇಷ್ಟಾದರೂ ಈ ಪ್ರಾಣಿಯ ಬಾಯಲ್ಲಿ ಹರಿಯೆಂಬ ಶಬ್ದ ಬಾರದು. ಭಯದಲ್ಲಾದರೂ ಹರಿನಾಮ ಬಾಯಲ್ಲಿ ಬರಬೇಕಾದರೆ ಅಲ್ಲಿ ಪ್ರಾಣದೇವರ ಪ್ರೇರಣೆ ಬೇಕಲ್ಲವೇ?

ಇಂತಹ ಜೀವನು ಹಿಂದೆ ನೂರಾರು ಕೋಟಿ ಜನ್ಮಗಳಲ್ಲಿ ಹಂದಿ-ನಾಯಿ-ಮುಂತಾದ ನೀಚನೀಚ್ಚಯೋನಿಗಳೆಂಬ ತಗ್ಗು ಮಿಟ್ಟೆಗಳಲ್ಲಿ ತೊಳಲಾಡಿಕೊಂಡು ಮನುಷ್ಯಯೋನಿಗೆ ಬೀಳುತ್ತಾನೆ. ಮುಂದೆಯೂ ಇಂತಹ ನೂರಾರು ಕೋಟಿ ಹೀನ ಯೋನಿಗಳಲ್ಲಿ ಬೀಳುವವನಿದ್ದಾನೆ.

ಮನುಷ್ಯಯೋನಿಯಲ್ಲಿ ನೂರಾರು ಜನ್ಮಗಳಲ್ಲಿ ತೊಳಲಾಡಿದ ಬಳಿಕ ಬ್ರಾಹ್ಮಣ ಯೋನಿಯಲ್ಲಿ ಹುಟ್ಟುತ್ತಾನೆ. ಈ ಬ್ರಾಹ್ಮಣ ಯೋನಿಯಲ್ಲಿಯೂ ನೂರಾರು ಜನ್ಮಗಳು ವ್ಯರ್ಥವಾಗಿ ಕಳೆಯುತ್ತಿರುತ್ತವೆ. ಮಧ್ಯದಲ್ಲಿ ಯಾವುದು ಒಂದು ಜನ್ಮದಲ್ಲಿ ಶ್ರೀಹರಿಯು ಈ ಜೀವಾತ್ಮನನ್ನು ಪ್ರಾಣದೇವರ ಕೈಯಲ್ಲಿಟ್ಟು 'ಉದ್ಧರಿಸು' ಎನ್ನುತ್ತಾನೆ. ಈ ಜನ್ಮವೇ ವೈಷ್ಣವ ಜನ್ಮವೆಂದು ಕರೆಸಿಕೊಳ್ಳುತ್ತದೆ. ಅವರ ಪ್ರೇರಣೆಯಾದಾಗಲೂ ಜೀವ ಕೆಲವೊಮ್ಮೆ ಉದಾಸೀನವನ್ನೇ ಮಾಡುತ್ತಾನೆ. ಅಧ್ಯಾತ್ಮದ ನಿತ್ಯಸ್ಫೂರ್ತಿಯನ್ನು ತುಂಬಿಕೊಳ್ಳುವ ಯೋಗ್ಯತೆ ಜೀವಾತ್ಮನಿಗೆ ಈ ಜಗತ್ತಿನಲ್ಲಿ ಬಹಳ ಅಪರೂಪ. ಅಂತಹದ್ದರಲ್ಲಿ ಅಂತಹ ಒಂದು ವೈಷ್ಣವ ಜನ್ಮ ಬಂದಿತೆಂದರೂ ಅದರಲ್ಲಿ ಊಟ-ನಿದ್ರೆ-ರೋಗ-ಬಾಲ್ಯವೆಂದು ಹೊರಟುಹೋಗುತ್ತದೆ. ಉಳಿದ ಕಾಲ ಅತ್ಯಲ್ಪ. ಆ ಅಲ್ಪಕಾಲದ ಜೀವನವನ್ನು ಜೀವಾತ್ಮನು 'ಕಲ್ಪಕಾಲ'ವೆಂದು ಭ್ರಮಿಸುತ್ತಾನೆ. ವ್ಯರ್ಥ ಕಾಲಹರಣ ಮಾಡುತ್ತಾ ಸಾಧನೆಗೆ ಪೂರಕವಾದ ಈ ವೈಷ್ಣವ ಜನ್ಮವನ್ನು ಹಾಳುಗೆಡಹುತ್ತಾನೆ. ಪಶುಗಳಂತೆ ತಿನ್ನುವುದೇ ಸಾಧನೆ ಎಂದುಕೊಳ್ಳುತ್ತಾನೆ. ಚಂಡಾಲರಂತೆ ಕರ್ಮಬಾಹೀರನಾಗಿ ಸಂಚರಿಸುತ್ತಾನೆ. ಧರ್ಮವನ್ನು ಅರ್ಥೈಸಿಕೊಳ್ಳುವ ಬುದ್ಧಿ ಇದ್ದರೂ ಬುದ್ಧಿಹೀನನಂತೆ ವರ್ತಿಸಿ ಆಹಾರ-ನಿದ್ರಾ-ಭಯ-ಮೈಥುನಾದಿಗಳಲ್ಲಿ ಆಸಕ್ತರಾಗಿ ತಿರುಗುತ್ತೇವೆ. ವಿನಾ ಸಾರ್ಥಕ ಬಾಳ್ವೆ ನಡೆಸುತ್ತಿಲ್ಲ.

ವ್ಯರ್ಥ ಕಳೆದವೆನ್ನ ರಾತ್ರಿಗಳು

ನ ತದಸ್ತಿ ಶರೀರಿಣಾಂ ಶತಾಬ್ದಾಯುಷಿ
ಶಾಸ್ತ್ರಪ್ರಥಿತೇऽಪಿ ಕಿಂಚಿದೇವ |
ಭಗವನ್ ಖಲು ಸರ್ವರಾತ್ರಿಕಾಲೋ
ಜಲಹೋಮೋಪಮತಾಮುಪೈತಿ ನಾಲಮ್ ||೧೮||

ಹರಿಯೇ! ಮರಣಶೀಲರಾದ ನಮಗೆ ೧೦೦ ವರ್ಷ ಬದುಕುವ ಯೋಗ್ಯತೆ ಶಾಸ್ತ್ರದಲ್ಲಿ ಕಂಡು ಬಂದರೂ, ರಾತ್ರಿಗಳೆಲ್ಲ ನೀರಿನಲ್ಲಿ ಹೋಮದಂತೆ ವ್ಯರ್ಥವಾದ್ದರಿಂದ ೧೦೦ ವರ್ಷದಲ್ಲಿ ಸ್ವಲ್ಪ ಮಾತ್ರ ಲಭ್ಯ.

ಹರಿಯೇ! ಮಾನವರಿಗೆ ನೂರುವರ್ಷ ಆಯುಷ್ಯವೆಂದು ಶಾಸ್ತ್ರಸಿದ್ಧ. ಆದರೆ ಇದು ಎಲ್ಲರಿಗೂ ಪೂರ್ಣ ದೊರೆಯದು. ಏಕೆಂದರೆ ಅವನು ಹೇಳಿದಂತೆ ಈ

ಶರೀರವನ್ನು ನಾವು ಉಪಯೋಗಿಸಿಕೊಳ್ಳುತ್ತಿಲ್ಲ. ಸಿಕ್ಕ ಬಾಡಿಗೆ ಮನೆಯ ತುಂಬ ಮೊಳೆ ಹೊಡೆದು ಮಸಿ ಮಾಡಿ ಒರಟಾಗಿ ಉಪಯೋಗಿಸಿಕೊಂಡಲ್ಲಿ ಮನೆಯ ಮಾಲಿಕ ಮನೆ ಬಿಡಿಸುವಂತೆ ದೇವರು ಕೊಟ್ಟ ಬಾಡಿಗೆ ಮನೆಯಂತಹ ಶರೀರವನ್ನು ಕಂಡ ಕಂಡಲ್ಲಿ ತಿಂದುಂಡು, ಬೇಕಾಬಿಟ್ಟಿ ವಿಷಯ ಭೋಗಗಳಿಗೆ ಒಡ್ಡಿದರೆ ದೇವರು ಈ ಶರೀರವನ್ನು ಬೇಗ ಕಸಿದುಕೊಳ್ಳುತ್ತಾನೆ. ಹಂದಿ-ನಾಯಿ-ಕತ್ತೆಗಳ ಜನ್ಮ ನೀಡಿ ಒರಟಾಗಿ ಉಪಯೋಗಿಸಿಕೊಳ್ಳಿ ಎನ್ನುತ್ತಾನೆ.

ಒಂದು ವೇಳೆ ಪ್ರಾಮಾಣಿಕವಾಗಿ ಈ ಶರೀರವನ್ನು ನೋಡಿಕೊಂಡು ಸಾಧನೆ ಮಾಡಿಕೊಂಡಿದ್ದರೂ ಈ ಶರೀರಕ್ಕೆ ನಿದ್ದೆ ಬೇಕು. ನೂರು ವರ್ಷಗಳ ಆಯುಷ್ಯದಲ್ಲಿ ರಾತ್ರಿ ಕಾಲವೆಲ್ಲವೂ ನೀರಿನಲ್ಲಿ ಹೋಮ ಮಾಡಿದಂತೆಯೇ ಸರಿ. ಅರ್ಧ ಆಯುಷ್ಯ ನಿದ್ದೆಯಿಂದ ಕಳೆದು ಹೋಗುತ್ತದೆ.

ನಿದ್ರೆ ಭರದಿಂದ ಇರುಳು ನೆನೆಯಲಿಲ್ಲ. ವಿಷಯಭೋಗದಲ್ಲಿ ಆಸಕ್ತರಾಗಿ ತಾರುಣ್ಯದಲ್ಲಿಯೂ ನೆನೆಯಲಿಲ್ಲ. ಹಗಲೆಲ್ಲ ದುಡ್ಡಿಗಾಗಿ ಮೈಯೊಡ್ಡಿ ಕಾಲಕಳೆದೆವು. ಬೇಡವಾದ ಸಂಸಾರದಲ್ಲಿ ಆಸಕ್ತಿಯನ್ನು ತಳೆದೆವು. ವೃದ್ಧಾಪ್ಯದಲ್ಲಿ ನೂರಾರು ಚಿಂತೆಗಳನ್ನು ಮೈಗೂಡಿಸಿಕೊಂಡೆವು. ಹೀಗಾಗಿ ಎಂದೂ ಹರಿಚಿಂತನೆಗೆ ನಮಗೆ ಸಮಯವೇ ಸಿಗಲಿಲ್ಲ. ಇನ್ನು ಸಾಯುವ ಘಟ್ಟ ಮುಟ್ಟಿದಾಗಲಾದರೂ 'ಹರಿ' ಎನ್ನೋಣವೆಂದರೆ ನಾಲಿಗೆಗೆ ಬಲವಿಲ್ಲ. ನಮ್ಮ ಅನರ್ಘ್ಯವಾದ ಜೀವನ ಗೊಂದಲಗಳ ನಡುವೆ ಸಿಕ್ಕಿಬಿದ್ದಿದೆ.

ಸಮುದ್ರದಲ್ಲಿ ಹೆಣವೊಂದು ತೇಲಿಹೋಗುತ್ತಿದೆ. ಬಾನಿನಲ್ಲಿ ಹಾರಾಡುವ ಹಕ್ಕಿಯೊಂದು ಆ ಹೆಣವನ್ನು ಕಂಡಿತು. ರಕ್ತಮಾಂಸಗಳ ಆಸೆಯಿಂದ ಹೆಣವನ್ನು ಸಮೀಪಿಸಿತು. ಕೊಕ್ಕಿನಿಂದ ಹೆಣವನ್ನು ಕುಕ್ಕಿ, ರಕ್ತಮಾಂಸಗಳನ್ನು ಚಪ್ಪರಿಸುತ್ತಿರುವ ಹಕ್ಕಿಗೆ ಜಗತ್ತಿನ ಎಚ್ಚರವೇ ಇಲ್ಲವಾಯಿತು. ಕುಣಪ ಕಡಲಿನ ನಡುವೆ ಬಂದಾಗ ಹೊಟ್ಟೆ ತುಂಬಿಸಿಕೊಂಡ ಹಕ್ಕಿಗೆ ಎಚ್ಚರ ಬಂದಿತು. ಗೂಡಿಗೆ ಹಾರಿಹೋಗಬೇಕೆಂದು ಆಲೋಚಿಸಿತು. ತೀರ ಮುಟ್ಟುವ ಬಯಕೆಯಿಂದ ಎಷ್ಟು ಹಾರಿದರೂ ದೂರದ ತೀರವನ್ನು ಮುಟ್ಟಲಾಗದೆ, ನೀರಿಗೆ ಬಿದ್ದು ಜವನ ಸದನಕ್ಕೆ ಪಯಣ ಬೆಳೆಸಿತು.

ಭೋಗನಿರತವಾದ ಹಕ್ಕಿ 'ತಾನು ತೀರದಿಂದ ದೂರ ಸಾಗುತ್ತಿದ್ದೇನೆ' ಎಂಬ ಎಚ್ಚರವನ್ನೇ ಕಳೆದುಕೊಂಡಿತು. ನಮ್ಮ ಬದುಕೂ ಇದಕ್ಕೆ ಹೊರತಾಗಿಲ್ಲ. ನಾವೂ ಸಹ ಭೌತಿಕ ಸುಖದಲ್ಲಿಯೇ ತಲ್ಲೀನರಾಗಿದ್ದೇವೆ. ಬದುಕೆಂಬ ಸಾಗರವೂ ನಮ್ಮನ್ನು ಬಹುಕಾಲ ಮೂರ್ಖರನ್ನಾಗಿಸಿದೆ. ಈ ಎಚ್ಚರ ಬರುವಾಗ ಯೌವ್ವನ

ದೂರವಾಗಿರುತ್ತದೆ. ಸಾವಿನ ತೀರವನ್ನು ಸಮೀಪಿಸಿರುತ್ತೇವೆ. ಶ್ರೀಮದಾಚಾರ್ಯರು ಕೃಷ್ಣಾಮೃತ ಮಹಾರ್ಣವದಲ್ಲಿ ಇದನ್ನು ಹೇಳಿದ್ದಾರೆ.

ಸ್ಮರ್ಯತಾಂ ತು ಹೃಷೀಕೇಶೋ ಹೃಷೀಕೇಷು ದೃಢೇಷು ಚ |
ಅದೃಢೇಷು ಹೃಷೀಕೇಷು ಹೃಷೀಕೇಶಂ ಸ್ಮರಂತಿ ಕೇ ||

(ಕೃ.ಮ. ೧೫೩)

"ಇಂದ್ರಿಯಗಳೇ ದುರ್ಬಲವಾದಾಗ ಹೃಷಿಕೇಶನನ್ನು ಯಾರು ಸ್ಮರಿಸುತ್ತಾರೆ? ಇಂದ್ರಿಯಗಳು ಬಲಿಷ್ಠವಾಗಿದ್ದಾಗಲೂ ವಿಷಯಗಳಿಗೆ ಬಲಿಯಾದವರು ಹೃಷೀಕೇಶನನ್ನು ಮರೆಯುತ್ತಾರೆ." ಹೀಗೆ ನಮ್ಮ ಸಮಗ್ರ ಜೀವನವೇ ಭಗವಂತನಿಂದ ವಿಮುಖವಾಗಿ ಕಡೆಗೆ ಪಶ್ಚಾತ್ತಾಪಕ್ಕೆ ಗುರಿಯಾಗುತ್ತೇವೆ. ಸಾಗರದ ನಡುವೆ ಇರುವ ಹಕ್ಕಿಯ ಯಾವ ಸಂಕಲ್ಪಕ್ಕೂ ಬೆಲೆಯಿಲ್ಲ; ಅದರಂತೆ ಕೊನೆಗೆ ಮೂಡಿದ ಪಶ್ಚಾತ್ತಾಪಕ್ಕೂ ಬೆಲೆಯಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಅಧ್ಯಾತ್ಮ ಬದುಕಿಗೆ ತಾಕತ್ತಿಲ್ಲ. ಹಾಗೆಯೇ ಸಾಯಲು ಮನಸ್ಸಿಲ್ಲ. ಕರ್ತವ್ಯ ಮಾಡದೆ ಕೇವಲ ಪಶ್ಚಾತ್ತಾಪಪಟ್ಟರೆ ಅದಕ್ಕೆ ಬೆಲೆಯೂ ಇಲ್ಲ.

ನಾವೆಲ್ಲರೂ ಮನೆ, ಮಡದಿ, ಮಕ್ಕಳು ಎಂಬ ಮಮಕಾರದ ಸಂಸಾರ ಸುಳಿಯಲ್ಲಿ ಸಿಲುಕಿಕೊಂಡಿದ್ದೇವೆ. ನಮ್ಮ ಪರಿಸ್ಥಿತಿ ಇರುಳು ಕಂಡ ಬಾವಿಗೆ ಹಗಲೇ ಬೀಳುವವನಂತಾಗಿದೆ.

ಬಾಲ್ಯ ಮುಪ್ಪುಗಳಿಂದ ಮುಳುಗಿದ ಬದುಕು

ದ್ವಿದಶಾಬ್ದಯುಗಂ ದಿವಾಪಿ ಪೂರ್ವೋ-
ತ್ತರಮೀಶ ಸ್ಥವಿರತ್ವ ಶೈಶವಾಭ್ಯಾಮ್ |
ಸಮಯಂ ಪ್ರಣಯಾಮಿ ಸರ್ವರೋಗೈಃ
ಬಹುಲೀಲಾಭಿರಪಿ ಪ್ರಮೂಢಬುದ್ಧ್ಯಾ ||೧೯||

ಹರಿಯೇ ಹಗಲಿನಲ್ಲಿಯು ಜೀವನದ ಮೊದಲು ನಂತರದ ಇಪ್ಪತ್ತು, ಇಪ್ಪತ್ತು ವರ್ಷಗಳು ಬಾಲ್ಯ-ಮುಪ್ಪುಗಳಿಗೆ ಹಂಚಿಕೆಯಾಗುತ್ತದೆ. ಹೀಗೆ ಆಟ-ರೋಗಗಳಿಂದ ಕಳೆದಾಗ ಉಳಿದದ್ದು ಸ್ವಲ್ಪ.

ಹರಿಯೇ! ರಾತ್ರಿ ಎಲ್ಲವೂ ವ್ಯರ್ಥವಾಯಿತು. ಹಗಲೋ ಸಮಗ್ರವಾಗಿ ಸಾಧನೆಗೆ ಸಿಗದು. ಜೀವನದ ಮೊದಲಿನ 20 ವರ್ಷಗಳು ಬಹುತೇಕ ಬಾಲ್ಯದ ಮೂರ್ಖತನಗಳಿಗೆ ಮೀಸಲು, ಆಟ-ಹುಡುಗಾಟಗಳಿಂದ ಕಾಲ ವ್ಯರ್ಥವಾಗಿ ಕಳೆದುಹೋಗುತ್ತದೆ. ಕೊನೆಯ ಇಪ್ಪತ್ತು ವರ್ಷಗಳು ನಾನಾ ರೋಗರುಜಿನಗಳಿಂದ - ಬಹುಮುಖದ ಚಿಂತೆಗಳಿಂದ ಕಳೆದುಹೋಗುತ್ತದೆ.

ನಮ್ಮ ಸಮಗ್ರ ಸಾರ್ಥಕವಾಗಬೇಕಾದರೆ ಅದಕ್ಕೆ ಹರಿಯ ಅನುಗ್ರಹ ಪೂರ್ಣವಾಗಿರಬೇಕು. ಈ ಅನುಗ್ರಹದ ಬಗ್ಗೆ ನಂಬಿಕೆ ದೃಢವಾಗಿರಬೇಕು.

ಈ ದೃಷ್ಟಿಯಿಂದಲೇ ಶ್ರೀಮದಾಚಾರ್ಯರು 'ಸಂತತಂ ಚಿಂತಯೇಽನಂತಂ ಅಂತ್ಯಕಾಲೇ ವಿಶೇಷತಃ' ಎಂದರು. ನಮ್ಮ ಸಮಗ್ರ ಜೀವನದ ಫಲಶ್ರುತಿಯೇ ಅಂತ್ಯಕಾಲ. ಪ್ರತಿಯೊಬ್ಬನ ಸಾವಿನಿಂದ ಅವನ ಜೀವನದ ಸಾರ್ಥಕತೆಯನ್ನು ಗುರುತಿಸಬಹುದು. ಆದ್ದರಿಂದ ಸ್ವೇಚ್ಛೆಯಿಂದ ಜೀವನ ಕಳೆದು, ಕೊನೆಗೆ ಶ್ರವಣಾದಿಗಳನ್ನು ನಡೆಸಿ, ಮೋಕ್ಷಕ್ಕೆ ಹೋಗಬಹುದೆಂಬ ಚಿಂತನೆ ಸಲ್ಲದು. ಮೋಕ್ಷದ ಮಾರ್ಗ ತಿಳಿದಷ್ಟು ಸುಲಭವಲ್ಲ.

ಒಬ್ಬ ಜಿಪುಣನಿದ್ದ. ಅವನು ತನ್ನ ಜೀವನದಲ್ಲಿ 'ದೇಹಿ' ಎಂದವರಿಗೆ ಬಿಡಿಗಾಸೂ ಕೊಟ್ಟವನಲ್ಲ. ಅವನಿಗೆ ಕೆಲವು ಮಕ್ಕಳಿದ್ದರು. ಯಮಲೋಕದ ಪಯಣಕ್ಕೆ ಸಿದ್ಧನಾಗಿದ್ದ. ಹಾಸಿಗೆ ಹಿಡಿದ ಜಿಪುಣ ಪ್ರಯತ್ನಪೂರ್ವಕವಾಗಿ ಏನೋ ಹೇಳಬಯಸಿದ. ಮಕ್ಕಳೆಲ್ಲರೂ ಓಡೋಡಿ ಬಂದರು. ಅಂತ್ಯಕಾಲದ ಸಂದೇಶಕ್ಕಾಗಿ ಕಿವಿಗೊಟ್ಟರು. ಜಿಪುಣನು ಕಷ್ಟಪಟ್ಟು ಅಸ್ಪಷ್ಟವಾಗಿ ನುಡಿದ- "ಮಕ್ಕಳೇ! ದೂರದಲ್ಲಿ ದೀಪ ಉರಿಯುತ್ತಿದೆ. ಅದರ ಬತ್ತಿ ದೊಡ್ಡದಾಗಿದೆ. ತೈಲವು ಬೇಗ ತೀರಿಹೋಗುತ್ತದೆ. ದೀಪ ಸ್ವಲ್ಪ ಸಣ್ಣದು ಮಾಡಿ. ನಿಮ್ಮ ಅಮ್ಮನಿಗೆ ಜೀವನದ ಉದ್ದಕ್ಕೂ ಬೋಧಿಸಿದೆ. ಎಂದೂ ಅನುಷ್ಠಾನಕ್ಕೆ ತರಲಿಲ್ಲ. ನೀವಾದರೂ ನನ್ನ ಕೊನೆ ಆಸೆಯನ್ನು ನೆರವೇರಿಸಿ" ಎಂದು ಪ್ರಾಣಬಿಟ್ಟ. ತನ್ನ ಜೀವನದೀಪವೇ ಆರಿಹೋಗುತ್ತಿದೆ. ಈ ದೀಪದಿಂದೇನು? ಎಂಬ ಎಚ್ಚರ ಕೊನೆಗೂ ಬರಲಿಲ್ಲ. ಸಮಗ್ರ ಜೀವನವನ್ನು ಲೋಭದಿಂದ ಕಳೆದವನಿಗೆ ಕೊನೆಗೆ ಸ್ಮರಣೆ ಬಂದದ್ದು ಲೋಭತನವೇ. ಇದರಂತೆ ಭಗವಂತನ ಸ್ಮರಣೆಯೇ ನಮ್ಮ ಸಮಗ್ರ ಜೀವನದ ಉಸಿರಾಗಿದ್ದರೆ; ಕೊನೆಕಾಲದಲ್ಲಿಯೂ ಭಗವಂತನೆಂಬ ಜ್ಯೋತಿಯನ್ನು ಹೃದಯಗುಹೆಯಲ್ಲಿ ಬೆಳಗಿಸುವ ಭಾಗ್ಯವಂತರು ನಾವಾಗುತ್ತೇವೆ. ಇಲ್ಲವಾದರೆ 'ದೀಪ ಸಣ್ಣದಾಗಿಸಿ!' ಎಂದು ಹೇಳಿದ ಜಿಪುಣನಂತೆ ಏನೋ ಚಿಂತಿಸಿ ಕೊನೆಯುಸಿರೆಳೆಯುತ್ತೇವೆ.

ಉಳಿದ ಕಾಲದಲ್ಲಿ ಬೆಳೆಯದ ಜೀವ

ಪರಿಶೇಷಿತ ಈಶ ಮಧ್ಯಕಾಲಃ
ಸುಕೃತೇ ಭಾರತಭೂತಲೇ ವರಿಷ್ಠಃ |
ಯದಿಹಾಪಿ ಸದೈವ ಪಾಪಚಿತ್ತೇ
ಮಯಿ ಪಶ್ವಂತ್ಯಜಯೋಶ್ಚ ಕೋ ವಿಶೇಷಃ ||೨೦||

ಹರಿಯೇ! ಪುಣ್ಯಪ್ರದವಾದ ಭರತಭೂಮಿಯಲ್ಲಿ ಮಧ್ಯದ ತಾರುಣ್ಯದ ವಯಸ್ಸು ಸಾಧನೆಗೆ ಅತ್ಯಂತ ಶ್ರೇಷ್ಠವಾದುದು. ಆ ಸಮಯದಲ್ಲಿಯೂ ಪಾಪಾಸಕ್ತನಾದ ನಾನು ಪಶು ಚಂಡಾಲರ ಸಮಾನನು.

ಹರಿಯೇ! ಬಾಲ್ಯ-ಮುಪ್ಪುಗಳು ಬದುಕಿನ ಸಾಧನೆಗೆ ಬಾರವು ಎಂದಾದ ಮೇಲೆ ಉಳಿದ ವಯಸ್ಸು ತಾರುಣ್ಯದ ಮಧ್ಯಭಾಗದ್ದು. ಪುಣ್ಯದೇಶ-ಪುಣ್ಯಕಾಲ-ಪುಣ್ಯಪ್ರದ ವಯಸ್ಸುಗಳಿದ್ದರೂ ನನ್ನ ಮನಸ್ಸು ಪಾಪಕರ್ಮಗಳಿಗೆ ಸೆಳೆದೊಯ್ಯುತ್ತಿದೆ. ಇಂತಹ ಪುಣ್ಯದ ಪರ್ವಕಾಲದಲ್ಲಿ ಪಶು-ಚಂಡಾಲರಿಗೆ ಸಮಾನವಾಗಿ ವರ್ತಿಸುವ ನನ್ನ ಮೂಢಬುದ್ಧಿಗೊಂದು ಚಿಕಿತ್ಸೆ ನೀಡುವೆಯಾ?

ಪುಣ್ಯಾತ್ಮನೇ!
ಈ ಪುಣ್ಯಭೂಮಿಯಲ್ಲಿ ಪುಣ್ಯನೀಡು

ಇಹ ಭಾರತಭೂತಲೇऽತಿಪುಣ್ಯೇ
ದ್ರವಿಣಸ್ತ್ರೀಸುತಪೂರ್ವಕೇಷು ಮಾಯಾಮ್ |
ಅಲಮೇಕದಿನಂ ವಿಮುಚ್ಯ ವಾ ಮೇ
ತವ ಪಾದಾಬ್ಜರತಿಂ ಪ್ರದೇಹಿ ದೇವ ||೨೧||

ಹರಿಯೇ! ಪುಣ್ಯಪ್ರದ ಭೂಮಿಯಲ್ಲಿ ಧನ, ವನಿತಾ, ಸುತ, ಮೊದಲಾದವರಲ್ಲಿ ನನಗಿರುವ ವ್ಯಾಮೋಹವನ್ನು ಒಂದು ದಿನದ ಮಟ್ಟಿಗಾದರೂ ಪೂರ್ಣ ಬಿಡಿಸಿ; ನಿನ್ನ ಪಾದಾಸಕ್ತಿಯನ್ನು ಕೊಡು.

ಕಲ್ಪಾಯುಷಾಂ ಸ್ಥಾನಜಯಾತ್ಪುನರ್ಭವಾತ್
ಕ್ಷಣಾಯುಷಾಂ ಭಾರತಭೂಜಯೋ ವರಃ |
ಕ್ಷಣೇನ ಮರ್ತ್ಯೇನ ಕೃತಂ ಮನಸ್ವಿನಃ
ಸಂನ್ಯಸ್ಯ ಸಂಯಾಂತ್ಯಭಯಂ ಪದಂ ಹರೇಃ || -(೫-೧೯-೨೩)

ಭಾರತ ದೇಶದ ಮಹತ್ವವನ್ನು ಬಣ್ಣಿಸುವ ಇಂತಹ ಅನೇಕ ಶ್ಲೋಕಗಳನ್ನು ಭಾಗವತದಲ್ಲಿ ಕಾಣಬಹುದು-

ಸಾವಿರ ವರ್ಷಗಳ ಕಾಲ ಬೇರೆ ಲೋಕದಲ್ಲಿರುವುದಕ್ಕಿಂತ ಒಂದು ಕ್ಷಣಕಾಲ ಭರತ ಭೂಮಿಯ ವಾಸವೇ ಲೇಸು!

ಎಲ್ಲಾ ಲೋಕಗಳು ಜೀವರನ್ನು ಕೆಳಗೆ ಕಳುಹಿಸಿದರೆ, ಕೆಳಗಿದ್ದವರನ್ನು ಮೇಲಕ್ಕೇರಿಸುವ ಲೋಕ ಈ ಭೂಲೋಕ. ಅದರಲ್ಲಿಯೂ ಈ ಭಾರತ ದೇವತೆಗಳ ಅವತಾರ ಭೂಮಿಯಷ್ಟೇ ಅಲ್ಲ. ಯುಗದ ಮಹತ್ವವನ್ನೂ ಇಲ್ಲಿ ಅರಿಯಬೇಕು.

ಕೃತಯುಗದಲ್ಲಿ ಒಳ್ಳೆ ಕೆಲಸಗಳು ಅಧಿಕ. ಫಲ ಕಡಿಮೆ.

ಕಲಿಯುಗದಲ್ಲಿ ಒಳ್ಳೆ ಕೆಲಸಗಳು ಕಡಿಮೆ. ಫಲ ಅಧಿಕ.

ಕಲಿಯುಗದಲ್ಲಿ ಸ್ವಲ್ಪ ಧರ್ಮಕಾರ್ಯ ಮಾಡಿದರೂ ಅನಂತಫಲಭಾಗಿಯಾಗುತ್ತಾನೆ. ಇದಕ್ಕೆ ಸಂವಾದಿಯಾಗಿ ಕಥೆಯೊಂದನ್ನು ನೋಡೋಣ.

ಮಹಾಭಾರತಯುದ್ಧದಲ್ಲಿ ಕರ್ಣಾರ್ಜುನರಿಗೆ ಭಯಂಕರ ಕಾಳಗ ನಡೆಯಿತು. ಅರ್ಜುನ ತನ್ನ ಅದ್ಭುತವಾದ ಪರಾಕ್ರಮದಿಂದ ಕರ್ಣನ ರಥವನ್ನು ದೂರಕ್ಕೆ ತೂರಿದ. ರಥವು ನೂರಾರು ಗಾವುದ ಹಿಂದಕ್ಕೆ ಸರಿಯಿತು.

ಬಲಿಷ್ಠನಾದ ಕರ್ಣನೂ ಸಹ ತನ್ನ ಅದ್ಭುತವಾದ ಕೌಶಲ್ಯದಿಂದ ಶಕ್ತಿಯೆಲ್ಲವನ್ನೂ ಬಳಸಿಕೊಂಡು ಅರ್ಜುನನ ರಥಕ್ಕೆ ಬಾಣ ಪ್ರಯೋಗಿಸಿದ. ಅರ್ಜುನನ ರಥ ಎರಡು ಅಂಗುಲ ಹಿಂದೆ ಸರಿಯಿತು.

ಕೃಷ್ಣ ಬಹಳ ಸಂತೋಷದಿಂದ 'ಶಹಭಾಷ್ ಕರ್ಣ!' ಎಂದು ಕರ್ಣನನ್ನು ಪ್ರಶಂಸಿಸಿದ.

ರಥಸ್ಥನಾದ ಅರ್ಜುನ ಸಿಡಿದೆದ್ದ.

ಇದೇನು ಕೃಷ್ಣ ಅನ್ಯಾಯ!!

ಮೈಲುಗಟ್ಟಲೆ ರಥ ತೂರಿದ ನನ್ನನ್ನು ಬಿಟ್ಟು ಬರೇ ಎರಡು ಅಂಗುಲ ರಥ ತಳ್ಳಿದ ಕರ್ಣನು ನಿನಗೆ ಮಿಗಿಲಾದನೇ? ಚಪ್ಪಾಳೆ ತಟ್ಟಿ ಅವನನ್ನು ಅಭಿನಂದಿಸುವುದು

ನಿನಗೆ ನ್ಯಾಯವೇ! ಎಂದು ಆಕ್ಷೇಪಿಸಿದ.

ಕೃಷ್ಣ ನುಡಿದ.

ನೋಡು ಅರ್ಜುನ! ಕರ್ಣನ ರಥವನ್ನು ಹಿಂದಕ್ಕೆ ತಳ್ಳುವುದೇನು ಮಹಾಕಾರ್ಯವಲ್ಲ. ಅದು ಸಾಮಾನ್ಯ ಕಟ್ಟಿಗೆಯ ರಥ. ಆದರೆ ನಿನ್ನ ರಥವನ್ನು ಏನೆಂದು ಭಾವಿಸಿದ್ದೀಯೇ? ಇದು ಸಾಮಾನ್ಯ ರಥವಲ್ಲ. ಸಮಗ್ರ ಭೂಮಂಡಲದಷ್ಟು ಭಾರವುಳ್ಳದ್ದು ಈ ರಥ. ಯಾರಿಗೂ ಎತ್ತಲಾಗದ ಗಾಂಡೀವ ಧನುಸ್ಸಿದೆ. ಧ್ವಜದಲ್ಲಿ ಹನುಮಂತ. ಇವೆಲ್ಲದಕ್ಕಿಂತಲೂ ತ್ರೈಲೋಕ್ಯಧರನಾದ ಸಾರಥಿಯಾದ ನಾನು ಕುಳಿತಿದ್ದೇನೆ. ಇಂತಹ ರಥವನ್ನು ಎರಡಂಗುಲ ದೂಡಿದರೂ ಮಹಾಶ್ಚರ್ಯವೇ ಸರಿ! ಇದಕ್ಕೆ ನನ್ನ ಅಭಿನಂದನೆ ಎಂದ.

ಈ ಕಥೆ ಪ್ರಕೃತಕ್ಕೂ ಅನ್ವಯವಾಗುತ್ತದೆ.

ಕೃತಯುಗ ಒಳ್ಳೆಯ ಯುಗ. ಕೃತಯುಗದಲ್ಲಿ ಪುಣ್ಯ ಕರ್ಮಾಚರಣೆ ಎಂಬುದು ಸಹಜಪ್ರವೃತ್ತಿ. ಎಲ್ಲರೂ ಮಾಡುತ್ತಾರೆ. ಇದೇನು ಮಹತ್ವದ್ದಲ್ಲ. ಆದ್ದರಿಂದ ಕೃತಯುಗದಲ್ಲಿ ಕರ್ಮಾಚರಣೆ ಎಂದರೆ ಕರ್ಣನ ರಥವನ್ನು ಮೈಲುಗಟ್ಟಲೆ ದೂರಕ್ಕೆಸೆದಂತೆ.

ಆದರೆ ಕಲಿಯುಗದಲ್ಲಿ ಸ್ವಲ್ಪ ಧರ್ಮಾಚರಣೆ ಮಾಡಿದರೂ ಸಾಕು. ಇದು ಕರ್ಣನು ಎರಡಂಗುಲ ಸರಿಸಿದ ಅರ್ಜುನನ ರಥದಂತೆ ಬಹಳ ಮಹತ್ವವಾದುದು. ಕರ್ಣನನ್ನು ಮೆಚ್ಚಿದಂತೆ ಸ್ವಲ್ಪ ಧರ್ಮಾಚರಣೆ ಮಾಡಿದರೂ ಅವರನ್ನು ಮೆಚ್ಚುತ್ತಾನೆ. ಇದು ಸಾಕ್ಷಾತ್ ಶ್ರೀಮನ್ನಾರಾಯಣನೇ ಹೇಳಿದ ಮಾತು. ಇದನ್ನರಿತು ಈ ದೇಶದ ಮಕ್ಕಳಾದ ನಾವು ಪ್ರಾಮಾಣಿಕ ಪ್ರಯತ್ನವನ್ನು ನಡೆಸಿ ಭಗವಂತನ ಅನುಗ್ರಹಕ್ಕೆ ಪಾತ್ರನಾಗಬೇಕು.

'ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್'

ಆದರೆ ಇಷ್ಟೆಲ್ಲಾ ತಿಳಿದಿದ್ದರೂ ನನಗೆ ಇರುವ ಧನವನಿತಾದಿ ಮೋಹಗಳಿಂದ ಪುಣ್ಯ ಸಂಪಾದಿಸಲಾಗುತ್ತಿಲ್ಲ. ಹರಿಯೇ! ಜನ್ಮದಲ್ಲಿ ಒಂದು ದಿವಸದ ಮಟ್ಟಿಗಾದರೂ ಆ ವ್ಯಾಮೋಹವನ್ನು ದೂರಮಾಡಿ ನಿನ್ನ ಪಾದಪದ್ಮಗಳಲ್ಲಿ ಭಕ್ತಿಯನ್ನು ಕೊಟ್ಟು ಸಾಧನೆಯನ್ನು ಮಾಡಿಸು.

ರಮೆಯನ್ನು ಬೆರಗುಗೊಳಿದ ಜೀವ

ರಮಯಾಪ್ಯಗಣಯ್ಯವಸ್ತುಜಾತಮ್ |
ದ್ವಿವಿಧಂ ಪ್ರಾಹುರಮಂದಬುದ್ಧಿಭಾಜಃ |
ತವ ಸದ್ಗುಣಜಾತಮೇಕಮನ್ಯನ್ಮಮ-
ದುರ್ವಾರದುರಂತ ಪಾಪಜಾತಮ್ ||೨೨||

ಹರಿಯೇ! ರಮೆಗೂ ಎಣಿಸಲಾಗದ ಪದಾರ್ಥಗಳ ಗುಂಪು ಎರಡು. ಒಂದು ಹರಿಯ ಗುಣ. ಮತ್ತೊಂದು ನನ್ನ ಅನಂತವಾದ ದುರಂತ ಕಾರಣವಾದ ದುರ್ಗುಣ.

ಹರಿಯೇ! ಲಕುಮಿಯ ಬುದ್ಧಿ ಅನಂತಸಮುದ್ರದಂತೆ ಮಿತಿಮೀರಿದ್ದು. ಅಂತಹ ಮಹಾಲಕುಮಿಯೂ ಎಣಿಸಲಾಗದ ಪದಾರ್ಥಗಳೆರಡಿವೆ. ಒಂದು ಹರಿಯ ಗುಣಗಳಾದರೆ ಇನ್ನೊಂದು ನನ್ನ ದುರ್ಗುಣಸ್ತೋಮ. ನಾನು ಲಕುಮಿಯ ಬುದ್ಧಿಗೂ ನಿಲುಕದಷ್ಟು ಪಾಪಕರ್ಮಗಳನ್ನು ಮಾಡಿದ್ದೇನೆ. ಇಲ್ಲಿ ಅತಿಶಯ ಪಾಪಿಯಾದ ಜೀವನನ್ನು ಕಂಡು ಅತಿಶಯವಾಗಿ ಬಣ್ಣಿಸಿದ್ದಾರೆ.

ಅತಿ ಸುಲಭವಯ್ಯ ಶ್ರೀ ಹರಿಪೂಜೆ

ಅತಿ ಸೌಖ್ಯಕರಾಣ್ಯಲಂ ಪರಸ್ತಾತ್
ನ ಹಿ ಕಿಂಚಿತ್ ಶ್ರಮಸಾಧ್ಯಸಾಧನಾನಿ |
ಶ್ರಮಭೀರುರಹಂ ತ್ಯಜನ್ಪರತ್ರಾ-
ಮಿತಶೋಕಾನುಭವೀ ಕಥಂ ಭವಾಮಿ ||೨೩||

ಹರಿಯೇ! ಅಲ್ಪ ಶ್ರಮದಿಂದ ಮಾಡಿ ಮಹತ್ತರವಾದ ಪುಣ್ಯ-ಸುಖಗಳನ್ನು ಗಳಿಸಿಕೊಳ್ಳುವ ಕರ್ಮಗಳನ್ನು ಅಲ್ಪಕಷ್ಟಕ್ಕೆ ಹೆದರಿ ಅನರ್ಥಕ್ಕೀಡಾಗಿದ್ದೇನೆ.

ನಾವು ಬಾಯಾರಿದ್ದೇವೆ. ಕುಡಿಯಲು ನೀರು ಬೇಕಾಗಿದೆ. ಅದರ ಹುಡುಕಾಟದಲ್ಲಿದ್ದೇವೆ. ನಮ್ಮ ಪಕ್ಕದಲ್ಲಿಯೇ ನೀರಿದೆ. ಆದರೆ ಆ ನೀರು ಹುಲ್ಲು

ತರಗಲೆಗಳಿಂದ ಮುಚ್ಚಿಹೋಗಿದೆ. ಅದನ್ನು ನಾವು ಕಾಣುತ್ತಿಲ್ಲ. ದೂರದಲ್ಲಿ ಬಿಸುಲುಗುದುರೆ ಕಾಣಿಸುತ್ತಿದೆ. ದಾಹ ಪರಿಹಾರಕ್ಕಾಗಿ ಮರುಮರೀಚಿಕೆಯನ್ನು ನೀರೆಂದು ಭಾವಿಸಿ ದೌಡಾಯಿಸುತ್ತೇವೆ.

ಅದರಂತೆ ಆನಂದದ ನಿಧಿ ನಮ್ಮಲ್ಲಿಯೇ ಇದೆ. ಸಂಸಾರದ ಆಸೆಗಳೆಂಬ ದಾಹವನ್ನು ತಣಿಸುವ ಅಮೃತರಸದ ಸಮುದ್ರವನ್ನೇ ಹೊಂದಿದ್ದದೇವೆ. ಆದರೂ ಇದಕ್ಕೆ ಅಜ್ಞಾನವೆಂಬ ಬಲೆ ಬೆಸೆದುಕೊಂಡಿದೆ. ಭಗವಂತನ ಸಾಕ್ಷಾತ್ಕಾರದಿಂದ ಈ ಅಜ್ಞಾನದ ಬಲೆ ಹರಿದುಹೋದರೆ ಆನಂದ ಸಾಗರದಲ್ಲಿ ತೇಲಾಡುತ್ತೇವೆ. ಈ ಒಳಗಿನ ಆನಂದದ ಅರಿವಿಲ್ಲದಾಗ ಹೊರಗಡೆ ಆನಂದವಿದೆ ಎಂಬ ಭ್ರಾಂತಿಯಿಂದ ಸಿಕ್ಕಿದ ಕಡೆ ಓಡುತ್ತೇವೆ. ಎಲ್ಲಿಗೆ ಹೋದರೂ ನಿಜಾನಂದ ಪಡೆಯಲಾರೆವು. ಈ ಎಚ್ಚರ ನಮ್ಮಲ್ಲಿ ಇಲ್ಲವಾಗಿದೆ.

ಒಬ್ಬನಿಗೆ ನೀರು ಕಾಯಿಸಲು ಬೆಂಕಿ ಬೇಕಾಯಿತು. ತನ್ನ ಬಳಿ ಬೆಂಕಿ ಹಚ್ಚಲು ಬೆಂಕಿಕಡ್ಡಿ ಇಲ್ಲವೆಂದು ಕಂದೀಲು ಹಿಡಿದುಕೊಂಡು ಪಕ್ಕದ ಮನೆಗೆ ತೆರಳಿದ. ಮಲಗಿದವನನ್ನು ಎಬ್ಬಿಸಿ ಬೆಂಕಿಕಡ್ಡಿ ಕೇಳಿದ. ಎದ್ದವ ಕೇಳಿದ. ಕೈಯಲ್ಲಿಯೇ ಕಂದೀಲು ಹಿಡಿದು ಬೆಂಕಿಗೇಕೆ ಬಂದೆ? ಎಂದು. ಅವನಿಗೆ ಆವಾಗ ಎಚ್ಚರವಾಯಿತು. ಹೋ! ಎಂದು ಹಿಂತಿರುಗಿದ.

ನಮ್ಮ ಸ್ಥಿತಿಯೂ ಹೀಗೆಯೇ ಆಗಿದೆ. ಎಚ್ಚರದಲ್ಲಿದ್ದರೂ ಅಜ್ಞಾನವೆಂಬ ನಿದ್ರೆಯಲ್ಲಿಯೇ ಇದ್ದೇವೆ. ನಮ್ಮಲ್ಲಿಯೇ ಇರುವ ಆನಂದಪ್ರಾಪ್ತಿಗೆ ಯಾರ ಬಳಿಯೂ ಸಾಗಬೇಕಿಲ್ಲ. ಈ ಜ್ಞಾನವಿಲ್ಲದೆ ನೂರೆಂಟು ಬವಣೆ ಪಡುತ್ತಿದ್ದೇವೆ.

ನಮ್ಮ ಬಳಿ ಎಣ್ಣೆಯ ದೀಪವಿದ್ದರೆ ಎಣ್ಣೆಗಾಗಿ ಬೇರೆಡೆ ಸಾಗಬೇಕು. ರತ್ನದ ದೀಪವಿದ್ದರೆ ಎಣ್ಣೆ ಬತ್ತಿ ಕಡ್ಡಿ ಯಾವುದೂ ಬೇಡ. ನಾವೆಲ್ಲರೂ ರತ್ನದ ದೀಪವಿದ್ದಂತೆ. ಇದನ್ನು ಅರಿಯದೆ ಸುಖಕ್ಕಾಗಿ ಬೇರೆಡೆ ವ್ಯರ್ಥವಾಗಿ ಸಂಚರಿಸುತ್ತಿದ್ದೇವೆ. ಪ್ರಹ್ಲಾದನಿಗೆ ಸಂನ್ಯಾಸಿ ಹೇಳಿದ ಮಾತಿದು: ಈ ಜ್ಞಾನವಿಲ್ಲದೆ ವ್ಯರ್ಥ ಸಂಚಾರದಿಂದ ಕೃಶವಾಗಿದ್ದೀರಿ. ನಾನಾದರೊ ನನ್ನೊಳಿರುವ ಹರಿಚಿಂತನೆಯಿಂದ ಆನಂದತುಂದಿಲನಾಗಿದ್ದೇನೆ. ನಮ್ಮೊಳಗೆ ಹರಿಯ ಅರಿವು ಹಿರಿದಾಗಿ ಬೆಳೆದಾಗ, ಪುಷ್ಟರು ಆಗುತ್ತೇವೆ. ತುಷ್ಟರೂ ಆಗುತ್ತೇವೆ ಎಂದ.

ಸಂಸಾರ ನಿರ್ವಹಣೆಗೆ ಹಾಕುವ ಪರಿಶ್ರಮವನ್ನು ದೇವರ ಧ್ಯಾನದಲ್ಲಿ ವಿನಿಯೋಗಿಸಿದರೆ ಮಹಾಸುಖ ದೊರೆಯುತ್ತದೆ.

ಇದನ್ನರಿಯದೆ ತಾತ್ಕಾಲಿಕ ಶ್ರಮವನ್ನು ಕಂಡು ಕರ್ಮಗಳಲ್ಲಿ ಉದಾಸೀನ

ಮಾಡುತ್ತೇವೆ. ಹಸಿವೆಂದು ಉಪವಾಸ ಬಿಡುತ್ತೇವೆ. ಉಪವಾಸದ ಹಸಿವನ್ನು ತಡೆದವಗೆ ಶಾಶ್ವತ ಹಸಿವೆ ತಡೆಯುವ ಉಪಾಯ ದೊರೆಯುತ್ತದೆಂಬುದನ್ನು ಅರಿಯದ ಮೂರ್ಖತನವಿಲ್ಲಿದೆ. ಆಲಸ್ಯದಿಂದ ಹರಿಕಥೆ-ವೇದಾಧ್ಯಯನ-ಗಾಯತ್ರೀಗಳನ್ನು ತೊರೆದು ಬದುಕನ್ನು ಸಾರ್ಥಕಗೊಳಿಸಿಕೊಳ್ಳುತ್ತಿಲ್ಲ. ತಾತ್ಕಾಲಿಕ ಶ್ರಮ ಆಗುತ್ತದೆಂದು ಸತ್ಕರ್ಮಗಳಿಂದ ದೂರ ಉಳಿದರೆ ಪರಲೋಕದಲ್ಲಿ ಅಮಿತವಾದ ದುಃಖಕ್ಕೆ ತುತ್ತಾಗಬೇಕಾಗುತ್ತದೆ.

ನನ್ನಂಥ ಪಾಪಿ ಯಾರಿಲ್ಲ

ಭುವಿ ಯದ್ಯಪಿ ಪಾಪಿನೋ ವಸಂತಿ
ಶ್ರಮಭಾಜಃ ಪುರುಷಾಸ್ತಥಾಪಿ ಕೋಽಪಿ |
ಮಮ ಪಾಪಸಮಾನಪಾಪಕರ್ತಾ
ಪುರುಷೋ ನಾಸ್ತಿ ಹಿ ನಾಸ್ತಿನಾಸ್ತಿನಾಸ್ತಿ ||೨೪||

ಹರಿಯೇ! ಭೂಮಿಯಲ್ಲಿ ಪಾಪಿಗಳು ಶ್ರಮಪಡುತ್ತಿರುವ ಪುರುಷರು ಇರುವುದೇನೋ ನಿಜ. ಆದರೆ ನನ್ನ ಪಾಪಕ್ಕೆ ಸಮಾನ ಪಾಪ ಮಾಡಿದ ಪಾಪಿಗಳು ಹಿಂದೆ, ಮುಂದೆ, ಇಂದು ಯಾರೂ ಇಲ್ಲ. ಇಲ್ಲ. ಇಲ್ಲ. ಇದು ನಿಶ್ಚಯ.

ಪಾಪಗಳ ಪಟ್ಟಿ

ಸ್ನಾನ ಮಾಡದೆ ಅಥವಾ ಮೃತ್ತಿಕಾದಿಗಳ ಲೇಪನವಿಲ್ಲದೆ ಸ್ನಾನ ಮಾಡಿ ದೇವರನ್ನು ಪೂಜಿಸುವುದು. ಸುಮ್ಮನೆ ಮೈಲಿಗೆಯಿಂದ ದೇವಮಂದಿರಕ್ಕೆ ನುಗ್ಗುವುದು. ದೀಪವಿಲ್ಲದೆ ದೇವಾಲಯಕ್ಕೆ ಹೋಗುವುದು. ಕಾಲು ತೊಳೆದುಕೊಳ್ಳದೆ ದೇವಮಂದಿರಕ್ಕೆ ನುಗ್ಗುವುದು. ದೇವರಿಗೆ ಬೆನ್ನು ತೋರುವುದು. ಗೋಮಯ ಲೇಪನ ಮಾಡದ ಜಾಗದಲ್ಲಿ ದೇವರನ್ನಿಟ್ಟು ಪೂಜಿಸುವುದು. ತೊಳೆಯದೆ ಹೂವು ಏರಿಸುವುದು. ತೊಳೆದು ತುಳಸಿ ಏರಿಸುವುದು. ಮಾತನಾಡುತ್ತಾ ದೇವರನ್ನು ಪೂಜಿಸುವುದು. ಗಂಧ ಇಲ್ಲದೆ ಪೂಜಿಸುವುದು. ಘಂಟಾನಾದನ ಮಾಡದಿರುವುದು, ಬಾಯಿಂದ ಊದಿದ ಧೂಪದಿಂದ ಆರತಿ ಬೆಳಗುವುದು. ಸ್ತೋತ್ರ ಮಂತ್ರ ಹೇಳದಿರುವುದು. ಕಾಟಾಚಾರದ ಪೂಜೆ, ಮಲಬಂಧನದಲ್ಲಿ ಪೂಜಿಸುವುದು.

ಅಜೀರ್ಣವಾದಾಗ ಪೂಜಿಸುವುದು. ದೇವಾ ಪೂಜಾ ಸಮಯದಲ್ಲಿ ಜ್ಞಾನಿಗಳು ಬಂದರೂ ಏಳದಿರುವುದು. ಶಾಠ್ಯದಿಂದ ಹರಿಕಥೆ ಕೇಳುವುದು. ಪುರಾಣ-ಪಾಠ ಕೇಳುವಾಗ ತಿನ್ನುವುದು. ಗುರುಗಳಿಗೆ ಸಮಾನವಾದ ಆಸನದಲ್ಲಿ ಕೂಡುವುದು. ಗೃಹಚಿಂತೆ ಲೋಕವಾರ್ತೆಗಳಿಂದ ದಿನಕಳೆದು ವ್ಯರ್ಥ ಮಾಡುವುದು. ಅಶ್ರದ್ಧೆಯಿಂದ ಪುರಾಣ ಪಾಠ ಕೇಳುವುದು. ನಮಸ್ಕಾರ ಮಾಡಿದ ಬಳಿಕ ಧೂಳಿನ ದೇಹವನ್ನು ಝಾಡಿಸಿಕೊಳ್ಳುವುದು. ಒದ್ದೆ ಬಟ್ಟೆಯಿಂದ ದೇವರನ್ನು ಪೂಜಿಸುವುದು. ಏಕಾದಶೀ ಬಿಡುವುದು. ದಶಮೀ ಮೈಥುನ. ಪುರುಷ ಸೂಕ್ತ ಹೇಳದೆ ದೇವರ ಪೂಜೆ ಮುಗಿಸುವುದು.

ಆರಂಭ-ಕೊನೆಗಳಲ್ಲಿ ವಿಷ್ಣುಸಹಸ್ರನಾಮ ಹೇಳದಿರುವುದು. ಹೋಮಿಸದೆ, ಅತಿಥಿಗಳನ್ನು ಪೂಜಿಸದೆ ಊಟ ಮಾಡುವುದು. ಪುಣ್ಯ ಕಾಲದಲ್ಲಿ ದೇವರನ್ನು ಪೂಜಿಸದಿರುವುದು. ತಿಂದುಳಿದಿದ್ದನ್ನು ದೇವರಿಗರ್ಪಿಸುವುದು. ಅನ್ಯದೇವತಾ ನೈವೇದ್ಯ ತಿನ್ನುವುದು. ಹರಿಗೆ ಸ್ಥಾನ ಕೊಡದಿರುವುದು. ಪಂಡಿತನಾಗಿ ಗ್ರಾಮವಾಸಿಯಾಗುವುದು. ಸತ್ಸಂಗ ಬಿಡುವುದು. ಹರಿನಾಮಕ್ಕಿಂತ ಬೇರೆಯಾದ ಹೆಸರುಗಳನ್ನು ಹೇಳುವುದು. ಮಕ್ಕಳಿಗಿಡುವುದು. ನಿತ್ಯ ಸಕಾಮನೆಯಿಂದ ಪೂಜಿಸುವುದು. ದೇವರ ಪಾತ್ರೆ ಅಡಿಗೆ ಪಾತ್ರೆಗಳನ್ನು ಮೇಲನ ಮಾಡುವುದು. ಕುಡಿದ ಲೋಟದಲ್ಲಿ ನೈವೇದ್ಯಕ್ಕೆ ನೀರಿಡುವುದು. ದೇವ ಮಂದಿರದಲ್ಲಿ ಮಲಗುವುದು. ಶಂಖವಿಲ್ಲದೆ ಪೂಜಿಸುವುದು. ದೇವರೆದುರು ಕಾಲು ಚಾಚುವುದು. ತುಳಸೀ ವೃಂದಾವನವಿಲ್ಲದ ಮನೆಯಲ್ಲಿ ವಾಸಿಸುವುದು. ವ್ರತಗಳನ್ನು ಬಿಡುವುದು. ತುಲಾ-ಮಕರ-ಮೇಷರಾಶಿಗಳಲ್ಲಿ ಸೂರ್ಯನು ಸಂಚರಿಸುವಾಗ ಪ್ರಾತಃ ಕಾಲದ ಸ್ನಾನ ಬಿಡುವುದು. ಪೂಜೆಯ ಕೊನೆಯಲ್ಲಿ ದೇವರಿಗೆ ಮುಖವಸ್ತ್ರ ಸಮರ್ಪಿಸದಿರುವುದು. ಬ್ರಹ್ಮಪಾರ ಸ್ತೋತ್ರವನ್ನು ಪಠಿಸದಿರುವುದು. ಇದು ಶತಾಪರಾಧ ತುಲ್ಯವೆನಿಸಿವೆ. ತಿಳಿದ ಮೇಲೆ ಹರಿಪ್ರೀತಿ ಕಾಮನೆ ಇದ್ದವರೂ ಇಷ್ಟು ಅಪರಾಧಗಳನ್ನು ಮಾಡುವುದು ಬಿಡಬೇಕು.

ಇದಲ್ಲದೆ ಸ್ತ್ರೀವಧೆ-ಬ್ರಾಹ್ಮಣವಧೆ-ಗೋವಧೆಗೆ ತುಲ್ಯವಾದ ನೂರಾರು ಪಾಪಗಳು ಕ್ಷಣಕ್ಷಣವೂ ನಡೆಯುತ್ತಿರುತ್ತವೆ. ಮಾನಸಿಕ, ದೈಹಿಕ, ಕಾಲಿಕವಾದ ಅನಂತಪಾಪಗಳ ಖನಿನಾನು ನನ್ನಂಥಹ ಪಾಪಿಷ್ಠ ಮತ್ತೊಬ್ಬನಿಲ್ಲ. ನಿನ್ನಂಥಹ ಕರುಣಾಳು ಮತ್ತೊಬ್ಬರಿಲ್ಲ ಎಂಬ ಭಿನ್ನಹದ ಪ್ರಾರ್ಥನೆಯನ್ನು ದೇವರ ಬಳಿ ನಿತ್ಯ ಸಲ್ಲಿಸುತ್ತಿರಬೇಕು. ಅಸದೃಶ ಕಡುಪಾಪಿ ನಾನು ಎಂಬ ಎಚ್ಚರ ಸರ್ವದಾ ಇರಬೇಕು.

ಗುರು ನಮನ-ಹೀನ ನಾನು

ನತಯೋ ನ ಕೃತಾಃ ಪ್ರದಕ್ಷಿಣಾಶ್ಚ
ಸ್ತುತಯೋಽಪಿ ಧ್ರುವಮಂತರೇಣ ದಂಭಃ |
ನ ಗುರುಃ ಪರಿಸೇವಿತಃ ಸುಭಕ್ತ್ಯಾ
ಶುಭಶಾಸ್ತ್ರಶ್ರವಣಂ ಕಥಂ ತತಃ ಸ್ಯಾತ್ ||೨೫||

ಹರಿಯೇ ! ದಂಭವಿಲ್ಲದೆ ನಾನೆಂದೂ ನಮಿಸಲಿಲ್ಲ. ಪ್ರದಕ್ಷಿಣೆಗಳನ್ನೂ ಮಾಡಲಿಲ್ಲ. ನಿಷ್ಕಪಟ ಭಕ್ತಿಯಿಂದ ಗುರುಸೇವೆಯನ್ನೂ ಮಾಡಲಿಲ್ಲ. ಹೀಗಿರಲು ಸಚ್ಛಾಸ್ತ್ರ ಶ್ರಾವಣವಾದರೂ ಹೇಗಾದೀತು?!

ಹರಿಮಂದಿರದಲ್ಲಿ ನಲಿದು ಚಪ್ಪಾಳೆ ತಟ್ಟಿ ನಮಸ್ಕಾರಾದಿಗಳನ್ನು ಮಾಡಿದರೆ ಅನಂತ ಜನ್ಮಗಳ ಪಾಪನಾಶವಾಗುತ್ತಿತ್ತು. ಅದನ್ನೆಂದು ಲಜ್ಜೆಯಿಂದ ಮಾಡಲೇ ಇಲ್ಲ. ಮಾಡಿದರೂ ಕಪಟಕ್ಕಾಗಿ ಮಾಡುವ ಕಡುಪಾಪಿ ನಾನು. ಜತೆಗೆ ಎಂದಿಗೂ ಅತ್ಯಂತ ಪ್ರಧಾನವೆನಿಸಿದ ಗುರು ಸೇವೆಯನ್ನು ನಿರ್ವಂಚನೆಯಿಂದ ಮಾಡಲೇ ಇಲ್ಲ. ಹರಿಯು ಸಿಟ್ಟಾದರೂ ಗುರುವನ್ನು ಒಲಿಸಿಕೊಂಡಿದ್ದರೆ ಹರಿ ಒಲೆಯುವನೆಂದಿದೆ. ಅಂತಹ ಗುರು ಸೇವೆ ಬ್ರಾಹ್ಮಣಾರಾಧನೆಯನ್ನೆಂದಿಗೂ ನಾನು ಮಾಡಲಿಲ್ಲ.

ಶ್ರೀಮನ್ನಾರಾಯಣನೇ ಈ ಮಾತನ್ನು ಹೇಳುತ್ತಾನೆ.

ಯದಾ ದೇವೇಷು ವೇದೇಷು ಗೋಷು ವಿಪ್ರೇಷು ಸಾಧುಷು
ಧರ್ಮೇ ಮಯಿ ಚ ವಿದ್ವೇಷಃ ಸ ವಾ ಆಶು ವಿನಶ್ಯತಿ || (ಭಾಗವತ ೭)

ದೇವತೆಗಳಿಗೆ ವೇದಗಳಿಗೆ ಗೋವು-ಬ್ರಾಹ್ಮಣ-ಸಾಧುಗಳಿಗೆ ಧರ್ಮಕ್ಕೆ ದೇವರಿಗೆ ಅಪಚಾರ ಎಸಗಿದವರು ಕೂಡಲೇ ನಾಶ ಹೊಂದುತ್ತಾರೆ ಎನ್ನುತ್ತದೆ ಭಾಗವತ. ಆದ್ದರಿಂದ ಬ್ರಾಹ್ಮಣರ ಸಹವಾಸ ಅಗ್ನಿಯ ಸಹವಾಸವಿದ್ದ ಹಾಗೆ. ಸ್ವಲ್ಪ ಬ್ರಾಹ್ಮಣರನ್ನು ಅಲಕ್ಷಿಸಿದರೂ ಅವರ ಕ್ರೋಧಾಗ್ನಿ ನಮ್ಮ ಬದುಕನ್ನೇ ಭಸ್ಮ ಮಾಡೀತು? ಅಗಸ್ತ್ಯರ ಕ್ರೋಧ ಸಮುದ್ರವನ್ನೇ ಒಣಗಿಸಿದರೆ; ಋಷಿ ಬ್ರಾಹ್ಮಣರ ಕ್ರೋಧ ದಂಡಕಾರಣ್ಯದಲ್ಲಿ ಜ್ವಲಿಸುತ್ತಿದೆ. ದೇವೇಂದ್ರನ ಪದವಿಯೇ ಇರಲಿ ರಾಜಾಧಿರಾಜನಾಗಿಯೇ ಇರಲಿ ಬ್ರಾಹ್ಮಣರ ಕ್ರೋಧದ ಮುಂದೆ ಎಲ್ಲವೂ ಬಾಡಿದ ತರಗೆಲೆಗಳಂತಾಗುತ್ತಾರೆ.

ಕ್ಷತ್ರಿಯಂ ಚೈವ ಸರ್ಪಂ ಚ ಬ್ರಾಹ್ಮಣಂ ಚ ಬಹುಶ್ರುತಮ್ |
ನಾವಮನ್ಯೇತ ವೈ ಭೂಷ್ಣುಃ ಕೃಶಾನಪಿ ಕದಾಚನ ||
ಏತತ್ರಯಂ ಹಿ ಪುರುಷಂ ನಿರ್ದಹೇದವಮಾನಿತಮ್ |
ತಸ್ಮಾದೇತತ್ರಯಂ ನಿತ್ಯಂ ನಾವಮನ್ಯೇತ ಬುದ್ಧಿಮಾನ್ ||

(ಮನುಸ್ಮೃತಿ)

ಬ್ರಾಹ್ಮಣರ ಕ್ರೋಧಕ್ಕೆ ಹೆದರಿದ ಯಮನೂ ತನ್ನ ಭಾರ್ಯೆಯ ಬಳಿ ಹೇಳುವ ಮಾತು ಕಾಠಕೋಪನಿಷತ್ತಿನಲ್ಲಿಯೇ ಪ್ರಸಿದ್ಧವಾಗಿದೆ.

ವೈಶ್ವಾನರಃ ಪ್ರವಿಶತ್ಯತಿಥಿರ್ಬ್ರಾಹ್ಮಣೋ ಗೃಹಾನ್ |
ತಸ್ಯೈತಾಂ ಶಾಂತಿಂ ಕುರ್ವಂತಿ ಹರ ವೈವಸ್ವತೋದಕಮ್ ||

ಅತಿಥಿಯು ಮನೆಗೆ ಬೆಂಕಿಯಂತೆ ಪ್ರವೇಶಿಸುತ್ತಾನೆ. ಬೆಂಕಿಯನ್ನು ಅಲಕ್ಷಿಸಿದರೆ ಮನೆಯನ್ನೇ ಬೂದಿಯನ್ನಾಗಿಸೀತು. ಅದರಂತೆ ಬೆಂಕಿಗೆ ಸಮಾನರಾದ ಅತಿಥಿ ಅಭ್ಯಾಗತ ಬ್ರಾಹ್ಮಣರನ್ನು ಎಂದಿಗೂ ಸ್ವಲ್ಪವೂ ಅಲಕ್ಷಿಸದೆ ಉಪಚರಿಸಬೇಕು.

ಆದರೆ ಬ್ರಾಹ್ಮಣರನ್ನಾಗಲೀ ಗುರುಗಳನ್ನಾಗಲೀ ಸೇವಿಸಿ ಒಲಿಸಿಕೊಂಡವನು ನಾನಲ್ಲ. ಹೀಗಿರಲು ನನ್ನ ಪಾಲಿಗೆ ಸಚ್ಛಾಸ್ತ್ರಶ್ರವಣವಾದರೂ ಹೇಗಾದೀತು?

ಹರಿಮುಕುಂದನೇ ಕೊನೆಗೊಂದು ಮಾತು

ವಚನೈರ್ಬಹುಭಿರ್ಮುಕುಂದ ಕಿಂ ತೇ
ಶೃಣು ಮೇ ಬೀಜವಚೋ ವದಾಮಿ ತುಭ್ಯಮ್ |
ಭುವನತ್ರಯಸಂಸ್ಥಿತಾನಿ ಯಾನೀ -
ಶ್ವರ ಪಾಪಾನಿ ವಸಂತಿ ಮಯ್ಯಯೋಗ್ಯೇ ||೨೬||

ಹೇ ಮುಕುಂದ! ಹೆಚ್ಚೇನು ಹೇಳಲಿ! ಸಾರಭೂತವಾದ ಒಂದು ಮಾತನ್ನು ಕೇಳು. "ಮೂರು ಲೋಕದಲ್ಲಿರುವ ಹೀನ ಪಾಪಗಳೆಲ್ಲವೂ ಅಯೋಗ್ಯನಾದ ನನ್ನಲ್ಲಿ ನೆಲೆಗೊಂಡಿವೆ!! ಇನ್ನೇನು ಹೇಳಲಿ!!

ಹರಿಯೇ ನನ್ನ ಪರಿಚಯ ನನಗೆ ಚೆನ್ನಾಗಿ ಇದೆ. ಹತ್ತಾರು ಮಾತುಗಳಿಂದ ನಿನ್ನ ಬಳಿ ಹೇಳಲು ಹೋಗೆನು. **ಒಂದೇ ಮಾತಿನಲ್ಲಿ** ನನ್ನ ಸ್ವರೂಪವನ್ನು ಅರುಹುವುದಾದರೆ; ಲೋಕದಲ್ಲಿ ಎಲ್ಲೆಲ್ಲಿ ಯಾವ ಯಾವ ಪಾಪಗಳಿವೆಯೋ ಅಂತಹ ಎಲ್ಲ ಪಾಪಗಳೂ ಅಯೋಗ್ಯನಾದ ನನ್ನಲ್ಲಿ ನೆಲೆ ಮಾಡಿಕೊಂಡಿವೆ.

ನಿನ್ನ ಕ್ಷಣ ಕರುಣೆಯ ಹರಿಸೋ!!

ಪ್ರಕೃತ್ಯೈಸ್ತದಘೈಶ್ಚ ಕೃಷ್ಣಮುಕ್ತಿ-
ರ್ನ ಭವೇತ್ಕೈರಪಿ ತೇ ದಯಾಂ ವಿನಾಽದ್ಯ |
ಕರುಣಾಂ ಕುರು ಮಯ್ಯತೋ ದಯಾಲೋ
ನತಯಸ್ತೇ ಕಮಲೇಶ ಸಂತ್ವನಂತಾಃ ||೨೭||

ಕೃಷ್ಣ! ದಯಾಮಯನೇ! ಇಂದಿರೇಶನೇ! ನಿನ್ನ ಕರುಣೆಯ ಹೊರತಾಗಿ ನನ್ನ ಪಾಪ ಪರ್ವತವನ್ನು ನಾಶಗೈವ ಉಪಾಯಗಳ್ಯಾವೂ ಇಲ್ಲ. ಅದಕ್ಕಾಗಿ ಕರುಣೆದೋರು. ನಿನಗೆ ಅನಂತ ನಮನಗಳು. ನನ್ನಂತಹ ಪಾಪಿಯ ಬಂಧನ ಬಿಡಿಸುವ ಶಕ್ತಿ ಯಾರಿಗೂ ಇಲ್ಲ. ಆದರೆ ಅಂತಹ ಪಾಪಗಳನ್ನು ಕ್ಷಣಮಾತ್ರದಲ್ಲಿ ಧೂಳೀಪಟವನ್ನಾಗಿಸುವ ಶಕ್ತಿ ನಿನ್ನ ನಾಮಕ್ಕಿದೆ. ಅಂತಹ ನಾಮಗಳನ್ನು ನನ್ನ ವದನದಲ್ಲಿ ನುಡಿಸಿ ನೀನೇ ನನ್ನನ್ನು ಉದ್ಧರಿಸಬೇಕು.

"ತಾಕಲಿಲ್ಲದ ಟೋಣಪೆಯ ತಾಕಿಸಿ ಸದ್ಗತಿಯನು ಈಯಬೇಕು ಪುರಂದರ ವಿಟ್ಠಲರಾಯ".

ಇಂತಹ ನಿನಗೆ ನನ್ನ ನಮನಗಳನ್ನಲ್ಲದೆ ಮತ್ತೇನು ಹೇಳಲಿ.

ಅಂಧೋಽಹಂ ಕರುಣಾಸಿಂಧೋ
ವೀಕ್ಷೇ ನ ಕ್ಷೇಮ ಪದ್ಧತಿಮ್ |
ಇಂದಿರೇಶ ಕರಂ ಗೃಹ್ಣನ್ |
ವರ್ತಯಾನಿಂದ್ಯ ವರ್ತ್ಮನಿ ||

ಹರಿಯೇ! ನಾನೊಬ್ಬ ಕುರುಡ! ಈ ಕುರುಡನನ್ನು ಉದ್ಧರಿಸುವ ಬಲ-ಕರುಣೆ-ಎರಡೂ ನಿನ್ನಲ್ಲಿದೆ. ನನಗೆ ನನ್ನ ಒಳಿತಿನ ಮಾರ್ಗ ಯಾವುದೆಂದು ತಿಳಿಯದಾಗಿದೆ. ತಿಳಿವಿನ ಹಾದಿಯಲ್ಲಿ ನಡೆಯುವಂತೆ ತಿಳಿ ಹೇಳಿ ಕೈಹಿಡಿದು ಸರಿಯಾಗಿ ನಡೆಸೋ ಹರಿಮುಕುಂದನೇ!" ಎಂದು ಹರಿಯಲ್ಲಿ ವಿನಯ ಭಕ್ತಿಯಿಂದ ತಲೆಬಾಗಿ ಪ್ರಾರ್ಥಿಸಲೊಂದೇ ಜೀವನಿಗೆ ಸಾಧ್ಯ. ಇದನ್ನೂ ಮಾಡದವ ಬಲಿಹಿಂಬುಧಿಯ ಪಾರವನ್ನು ಸಹಸ್ರಾರು ಸಾಧನಗಳಿಂದ ಸಾಸಿರವರ್ಷ ಸಾಹಸಪಟ್ಟರೂ ದಾಟಲಾರ.

ಪಾಪ ಬಿಡುಗಡೆಗಿದೇ ಉಪಾಯ

ವಿಜಯೀಂದ್ರಯತೀಶ್ವರೋ ವ್ಯತಾನೀತ್
ಸ್ತುತಿಮೇತಾಂ ದುರಿತಾಪಹಾಂ ಮುರಾರೇಃ |
ಪರಮಾದರತಃ ಸದಾ ಪಠೇದ್ಯೋ
ನಿಖಿಲೈಃ ಪಾಪಚಯೈರ್ಭವೇತ್ಸ ಮುಕ್ತಃ ||

ಪಾಪತರಿವ ಹರಿಯ ತುತಿಯನ್ನು ವಿಜಯೀಂದ್ರಯತಿರಾಜರು ಹೊಸೆದರು. ಇದನ್ನು ಪರಮಭಕ್ತಿಯಿಂದ ಪಠಿಪನರನು ನಿಖಿಲ ಪಾಪಪ್ರಚಯುಗಳಿಂದ ಮುಕ್ತನಾಗುವನು.

ವಿಜಯೀಂದ್ರ ಕೃತಾಮೇತಾಂ ಸ್ತುತಿಂ ಮಂದೋಽಲ್ಪಬುದ್ಧಿಮಾನ್|
ಪಠಿತ್ವಾ ಪಾರಗೋ ಭೂತ್ವಾ ಹರಿಂ ಪಶ್ಯತಿ ಸರ್ವದಾ ||
ನಶ್ಯಂತ್ಯೇವ ನ ಸಂದೇಹೋ ಸರ್ವಪಾಪಾನಿ ತತ್ಕ್ಷಣಾತ್ |
ತಸ್ಮಾತ್ ಸುಕೃತಿನಃ ಸಂತಃ ಪಠತ್ವೈತನ್ಮುದಾ ಸದಾ ||

ಇಲ್ಲಿಗೆ ಶ್ರೀಶ್ರೀ ವಿಜಯೀಂದ್ರತೀರ್ಥರಿಂದ ರಚಿತವಾದ ದುರಿತಾಪಹಾರ ಅಥವಾ ಪಾಪವಿಮೋಚನ ಸ್ತೋತ್ರದ ಕನ್ನಡಾ ನುವಾದವು ಶ್ರೀಮಧ್ವೇಶಕೃಷ್ಣನಿಗರ್ಪಿತವಾಯಿತು.

* * * * *